# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಡಿಸೆಂಬರ್, ೨೦೧೫

ಸಂಪಾದಕ : ಡಿ.ಎಸ್.ನಾಗಭೂಷಣ

ಸಂಪುಟ: ೫ ಸಂಚಿಕೆ: ೫

**ಚಂದಾ :** ರೂ. ೧೪೦/-(ಡಿಸೆಂಬರ್, ೨೦೧೫-ಆಗಸ್ಟ್, ೨೦೧೬) ಬಿಡಿ ಪ್ರತಿ: ರೂ. ೨೦/- ಪುಟ: ೨೦



**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೭ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಅಂತೂ ಬಿಹಾರದಲ್ಲಿ ಚುನಾವಣೆಯೆಂಬ ಒಂದೂವರೆ ತಿಂಗಳ ಗಜಪ್ರಸವ ಸುಗಮವಾಗಿ ಮುಗಿದಿದೆ. ಹೊಸ ಸರ್ಕಾರವೂ ರಚಿತವಾಗಿದೆ. ನಿತೀಶ್ ಕುಮಾರ್ ಅವರ ಎರಡು ಅವಧಿಗಳ ಆಡಳಿತವನ್ನು ಜನ ಮೆಚ್ಚಿದ್ದರ ಪ್ರತೀಕವಾಗಿ ಅವರು ಮೂರನೇ ಅವಧಿಗೆ ಮುಖ್ಯಮಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಸಂಘ ಪರಿವಾರದ ಕೆಲ ಶಕ್ತಿಗಳ ಮತೀಯ ಧೃವೀಕರಣದ ಹಲವು ತೆರನ ದುಷ್ಟ ಹುನ್ನಾರಗಳ ಹಿಮ್ಮೇಳದಲ್ಲಿ ನಡೆದ ಮೋದಿಯವರ 'ಅಭಿವೃದ್ಧಿ'ಯ ಹಾಹಾಕಾರಕ್ಕೆ ಕಿವಿಗೊಡದ ಬಿಹಾರದ ಜನತೆ ನಿತೀಶ್ ನೇತೃತ್ವದ ಮಹಾಮೈತ್ರಿ ಕೂಟಕ್ಕೆ ಅಭೂತಪೂರ್ವ ಬೆಂಬಲವನ್ನು ಸಾರಿ ಹೇಳಿದೆ. ಉಸಿರು ಬಿಗಿಹಿಡಿದು ಈ ಚುನಾವಣೆಗಳನ್ನು ದಿಟ್ಟಿಸುತ್ತಿದ್ದ ದೇಶದ ಶಾಂತಿಪ್ರಿಯ ಪ್ರಜಾಸತ್ತಾತ್ಮಕ ಜನತೆ ಭಾರಿ ನಿಟ್ಟಿಸಿರುಬಿಟ್ಟಿದೆ. ೨೦೧೪ರ ಲೋಕಸಭಾ ಚುನಾವಣೆಗಳಲ್ಲಿ ಧೂಳೆಬ್ಬಿಸುತ್ತಾ ಹೊರಟ ಮೋದಿಯವರ ದಿಗ್ವಿಜಯ ಯಾತ್ರೆಯನ್ನು-ದೆಹಲಿಯಲ್ಲಿ ಒಮ್ಮೆ ಮುಗ್ಗರಿಸಿತ್ತಾದರೂ- ನಿರ್ಣಾಯಕವಾಗಿ ತಡೆ ಹಿಡಿಯಲಾಗಿದೆ. ಕೇವಲ ಒಂದೂವರೆ ವರ್ಷದ ಹಿಂದೆ ಅಭೇಧ್ಯವೆನಿಸಿದ್ದ ಬಿಜೆಪಿ ಕೋಟೆಯಲ್ಲಿ ಈಗ ಬಿರುಕುಗಳು ಕಾಣಲಾರಂಭಿಸಿವೆ.

ಇದಕ್ಕೆ ನಿತೀಶ್‌ರ ಒಂದು ದಶಕದ ಜನಪರ ಆಡಳಿತ ಎಷ್ಟು ಕಾರಣವೋ ಮೋದಿ ಸರ್ಕಾರದ ಈವರೆಗಿನ ನಿರಾಶಾದಾಯಕ ಆಡಳಿತವೂ ಅಷ್ಟೇ ಕಾರಣವಾಗಿದೆ. ಭರವಸೆ ನೀಡಿದ್ದ 'ಅಚ್ಚೇ ದಿನ'ಗಳ ಬದಲಿಗೆ, ದೇಶದ್ಯಾಂತ ಅವರ ಹಲವು ಮಂತ್ರಿಗಳೂ ಸೇರಿದಂತೆ ಅವರ ಪಕ್ಷದ ಪುಂಡು ಪಡೆಗಳು ಹಚ್ಚಿದ ವೈವಿಧ್ಯಮಯ ಮತೀಯ ಕಿಚ್ಚಿನ ಪರಿಣಾಮಗಳನ್ನು ಅರ್ಥಮಾಡಿಕೊಂಡ ಬಿಹಾರದ ಜನತೆ ತನ್ನೀ ತೀರ್ಪು ನೀಡಿದೆ. ನಿವಾಸಿ ಭಾರತೀಯರಿಂದ ಆಯ್ಕೆಯಾಗಿರುವ ಅನಿವಾಸಿ ಭಾರತೀಯರ ಪ್ರಧಾನ ಮಂತ್ರಿಯಂತೆ ಕಾಣತೊಡಗಿರುವ ಮೋದಿಯವರು ತಮ್ಮ ನಿರಂತರ ವಿದೇಶ ಪ್ರವಾಸಗಳ ಮಧ್ಯೆಯೇ ತಮ್ಮ ಜನಪ್ರಿಯತೆ ಮತ್ತು ಆಡಳಿತ ದಕ್ಷತೆಯನ್ನು ಪಣಕ್ಕೊಡ್ಡಿ ನಡೆಸಿದ ಬಿರುಸಿನ ಚುನಾವಣಾ ಪ್ರಚಾರ-ಕೊನೆಯ ಘಟ್ಟಗಳಲ್ಲಿ ಸೋಲಿನ ಸೂಚನೆಯ ಆತಂಕದಿಂದಾಗಿಯೋ ಏನೋ-ದೇಶದ ಪ್ರಧಾನ ಮಂತ್ರಿಯೊಬ್ಬರ ರಾಜಕೀಯ ಘನತೆಗೇ ಕುಂದು ತರುವ ಮಟ್ಟಕ್ಕೆ ಇಳಿದುಬಿಟ್ಟಿತ್ತು.

ವಿರೋಧಿ ಮೈತ್ರಿಕೂಟವನ್ನು ಜಾತಿ ಶಕ್ತಿಗಳ ಕೂಟವೆಂದು ಟೀಕಿಸುತ್ತಲೇ, ತಮ್ಮನ್ನು ಹಿಂದುಳಿದ ಜಾತಿಗೆ ಸೇರಿದ ನಾಯಕನೆಂದು ಪ್ರತಿಬಿಂಬಿಸಿಕೊಳ್ಳಲು ಮುಂದಾದ ಅವರು ಮುಸ್ಲಿಮರಿಗೆ ಮೀಸಲಾತಿ ನೀಡಿದರೆ ಹಿಂದುಳಿದ ಜಾತಿಗಳ ಮೀಸಲಾತಿಗೆ ಕುತ್ತೊದಗುತ್ತದೆ ಎಂಬ ಹುಸಿ ಬೆದರಿಕೆಯ ಅಸ್ತ್ರವನ್ನೂ ಬಳಸಿದರು. ಇದೇ ಬಿಹಾರದ ಜನತೆ ಒಂದೂವರೆ ವರ್ಷಗಳ ಹಿಂದಷ್ಟೇ ರಾಷ್ಟ್ರದ ನಾಯಕತ್ವಕ್ಕಾಗಿ ನಿಸ್ಸಂದಿಗ್ಧವಾಗಿ ತನ್ನನ್ನು ಬೆಂಬಲಿಸಿತ್ತು ಎಂಬುದನ್ನೇ ಮರೆತಂತೆ ತೋರಿದ ಮೋದಿಯವರು ಇಲ್ಲಿ ತಮ್ಮ ಪಕ್ಷದ ಅಧ್ಯಕ್ಷ ಅಮಿತ್ ಷಾ ಎಂಬ ಅಗ್ಗದ ರಾಜಕಾರಣಿಯ ವಶಕ್ಕೆ ಒಳಗಾದವರಂತೆ ತೋರಿ ನಿರಾಶೆ ಹುಟ್ಟಿಸಿದರು. ಅದರ ಫಲವನ್ನು ಅವರು ಉಂಡಿದ್ದಾರೆ.

ಇನ್ನು ನಿತೀಶ್ ಕುಮಾರ್ ನೇತೃತ್ವದ ಮಹಾಮೈತ್ರಿ ಕೂಟದ ಪರವಾದ ಫಲಿತಾಂಶಗಳು ಕಣ್ಣಿಗೆ ಹೊಡೆಯುವಂತಿದ್ದರೂ, ಅದರೊಳಗೇ ಅಪಾಯದ ಬೀಜಗಳೂ ಎದ್ದುಕಾಣುತ್ತಿವೆ. ಮೊದಲಾಗಿ ಕಾಂಗ್ರೆಸ್ಸಿನ ಮೈತ್ರಿ ಅದರ ಇತಿಹಾಸವೇ ಸೂಚಿಸುವಂತೆ ಯಾವಾಗಲೂ ಸಂಶಯಾಸ್ಪದವೇ. ಅದಕ್ಕಿಂತ ದೊಡ್ಡ ಅಪಾಯವೆಂದರೆ, ನಿತೀಶ್‌ಗೆ ಅನಿವಾರ್ಯ ಮಿತ್ರನಾಗಿ ಪರಿಣಮಿಸಿದ ಲಾಲೂಪ್ರಸಾದ್ ಯಾದವ್ ಅವರ ರಾಷ್ಟ್ರೀಯ ಜನತಾದಳ ಚುನಾವಣೆಗಳಲ್ಲಿ ನಿತೀಶರ ಸಂಯುಕ್ತ ಜನತಾದಳಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಗಳಿಸಿ ಸರ್ಕಾರದ ಮೇಲೆ ಆಂತರಿಕ ಹಿಡಿತ ಸಾಧಿಸುವ ಸಾಧ್ಯತೆ ಇರುವುದು. ಮುಖ್ಯಮಂತ್ರಿಯಾಗಿ ತನ್ನ ಈ ಹಿಂದಿನ ಮೂರು ಅವಧಿಗಳ ದುರಾಡಳಿತದ ಫಲವಾಗಿ ಸತತವಾಗಿ ಎರಡು ಚುನಾವಣೆಗಳಲ್ಲಿ ಸೋತು ಮತ್ತು ಮೇವಿನ



ಹಗರಣದಲ್ಲಿ ಸಿಕ್ಕಿಕೊಂಡು ಸೆರೆಮನೆಗೂ ಹೋಗಿ ಚುನಾವಣೆಗಳಿಂದ ಹತ್ತು ವರ್ಷ ಬಹಿಷ್ಕೃತನಾಗಿ ಬುದ್ಧಿ ಕಲಿತಿರಬೇಕೆಂದು ಭಾವಿಸಿದ್ದ ಜನತೆಯ ಭಾವನೆಗೆ ವಿರುದ್ಧವಾಗಿ ಲಾಲೂ ತನ್ನ ಇಬ್ಬರು ಅನನುಭವಿ ಮಕ್ಕಳನ್ನು ಈ ಸರ್ಕಾರದಲ್ಲಿ ಮಂತ್ರಿಗಳನ್ನಾಗಿ ಮಾಡಿರುವುದಲ್ಲದೆ ಅವರಲ್ಲಿ ಒಬ್ಬನನ್ನು ಉಪ ಮುಖ್ಯಮಂತ್ರಿ ಸ್ಥಾನದಲ್ಲೂ ಕೂರಿಸಿದ್ದಾರೆ.

ನಿತೀಶ್ ಮತ್ತು ಲಾಲೂ ಇಬ್ಬರೂ ಲೋಹಿಯಾರ ಸಮಾಜವಾದಿ ಮತ್ತು ಜಯಪ್ರಕಾಶರ ಸರ್ವೋದಯ ವಿಚಾರಗಳಿಂದ ಪ್ರಭಾವಿತರಾಗಿ ರಾಜಕಾರಣ ಪ್ರವೇಶಿಸಿದವರಾದರೂ, ವ್ಯತ್ಯಾಸಗಳು ಇರುವುದು ಇಲ್ಲೇ. ಲೋಹಿಯಾ ಅವರ ಜಾತಿ ನೀತಿ ಹಿಂದುಳಿದ ಜಾತಿಗಳ ಪರವಾಗಿದ್ದಂತೆ ತೋರಿದರೂ ಅದರ ಆತ್ಯಂತಿಕ ಉದ್ದೇಶ ಜಾತಿಮುಕ್ತ ಸಮಾಜವೇ ಆಗಿದೆ. ಲಾಲೂ, ಮುಲಾಯಂ ಅಂತಹವರು ಈ ಜಾತಿ ನೀತಿಯನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡು ಸಮಾಜವಾದ ಎಂದರೆ ಹಿಂದುಳಿದ ಜಾತಿವಾದವಲ್ಲದೆ ಮತ್ತೇನೂ ಅಲ್ಲವೆಂಬಂತೆ ಬಿಂಬಿಸುತ್ತಾ ತಮ್ಮ ಕುಟುಂಬ ರಾಜಕಾರಣವನ್ನು ಪೋಷಿಸಿಕೊಂಡು ಸಮಾಜವಾದಕ್ಕೇ ಕೆಟ್ಟ ಹೆಸರು ತಂದಿದ್ದಾರೆ. ಆದರೆ ಹಿಂದುಳಿದ ಜಾತಿಯೊಂದಕ್ಕೆ-ಅದೂ ಅತಿ ಕಡಿಮೆ ಜನಸಂಖ್ಯೆಯದು- ಸೇರಿದ್ದರೂ ಸಮಾಜವಾದದ ಜಾತಿ ನೀತಿಯ ಅಂತಿಮ ಗುರಿ ಮಹಿಳೆ ಮತ್ತು ಮುಸ್ಲಿಮರೂ ಸೇರಿದಂತೆ ಎಲ್ಲ ದಮನಿತ ಜಾತಿಗಳ ಮತ್ತು ಬಡ ವರ್ಗಗಳ ಪರವಾದ ಸಮಗ್ರ ಸಾಮಾಜಿಕ ನ್ಯಾಯವೇ ಆಗಿದೆ ಎಂಬ ತಿಳುವಳಿಕೆಯೊಂದಿಗೆ ಎಲ್ಲ ಜಾತಿ-ವರ್ಗಗಳ ವಿಶ್ವಾಸ ಪಡೆದು ಜನಪ್ರಿಯ ನಾಯಕರಾಗಿ ಮೂಡಿದ ನಿತೀಶ್, ಆ ಕಾರಣದಿಂದಲೇ ತಮ್ಮ ಮುಖ್ಯಮಂತ್ರಿತ್ವದ ಎರಡೂ ಅವಧಿಗಳಲ್ಲಿ ರಾಷ್ಟ್ರದಲ್ಲೇ ದಾಖಲೆಯ ಪ್ರಗತಿದರವನ್ನು ಸಾಧಿಸಲು ಸಾಧ್ಯವಾಯಿತು. ಈ ಸಾಧ್ಯತೆಯೇ ಅವರನ್ನು ಈಗಲೂ ಲಾಲೂ ಒಡ್ಡಬಹುದಾದ ಅಪಾಯದಿಂದ ಪಾರುಮಾಡಬಲ್ಲುದು ಎಂದು ಆಶಿಸಬಹುದಾಗಿದೆ. ನಿತೀಶ್‌ಗೆ ನಮ್ಮ ಶುಭಾಶಯಗಳು!!

ಇನ್ನು ಇದೇ ಸಮಾಜವಾದದ ಹಿನ್ನೆಲೆಯ ಹೆಮ್ಮೆಯನ್ನು ಹೇಳಿಕೊಳ್ಳುವ ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ನೋಡಿ. ತಮ್ಮ ಸರ್ಕಾರದ ಎಲ್ಲ ನೇಮಕಾತಿಗಳನ್ನೂ – ಅವು ಕೆಪಿಎಸ್ಸಿ ಸದಸ್ಯರದ್ದೇ ಆಗಿರಲಿ, ಹೊಸ ಅಡ್ವೊಕೇಟ್ ಜನರಲ್ಲದ್ದೇ ಆಗಿರಲಿ ಅಥವಾ ಸರ್ಕಾರದ ಹೊಸ ದಂಡಪಿಂಡಗಳೆನಿಸಿರುವ ಹತ್ತು ಜನ ಹೊಸ ಸಂಸದೀಯ ಕಾರ್ಯದಶಿಗಳ ದಂಡಿನದ್ದೇ ಆಗಿರಲಿ-ಅವರ ಜಾತಿ- ಉಪಜಾತಿಗಳ ಸೂಚನೆಗಳೊಂದಿಗೇ ಪ್ರಕಟಿಸುತ್ತಾ ಸಂಪೂರ್ಣ ಜಾತಿಮಯ ಸರ್ಕಾರವೆನಿಸಿರುವ ಈ ಸಿದ್ಧರಾಮಯ್ಯನವರ ಸರ್ಕಾರ, ಇದರ ಪರಿಣಾಮವಾಗಿಯೇ ಮೊನ್ನೆ ಟಿಪ್ಪು ಜಯಂತಿ ಸಂದರ್ಭದಲ್ಲಿ ಕನ್ನಡದಲ್ಲಿ ಬರೆಯುವ 'ಇಂಗ್ಲಿಷ್' ಲೇಖಕರಾದ ಗಿರೀಶ್ ಕಾರ್ನಾಡರು ಸಹಜವಾಗಿಯೇ ಆಡಿದ ಅವಿವೇಕದ ಮಾತುಗಳ ವಿರುದ್ಧ ಒಂದು ನಿರ್ದಿಷ್ಟ ಜಾತಿ ಸಮುದಾಯ ಸಂಘಟಿತ ದಾಳಿಯನ್ನು ಎದುರಿಸಬೇಕಾಯಿತು. ಮೊದಲಾಗಿ ಈ ಟಿಪ್ಪು ಜಯಂತಿಯ ಅಧಿಕೃತ ಆಚರಣೆಯೇ ಒಂದು ಅವಿವೇಕದ ನಿರ್ಧಾರ. ಈ ಸಂದರ್ಭದಲ್ಲಿ ಟಿಪ್ಪು ಬಗ್ಗೆ ನಡೆದಿರುವ

ವಿದ್ವತ್ ಚರ್ಚೆಯೇ ಅಂತಿಮವಾಗಿ ಸೂಚಿಸುವಂತೆ ಆತನ ಚರಿತ್ರೆ ಏನೇ ಇರಲಿ, ಸ್ವಾತಂತ್ರ್ಯಪೂರ್ವ ರಾಜರ ಹುಟ್ಟುಹಬ್ಬವನ್ನು ಪ್ರಜಾಸರ್ಕಾರವೊಂದು ಆಚರಿಸುವುದಕ್ಕೆ, ಚುನಾವಣಾ ಉದ್ದೇಶಗಳ ಹೊರತಾಗಿ ಮತ್ತಾವ ಕಾರಣವೂ ಇರಲು ಸಾಧ್ಯವಿಲ್ಲ. ಕಾಂಗ್ರೆಸ್ಸಿನ ಈ ರಾಜಕಾರಣ ಬಿಜೆಪಿಯನ್ನು ಬಲಪಡಿಸಿದೆಯೇ ಹೊರತು ಕಾಂಗ್ರೆಸ್ಸಿಗೆ ಇದರಿಂದ ಕಿಂಚಿತ್ತೂ ಲಾಭವಾಗಿಲ್ಲ. ಹಾಗಾಗಿಯೂ ಇದು ಮೂರ್ಖ ನಿರ್ಧಾರ.

ಮೂರ್ಖ ಮಾತ್ರವಲ್ಲ, ಅಪಾಯಕಾರಿ ಅನುಮಾನಾಸ್ಪದತೆಗೆ ಎಡೆ ಮಾಡಿಕೊಟ್ಟಿರುವ ರಾಜ್ಯ ಸರ್ಕಾರದ ಇನ್ನೊಂದು ನಡೆಯೆಂದರೆ, ಕಾಂಗ್ರೆಸ್ ಪಕ್ಷದ ವತಿಯಿಂದ ಆರಂಭವಾಗಿರುವ ಲೋಕಾಯುಕ್ತ ಸಂಸ್ಥೆಯನ್ನೇ ಮುಗಿಸುವ ಪ್ರಯತ್ನ. ಪರಮ ಭ್ರಷ್ಟತೆಯ ಪ್ರತೀಕವಾಗಿರುವ ಸದ್ಯದ ಲೋಕಾಯುಕ್ತರನ್ನು ಪದಚ್ಯುತಗೊಳಿಸುವ ಪ್ರಯತ್ನಕ್ಕೆ ಪದೇ ಪದೇ ಅಡ್ಡಿ ಮಾಡುತ್ತಾ ಬಂದ ಈ ಸರ್ಕಾರ, ವಿರೋಧ ಪಕ್ಷಗಳು ಆ ಪ್ರಕ್ರಿಯೆಯನ್ನು ಆರಂಭಿಸುತ್ತಿದ್ದಂತೆ, ಅದಕ್ಕೆ ಪೂರಕವಾಗಿ ಕೆಲಸ ಮಾಡುವ ಬದಲು ಆ ಸಂಸ್ಥೆಯ ಸದ್ಯದ ಏಕಮಾತ್ರ ದಾತರಾದ ಉಪಲೋಕಾಯುಕ್ತರನ್ನೂ ಪದಚ್ಯುತಗೊಳಿಸಲು ಮುಂದಾಗಿದ್ದು ಸಾರ್ವಜನಿಕರಲ್ಲಿ ಸರ್ಕಾರದ ಬಗ್ಗೆ ಹಲವು ಸಂದೇಹಗಳಿಗೆ ಕಾರಣವಾಗಿದೆ. ಆದರೆ 'ಬಿಗ್ ಬಾಸ್' ಎಂಬ ಅಭಾಸವನ್ನೂ ಮತ್ತು ಹುಚ್ಚ ವೆಂಕಟೇಶ ಎಂಬ ವಿಕ್ಷಿಪ್ತನ ವಕ್ರ ವರ್ತನೆಗಳನ್ನು ಮುಗಿಬಿದ್ದು ಪ್ರದರ್ಶಿಸುವ ಮಾಧ್ಯಮಗಳು ಮತ್ತು ಅದನ್ನು ಮುಗಿಬಿದ್ದು ನೋಡುವ ಅಧೋಗತಿ ತಲುಪಿರುವ ಈ ರಾಜ್ಯದ ಜನ ತಮ್ಮ ಭವಿಷ್ಯದ ಬಗ್ಗೆ ಸಾಮೂಹಿಕವಾಗಿ ಗಂಭೀರ ಆಲೋಚನೆ ಮಾಡಬಲ್ಲ ಶಕ್ತಿಯನ್ನು ಉಳಿಸಿಕೊಂಡಿದ್ದಾರೆಯೇ ಎಂಬುದೇ ಇದನ್ನೂ ಮೀರಿದ ದೊಡ್ಡ ಸಂದೇಹವಾಗಿದೆ.

ಹಾಗೆ ನೋಡಿದರೆ, ಯಾಕೋ ಇಡೀ ಜಗತ್ತೇ ವಿಕ್ಷಿಪ್ತತೆಯ ಕಡೆ ಜಾರುತ್ತಿರುವಂತೆ ತೋರುತ್ತಿದೆ. ಪ್ಯಾರಿಸ್‌ನಲ್ಲಿ ಐಸಿಎಸ್‌ನವರು ನಡೆಸಿದ ನರಮೇಧ ಯಾರ ನರಮಂಡಲವನ್ನಾದರೂ ಆಘಾತಗೊಳಿಸುವಂತಹದ್ದು. ಧಾರ್ಮಿಕ ಘೋಷಣೆಗಳನ್ನು ಕೂಗುತ್ತಾ ನಡೆದ ಈ ಘೋರ ಹಿಂಸಾಚಾರದ ಹಿಂದೆ ಈಗ –ಕೆಲವರು ಮಾಡುತ್ತಿರುವಂತೆ–ತೈಲ ರಾಜಕಾರಣದ ಬೇರುಗಳನ್ನು ಹುಡುಕುತ್ತಾ ಕೂರುವುದೆಂದರೆ ಇಂತಹ ರಾಕ್ಷಸೀಯತೆಯನ್ನು ಸಮರ್ಥಿಸಿದಂತೆಯೇ ಆದೀತು. ಏಕೆಂದರೆ ಅಂತಹ ಪ್ರಯತ್ನ ಇಂತಹ ಹೀನಕೃತ್ಯಗಳನ್ನು ಕ್ಷಮಾರ್ಹಗೊಳಿಸಿಬಿಟ್ಟು ಇವುಗಳ ಮನರಾವರ್ತನೆಗೆ ಕುಮ್ಮಕ್ಕು ನೀಡುತ್ತವೆ. ಇದನ್ನೆಲ್ಲ ಬೆಂಬಲಿಸದಿದ್ದರೂ ಮೌನವಾಗಿ ನೋಡುತ್ತಿರುವ ಜಗತ್ತಿನ ಮುಸ್ಲಿಂ ಜನತೆ; ಅಂದರೆ ಅದರ ಬೌದ್ಧಿಕ ಮತ್ತು ಧಾರ್ಮಿಕ ನಾಯಕತ್ವ ಜಾಗತಿಕವಾಗಿಯೂ, ಸ್ಥಳೀಯವಾಗಿಯೂ ದಿಟ್ಟವಾಗಿ, ಸ್ಪಷ್ಟವಾಗಿ ಮಾತಾಡುವ ಸಂದರ್ಭ ಈಗ ಬಂದಿದೆ ಎನ್ನಿಸುತ್ತದೆ. ನಂತರವಷ್ಟೇ ತೈಲ ರಾಜಕಾರಣದ ಚರ್ಚೆ.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ನವೆಂಬರ್ ಸಂಚಿಕೆಯಲ್ಲಿ 'ನಮ್ಮ ಸಮಾಜವಾದಿಗಳು' ಅಂಕಣದಲ್ಲಿ ಪರಿಚಯಿಸಲಾಗಿರುವ ಗರುಡಶರ್ಮರನ್ನು ಸವಾಜವಾದಿ ಎಂದು ಗುರುತಿಸುವುದು ಅಷ್ಟು ಸಮರ್ಪಕವಾಗಲಾರದು. ಅವರು ಮೂಲತಃ ಸರ್ವೋದಯ ಕಾರ್ಯಕರ್ತರು. ಸಮಾಜವಾದಿಗಳ ಬಗ್ಗೆ ಅವರಿಗೆ ಸಹಾನುಭೂತಿ ಇದ್ದು ಅವರ ಆರಂಭದ ಹೋರಾಟಗಳಲ್ಲಿ ಸಾಥ್ ನೀಡುತ್ತಿದ್ದರಷ್ಟೆ.

**–ಎಲ್. ಸುಬ್ರಮಣ್ಯ,** ಮೈಸೂರು

ಕೆ.ಸತ್ಯನಾರಾಯಣ ಅವರು ಜನಪ್ರಿಯ ಸಾಹಿತ್ಯದ ಬಗ್ಗೆ ಬರೆಯುವಾಗ (ನವೆಂ. ಸಂಚಿಕೆ) ನಮ್ಮ ಸಾಹಿತ್ಯ ವಿಮರ್ಶೆಯಲ್ಲಿ 'ಜನಪ್ರಿಯ' ಎಂಬ ಶಬ್ದ ಚಾಲ್ತಿಗೆ ಬಂದ ಸಂದರ್ಭ ಮತ್ತು ಅದರ ಅರ್ಥ ವಿಸ್ತಾರಗಳ ಬಗ್ಗೆಯೂ ಬರೆದಿದ್ದರೆ ಅವರ ಲೇಖನ ಇನ್ನಷ್ಟು ಮೌಲಿಕವಾಗಿರುತ್ತಿತ್ತು.

**–ಎಸ್. ಆರ್. ಸೋಮನಾಥ,** ಮಂಗಳೂರು

ರಾಜೇಂದ್ರ ಚೆನ್ನಿಯವರು ನವ್ಯ ಸಾಹಿತ್ಯದ ಬಗ್ಗೆ ಬರೆಯುತ್ತಾ ಆ ಸಾಹಿತ್ಯ ಮಾರ್ಗಕ್ಕೆ ತಮ್ಮದೇ ಅನನ್ಯ ಕೊಡುಗೆಗಳನ್ನು ನೀಡಿದ ರಾಜಲಕ್ಷ್ಮಿ ಎನ್. ರಾವ್ ಮತ್ತು ವೀಣಾ ಯಲಬುರ್ಗಿ(ಶಾಂತೇಶ್ವರ) ಎಂಬ ಲೇಖಕಿಯರ ಪ್ರಸ್ತಾಪವನ್ನೇ ಮಾಡಿಲ್ಲವೇಕೆ? ನವ್ಯವೆಂದರೆ ಗಂಡುಗೋವಿಗಳ ಸಾಮ್ರಾಜ್ಯವೇ ಹೌದೇನೋ!

**– ಬಿ. ಪದ್ಮ ದೇವರಾಜ್,** ಬೆಂಗಳೂರು

ರಾಜೇಂದ್ರ ಚೆನ್ನಿಯವರು ನವ್ಯ ಸಾಹಿತ್ಯ ಕುರಿತಂತೆ ಬರೆದಿರುವ ಲೇಖನದ ಬಗ್ಗೆ ನನ್ನ ಕೆಲವು ತಕರಾರುಗಳು ಹೀಗಿವೆ:

ನವ್ಯವು ನವೋದಯದ ದುರ್ಬಲ ಅನುಕರಣೆಯ ಲೇಖಕರನ್ನಷ್ಟೇ ಟೀಕಿಸಿತು ಮತ್ತು ಅದು ನವೋದಯದ ಮುಖ್ಯ ಕೃತಿಗಳನ್ನು ಟೀಕಿಸಲಿಲ್ಲ ಎಂಬ ಚೆನ್ನಿಯವರ ಮಾತನ್ನು ಒಪ್ಪುವುದು ಕಷ್ಟ. ಏಕೆಂದರೆ, ಯಾವುದೇ ಸಾಹಿತ್ಯ ಮಾರ್ಗ ತನ್ನ ಮೀಮಾಂಸೆಯನ್ನು ಇನ್ನೊಂದು ಸಾಹಿತ್ಯ ಮಾರ್ಗದ ದುರ್ಬಲ ಕೃತಿಗಳನ್ನು ಕುರಿತ ಟೀಕೆಯ ಆಧಾರದ ಮೇಲೆ ಕಟ್ಟಿಕೊಳ್ಳಲಾರದು. ನವ್ಯವು ತನ್ನ ಸಂಸ್ಥಾಪನೆಗಾಗಿ ಮಂಡಿಸಿದ ವಾದಗಳೆಲ್ಲವೂ ನವೋದಯದ ಪ್ರಧಾನ ಲಹರಿಯನ್ನೇ, ಅದರ ಪ್ರಧಾನ ಲೇಖಕರನ್ನೇ ಗುರಿಯಾಗಿಟ್ಟುಕೊಂಡಿತ್ತು ಎಂಬುದು ಅಡಿಗ, ಅನಂತಮೂರ್ತಿ ಮತ್ತು ಲಂಕೇಶರ ಆ ಕಾಲದ ಸಾಹಿತ್ಯ ವಿಮರ್ಶೆಯನ್ನು ಗಮನಿಸಿದರೆ ಗೊತ್ತಾಗುವುದು. ನವ್ಯರು ನವೋದಯದ ಬಗ್ಗೆ ಪೂರ್ತಿ ಕಣ್ಣುಬಿಟ್ಟು ನೋಡಿದ್ದು ತಮ್ಮ ಪ್ರಭಾವದ ಇಳಿಗಾಲದಲ್ಲಿ; ನಿರ್ದಿಷ್ಟವಾಗಿ, ಅವರನ್ನು ತೇಜಸ್ವಿ ಝಾಡಿಸಿ ಬರೆದ ಮೇಲೆ ಎಂಬುದನ್ನು ನಾವು ಗಮನಿಸಬೇಕು. ಹೀಗಾಗಿ, ಆ ಕಾಲದಲ್ಲಿ ಸಾಹಿತ್ಯದ ಕಡೆ ಆಕರ್ಷಿತರಾದ ನಮ್ಮ ತಲೆಮಾರಿನವರು ಬಹಳ ಕಾಲ ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ ಮುಂತಾದವರನ್ನು ಗಂಭೀರವಾಗಿ ಓದುವ ಗೋಜಿಗೇ ಹೋಗದಂತಾಯಿತು.

ಸಾಹಿತ್ಯ ಕೃತಿಯೊಂದರ ಭಾಷೆ ಮತ್ತು ಬಂಧಗಳನ್ನು ಕುರಿತ ನವ್ಯರ ನಿಲುವುಗಳು ವಿಶಿಷ್ಟವಾದವು, ನಿಜ. ಅವನ್ನು ಒಪ್ಪುವುದು ಬೇರೆ ಮಾತಾದರೆ, ಅವೇ(ನವ್ಯರ ಆ ನಂಬಿಕೆಗಳೇ) ಸಾಹಿತ್ಯದ ವಿಶಿಷ್ಟ ಲಕ್ಷಣಗಳು ಎಂದೆನ್ನುವುದನ್ನು ಒಪ್ಪುವುದು ಕಷ್ಟ. ಹಾಗಾಗಿಯೇ ಪುತಿನ ಮತ್ತು ಕೆಎಸ್‌ನ ಅವರ ಕಾವ್ಯ ಕುರಿತು ನವ್ಯರು ಆಡುವ ಮಾತುಗಳನ್ನು ತಾವು ಒಪ್ಪುವುದಾಗಿ ಹೇಳುವ ಚೆನ್ನಿಯವರಿಗೆ ಅವೇ ಮಾತುಗಳು ಕುವೆಂಪು ಅವರ ಕಾವ್ಯಕ್ಕೆ ಇನ್ನೂ ಚೆನ್ನಾಗಿ ಅನ್ವಯಿಸುತ್ತವೆ ಎಂಬುದೇಕೆ ಹೊಳೆಯುವುದಿಲ್ಲವೋ ತಿಳಿಯದು! ಇಂದು ನಿಂತು ನವ್ಯವನ್ನು ನೋಡುವ ನಮ್ಮ ನೋಟದಲ್ಲಿನ ಇಂತಹ ಒಡಕಿನ ಕಾರಣಗಳು ನವ್ಯದ ಸಾಹಿತ್ಯ ಮೀಮಾಂಸೆಯಲ್ಲೇ ಅಂತಸ್ಥವಾಗಿರುವುದನ್ನು ಚೆನ್ನಿಯವರು ಗಮನಿಸಿದಂತಿಲ್ಲ. ಹಾಗೇ, ನವ್ಯರಿಗೆ ಕುವೆಂಪು ಅವರ ಕಾದಂಬರಿಗಳ ಪ್ರಾಮುಖ್ಯತೆಯ ಬಗ್ಗೆ ಭಿನ್ನಾಭಿಪ್ರಾಯಗಳು ಇರಲಿಲ್ಲ ಎನ್ನುವ ಚೆನ್ನಿಯವರು, 'ಸಂಸ್ಕಾರ'ದಿಂದ 'ಗತಿಸ್ಥಿತಿ'ಯವರೆಗೆ 'ನವ್ಯ'ದ ಒಳ್ಳೆಯ ಮತ್ತು ಕೆಟ್ಟ ಕಾದಂಬರಿಗಳ ಬಗ್ಗೆ ದಂಡಿ ದಂಡಿಯಾಗಿ ಪ್ರಶಂಸಾ ವಿಮರ್ಶೆ ಬರೆದ ನವ್ಯರು ಕುವೆಂಪು ಅವರ ಕಾದಂಬರಿಗಳ ಬಗ್ಗೆ ಏನು, ಎಷ್ಟು ಮತ್ತು ಎಲ್ಲಿ ಬರೆದಿದ್ದಾರೆ ಎಂಬುದನ್ನೂ ಹೇಳಿದ್ದರೆ ಚೆನ್ನಿತ್ತು.

ನವ್ಯವು (ಸಾಹಿತ್ಯದ ಉಪ್ಪು ಎನ್ನಬಹುದಾದ) ಸಾಮುದಾಯಿಕ ಅನುಭವದ ವಿಸ್ತಾರವನ್ನು ಕಳೆದುಕೊಂಡಿತು ಎನ್ನುವ ಚೆನ್ನಿಯವರು, ಅದಕ್ಕೆ ಕಾರಣಗಳನ್ನು ಕೊಡುವುದಿಲ್ಲ ಮತ್ತು ಅದರಿಂದ ಕನ್ನಡ ಸಾಹಿತ್ಯವೆಂಬ ವಿದ್ಯಮಾನಕ್ಕೆ ಉಂಟಾದ ಆಘಾತವನ್ನು ಗಮನಿಸುವುದಿಲ್ಲ. ನವ್ಯ ಕುರಿತ ತೇಜಸ್ವಿಯವರ ಟೀಕೆ ಮುಖ್ಯವಾಗಿ ಈ ಸಂಗತಿಗಳ ಬಗೆಗೇ ಇತ್ತು. ಆದರೆ ಚೆನ್ನಿಯವರು ತೇಜಸ್ವಿಯವರ ಟೀಕೆಯನ್ನು ಚರ್ಚಿಸುವ ಗೋಜಿಗೇ ಹೋಗದೆ, ತೇಜಸ್ವಿಯವರು ಕೃತಿಯ ಕಲಾತ್ಮಕತೆ ಮುಖ್ಯ ಎಂದು ಕೊನೆಯವರೆಗೂ ವಾದಿಸಿದರೆಂಬುದನ್ನು ಮಾತ್ರ ಹೇಳಿದ್ದಾರೆ. ಆದರೆ ತೇಜಸ್ವಿಯವರ ಈ ಮಾತು ಮುಖ್ಯವಾಗಿ ಬಂಡಾಯ–ದಲಿತ ಸಾಹಿತ್ಯ ಕುರಿತಾಗಿತ್ತು ಎಂಬುದನ್ನು ನಾವು ಗಮನಿಸಬೇಕು.

ಯಾವುದೇ ಒಂದು ಸಾಹಿತ್ಯ ಮಾರ್ಗದ ಕೃತಿಗಳು ಶ್ರೇಷ್ಠವಾಗಿದ್ದು ಅದರ ವಿಮರ್ಶೆ ಸಮಸ್ಯಾತ್ಮಕವಾಗಿರಲು ಸಾಧ್ಯವಿಲ್ಲ. ಆದರೆ ಚೆನ್ನಿಯವರು ನವ್ಯದ ಬಗ್ಗೆ ಈ ಮಾತನ್ನು ಹೇಳಿದಂತಿದೆ. ನಿಜ, ನವ್ಯವು ಅನೇಕ 'ಶ್ರೇಷ್ಠ' (ಅಂದರೆ ಆಳದ ಅನುಭವಗಳ) ಕೃತಿಗಳನ್ನು ನೀಡಿದೆ. ಆದರೆ ಅವುಗಳ ತೆಕ್ಕೆ ತುಂಬಾ ಸಂಕುಚಿತವಾದದ್ದು. ಅಂದರೆ ಅವುಗಳ ಶ್ರೇಷ್ಠತೆಯ (ಅಂದರೆ ಆಳದ) ಅಳತೆಗಳು ಚಾಲ್ತಿಯಲ್ಲಿರುವುದು ಒಂದು ಸೀಮಿತ ಓದುಗ ವರ್ಗದ ಪ್ರಪಂಚದ ಎಲ್ಲೆಗಳೊಳಗೆ ಮಾತ್ರ. ಇದೇ ಚೆನ್ನಿಯವರು ಹೇಳುವ ನವ್ಯ ವಿಮರ್ಶೆಯ ರಾಜಕಾರಣಕ್ಕೂ ಕಾರಣವಾಗಿರುವುದು.

ಇದೆಲ್ಲವನ್ನೂ ಒಂದೇ ಮಾತಿನಲ್ಲಿ ಹೇಳುವುದಾದರೆ, ಪುತಿನ ಅವರು ಒಂದು ಸಭೆಯಲ್ಲಿ ಅಡಿಗರ ಕಾವ್ಯವನ್ನು ಕುರಿತು ಆಡಿದ ಈ ಮಾತನ್ನು

**೧೬ನೇ ಪುಟಕ್ಕೆ)**

# ನಮ್ಮ ಸಮಾಜವಾದಿಗಳು | ಹುಟ್ಟು ಹೋರಾಟಗಾರ ಟಿ.ಕೆ. ಮಹಮೂದ್



ಉತ್ತರ ಕನ್ನಡ ಜಿಲ್ಲೆಯ ಹಿರಿಯ ಸಮಾಜವಾದಿಗಳಲ್ಲಿ ಒಬ್ಬರಾಗಿದ್ದ ಟಿ.ಕೆ. ಮಹಮೂದ ಅವರು ಒಂದು ಕಾಲಕ್ಕೆ ಹುಟ್ಟು ಹೋರಾಟಗಾರರೆಂದೇ ಪ್ರಸಿದ್ಧರು. ಮಹಮೂದ ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ೧೯೫೦ರ ದಶಕದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಅವರು ಬಂದರು. ಅವರು ಬರುವ ಸುಮಾರು ಎರಡು ದಶಕಗಳಷ್ಟು ಮೊದಲೇ ಈ ಜಿಲ್ಲೆಯ ಅಂಕೋಲೆಯಲ್ಲಿ ಆರಂಭವಾದ ರೈತ ಜನಾಂದೋಲನ ನಡೆದಿತ್ತು. ಇವರು ಬರುವ ಹೊತ್ತಿಗೆ ಅದು ಬೇಣಕ್ಕೆ ಬಿದ್ದ ಬೆಂಕಿಯಂತೆ – ನಿಗಿನಿಗಿ ಕೆಂಡವಾಗಿ ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ವ್ಯಾಪಿಸಿತ್ತು.

ಇಂಥ ಒಂದು ಎಡಪಂಥೀಯ ಹೋರಾಟದ ಪ್ರಭಾವದಿಂದ ದೂರ ಇರುವುದು, ಸ್ವಭಾವತಃ ಜನಪರ ಹೋರಾಟಗಾರರಾಗಿದ್ದ ಟಿ.ಕೆ.ಮಹಮೂದರಿಗೆ ಸಾಧ್ಯವಾಗಲೇ ಇಲ್ಲ. ಅವರು ನೇರವಾಗಿ ರೈತರ ಸಮಾಜವಾದೀ ಜನಾಂದೋಲನದಲ್ಲಿ ಪಾಲ್ಗೊಂಡರು. ಅಂದು ಆಳುವ ಕಾಂಗ್ರೆಸ್ ಪಕ್ಷದ ಬಲಿಷ್ಠ ವಿರೋಧೀ ಸಂಘಟನೆಯಾದ ಪ್ರಜಾಸಮಾಜವಾದಿ ಪಕ್ಷವು ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ರೈತ ಜನಾಂದೋಲನದ ಜೊತೆ ಜೊತೆಯಲ್ಲೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡದ್ದು ಈಗ ಇತಿಹಾಸ.

ಉತ್ತರ ಕನ್ನಡ ಜಿಲ್ಲೆಗೆ – ಶಿವಮೊಗ್ಗಾ ಜಿಲ್ಲೆಗಿರುವಂತೆ – ರೈತ ಜನಾಂದೋಲನದ ವಿಚಾರದಲ್ಲಿ ಮೊದಲು ಗಣಪತಿಯಪ್ಪ, ಆನಂತರ ಗೋಪಾಲಗೌಡ ಹಾಗೂ ಡಾ॥ ಲೋಹಿಯಾ ಅಂತಹವರ ನೇರ ಮಾರ್ಗದರ್ಶನವಾಗಲಿ, ಭಾಗವಹಿಸುವಿಕೆಯಾಗಲಿ ಇರಲಿಲ್ಲ. ಆದರೆ ಇದಕ್ಕಿಂತ ಹದಿನೈದು ವರ್ಷಗಳ ಹಿಂದೆಯೇ ಅಂಕೋಲೆಯಲ್ಲಿ ಆರಂಭವಾಗಿ, ಜಿಲ್ಲೆಯಾದ್ಯಂತ ವಿಸ್ತರಿಸಿದ ರೈತರ ಸಮಾಜವಾದಿ ಜನಾಂದೋಲನಕ್ಕೆ ದಿನಕರ ದೇಸಾಯರೇ ಈ ಭಾಗದ ಜನಕ್ಕೆ ದೊಡ್ಡ ನಾಯಕರಾಗಿದ್ದರು.

ಮಹಮೂದ ಅವರು ಅರವತ್ತರ ದಶಕಾರಂಭದಲ್ಲಿ ಸಿರ್ಸಿಯಲ್ಲಿ ಸಂಘಟಿಸಿದ ಜಿಲ್ಲೆಯ ರೈತ ಯುವಕರ ಮಹಾ ಮೆರವಣಿಗೆಯಲ್ಲಿ ನೇರವಾಗಿ ಪಾಲ್ಗೊಂಡಿದ್ದ ನಾನು, ನನ್ನ ಜೊತೆಯಲ್ಲಿ ಅಂಕೋಲೆಯಿಂದ ಐವತ್ತು ಜನ ಯುವಕರನ್ನು (೧೯೬೨) ಕರೆದೊಯ್ದ ನೆನಪು ಇನ್ನೂ ಹಸಿರಾಗಿದೆ. ಅದೊಂದು ಅತ್ಯದ್ಭುತ ಪ್ರತಿಭಟನಾ ಮೆರವಣಿಗೆಯಾಗಿತ್ತು. ಉತ್ತರ ಕನ್ನಡದ ಎಲ್ಲ ಜನನಾಯಕರು ಮಹಮೂದರ ಈ ಸಂಘಟನೆಯಲ್ಲಿ ಭಾಗವಹಿಸಿದ್ದರು. ಸಿದ್ದಾಪುರ ಮತ್ತು ಸಿರ್ಸಿ ಬೇರೆ ಬೇರೆ ಅಲ್ಲ ಎಂಬ ರೀತಿಯಲ್ಲಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಜನಸಾಗರವೇ ತುಂಬಿ ಹರಿದಿತ್ತು.

ಟಿ.ಕೆ. ಮಹಮೂದರ ಸಾರ್ವಜನಿಕ ಬದುಕಿಗೆ ಇನ್ನೊಂದು ಆಯಾಮವೂ ಇದೆ. ಅವರೊಬ್ಬ ಅತ್ಯುತ್ತಮ ಕನ್ನಡದ ಲೇಖಕರು. ಹೆಸರಾಂತ ಪತ್ರಕರ್ತರೂ ಕೂಡ. 'ಸಮಾಜವಾಣಿ' ಎಂಬ ವಾರಪತ್ರಿಕೆಯನ್ನು ಬಹಳ ಕಷ್ಟಪಟ್ಟು ನಡೆಸುತ್ತಿದ್ದರು. ಕ್ರಮೇಣ ಅದು ಅನಿಯಮಿತ ವಾರಪತ್ರಿಕೆಯಾಗಿ ಬಹುಕಾಲದ ನಂತರ ಒಂದು ದಿನ ತಣ್ಣಗಾಯಿತು. ಆದರೆ ಅದರಲ್ಲಿ ಪ್ರಕಟವಾಗುತ್ತಿದ್ದ ಅವರ ಲೇಖನಗಳ ಹರಿತ ಅಸಾಮಾನ್ಯವಾದದ್ದು. ಈ ಕಾರಣದಿಂದಾಗಿ ಅವರಿಗೆ ಎಷ್ಟು ಜನ ಸ್ನೇಹಿತರಿದ್ದರೋ ಅದೇ ಪ್ರಮಾಣದಲ್ಲಿ ರಾಜಕೀಯ ವಿರೋಧಿಗಳೂ ಇದ್ದರು.

ಟಿ.ಕೆ. ಮಹಮೂದರ ವಿದ್ವತ್ತು ಮತ್ತು ಜನಪರ ಕಾಳಜಿಗಳನ್ನು ದುಡಿಸಿಕೊಳ್ಳುವುದಕ್ಕಾಗಿ ಇವರನ್ನು ಜಿಲ್ಲೆಯ ಪ್ರಜಾ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಲಾಯಿತು. ಅವರ ಈ ಅಧಿಕಾರಾವಧಿಯಲ್ಲೇ ದಿನಕರ ದೇಸಾಯರನ್ನು ಜಿಲ್ಲೆಯ ಸಾಮಾನ್ಯ ಜನರು ಲೋಕಸಭೆಗೆ ಆಯ್ಕೆಮಾಡಿ ಕಳಿಸಿದ್ದರು.(೧೯೬೭). ಅದೇ ಸಂದರ್ಭದಲ್ಲಿ ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಹಳಿಯಾಳ ಕ್ಷೇತ್ರ ಒಂದನ್ನು ಹೊರತುಪಡಿಸಿ, ಉಳಿದ ಐದು ಸ್ಥಾನಗಳನ್ನು ಪ್ರಜಾಸಮಾಜವಾದಿ ಪಕ್ಷವು ಹಾಗೂ ಈ ಪಕ್ಷ ಬೆಂಬಲಿಸಿದ ಒಬ್ಬ ಪಕ್ಷೇತರರೂ ಗೆದ್ದುಕೊಂಡದ್ದು ಚಾರಿತ್ರಿಕವಾಗಿ ಅತ್ಯಂತ ಮಹತ್ವದ ಬೆಳವಣಿಗೆಯಾಗಿತ್ತು. ಆ ಸಂದರ್ಭದಲ್ಲೇ ಕರ್ನಾಟಕ ವಿಧಾನಸಭೆಯಲ್ಲಿ ಸಮಾಜವಾದಿ ಶಾಸಕರ ಗುಂಪು ಮೊಟ್ಟ ಮೊದಲ ಅಧಿಕೃತ ವಿರೋಧೀ ಪಕ್ಷವೆಂಬ ಮನ್ನಣೆಗೆ ಪಾತ್ರವಾಯಿತೆಂಬುದನ್ನೂ ಇಲ್ಲಿ ಸ್ಮರಿಸಬಹುದು.

ಒಂದು ಹಂತದಲ್ಲಿ ಮಹಮೂದರ ವಕ್ತೃತ್ವ ಮತ್ತು ವಿದ್ವತ್ತನ್ನು ಶಾಸನ ಸಭೆಯಲ್ಲೂ ಬಳಸಿಕೊಳ್ಳುವ ಉದ್ದೇಶದಿಂದ ಪ್ರಜಾಸಮಾಜವಾದಿ ಪಕ್ಷವು ಇವರನ್ನು ೧೯೬೭ರಲ್ಲಿ ವಿಧಾನಸಭಾ ಸದಸ್ಯರ ಕ್ಷೇತ್ರದಿಂದ ಪರಿಷತ್ತಿಗೆ ಆಯ್ಕೆಯಾಗಬೇಕಾದ ಸ್ಥಾನಕ್ಕೆ ಪಕ್ಷದ ಕೊನೆಯ ಅಭ್ಯರ್ಥಿಯಾಗಿ ನಿಲ್ಲಿಸಿತ್ತು. ತುರುಸಿನ ಆ ಚುನಾವಣೆಯಲ್ಲಿ ಅವರು ಕೇವಲ ಒಂದು ಮತದ ಅಂತರದಿಂದ ಸೋಲಬೇಕಾಗಿ ಬಂತು. ಒಂದು ವೇಳೆ ಅವರು ಅಂದು ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರೆ, ನಾಡಿಗೆ ಒಬ್ಬ ಪ್ರಬುದ್ಧ ರಾಜಕೀಯ ಚಿಂತಕನ ಮಾರ್ಗದರ್ಶನ ಲಭ್ಯವಾದಂತಾಗುತ್ತಿತ್ತು.

ಕಾಲ ಬದಲಾಗುತ್ತಿರುತ್ತದೆ. ೧೯೭೦ರ ವೇಳೆಗೆ ರಾಷ್ಟ್ರೀಯ ಕಾಂಗ್ರೆಸ್ಸು ಇಬ್ಭಾಗವಾದಾಗ, ಇಂದಿರಾ ಗಾಂಧಿಯವರ "ಗರೀಬೀ ಹಠಾವೊ", "ರಾಜಧನ ರದ್ಧತಿ", "ಬ್ಯಾಂಕ್ ರಾಷ್ಟ್ರೀಕರಣ" ಮುಂತಾದ ಪ್ರಗತಿಪರ ಹೆಜ್ಜೆಗಳಿಗೆ ಮಾರುಹೋದ ಪ್ರಜಾ ಸಮಾಜವಾದಿ ಪಕ್ಷದ ಒಂದು ದೊಡ್ಡ ಭಾಗ ಇಂದಿರಾ –ದೇವರಾಜ ಅರಸು ನಾಯಕತ್ವದ ಕಾಂಗ್ರೆಸ್ಸಿಗೆ ಬೇಶರತ್ತಾಗಿ ಸೇರ್ಪಡೆಯಾಯಿತು. ಟಿ.ಕೆ. ಮಹಮೂದರೂ ಕೂಡ ಆ ಸೇರ್ಪಡೆಯ ಅಭಿಯಾನದಲ್ಲಿ ಮುಂಚೂಣಿಯಲ್ಲಿದ್ದು, ಜಿಲ್ಲೆಯ ಸಾವಿರಾರು ಕಾರ್ಯಕರ್ತರಿಗೆ ಇದು ದಿಗ್ಭ್ರಮೆಯನ್ನುಂಟು ಮಾಡಿತ್ತು. ಅವರ ಸಾರ್ವಜನಿಕ ಬದುಕಿನಲ್ಲಿ ಈ ಘಟನೆ ಒಂದು ಕಿಲುಬಾಗಿಯೇ ಉಳಿದಿದೆ.

ಕಾಂಗ್ರೆಸ್ ಸೇರಿದ ಮೇಲೆ ಟಿ.ಕೆ ಮಹಮೂದರಿಗೆ ತಕ್ಕಮಟ್ಟಿನ ಸ್ಥಾನಮಾನಗಳು ಪಕ್ಷದ ವಲಯದಲ್ಲಿ ಸಿಕ್ಕಿದರೂ ಅವರ ಬಹುಕಾಲದ ಅನುಭವದಿಂದ ಕೃತಿಗಿಳಿಸಬಹುದಾದ ಜನಪರ ಕಾರ್ಯಕ್ರಮಗಳಿಗಾಗಿ ಬೇಕಾಗಿದ್ದ ಯಾವುದೇ ಅಧಿಕಾರ ಸಿಗದೇ ಹೋದದ್ದು ಅವರನ್ನು ಮಾನಸಿಕವಾಗಿಯೂ, ದೈಹಿಕವಾಗಿಯೂ ಹೈರಾಣು ಮಾಡಿತು.

ಬಹುವರ್ಣದ ವ್ಯಕ್ತಿತ್ವ ಹೊಂದಿದ್ದ ಟಿ.ಕೆ. ಮಹಮೂದ್ ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರಿನ ಸಮೀಪದ ಜೋಕಟ್ಟೆ(ಬಜ್ಪೆ)ಯವರು. ರೈತ ಕುಟುಂಬದಲ್ಲಿ ಹುಟ್ಟಿ ಬಂದವರಲ್ಲವಾದರೂ ಉತ್ತರ ಕನ್ನಡ ಜಿಲ್ಲೆಗೆ ಬರುವ ಮೊದಲೇ ಅವರು ತನ್ನ ಜಿಲ್ಲೆಯಲ್ಲಿ ರೈತ ಯುವ ಮುಂದಾಳಾಗಿದ್ದರು. ರೈತರ ಮತ್ತು ದಲಿತರ ಮಕ್ಕಳಿಗೆ ರಾತ್ರಿ ಪಾಠ ಹೇಳಿಕೊಡುತ್ತಿದ್ದರು. ಸ್ವಂತ ಭೂಮಿಯಿಂದ ವಂಚಿತರಾದ ರೈತರ ಮಕ್ಕಳ ಈ ಬಗೆಯ ಸಂಪರ್ಕದಿಂದಲೇ ಅವರ ಮನಸ್ಸು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವತ್ತ ಹೊರಳಿಕೊಂಡಿದ್ದಿತ್ತು.

ಒಬ್ಬ ಅತ್ಯುತ್ತಮ ಸಂಘಟಕ, ಸ್ನೇಹಶೀಲ ವ್ಯಕ್ತಿ, ಉತ್ತಮ ಬರಹಗಾರ, ಧ್ವನಿ ಇಲ್ಲದ ವರ್ಗದ ಪ್ರಬಲ ಧ್ವನಿಯೊಂದು ಈಗ ನಮ್ಮಿಂದ ದೂರ ಆಗಿದೆ. ಅವರು ಅನಾರೋಗ್ಯದಿಂದ ಹಾಸಿಗೆ ಹಿಡಿದ ಮೇಲೆ ನಾನು ಅವರ ಆರೋಗ್ಯ ವಿಚಾರಿಸಲೆಂದು ಹೋದ ಎರಡು ಸಲವೂ ನಮ್ಮ ಹಳೆಯ ಹೋರಾಟ ಮತ್ತು ಮರೆಯಲಾಗದ ದಿನಗಳನ್ನು ನೆನೆದು ಕಣ್ಣು ತುಂಬಿಕೊಂಡಿದ್ದ ಚಿತ್ರ ಈಗಲೂ ಕಣ್ಮುಂದಿದೆ. ಆ ಸಿಂಹದ ಧ್ವನಿ ಈಗಿಲ್ಲ. ಆದರೆ ಶೋಷಣೆಗೆ ಒಳಗಾದವರ ಬಗೆಗಿನ ಆ ಹೋರಾಟದ ಕಿಚ್ಚಿಗೆ ಸಾವಿಲ್ಲ.

**–ವಿಷ್ಣು ನಾಯ್ಕ**

**(ಇದರೊಂದಿಗೆ 'ನಮ್ಮ ಸಮಾಜವಾದಿಗಳು' ಶೀರ್ಷಿಕೆಯಡಿ ಕರ್ನಾಟಕದ ಸಮಾಜವಾದಿಗಳ ಪರಿಚಯ ಮಾಲಿಕೆಯನ್ನು ಮುಕ್ತಾಯಗೊಳಿಸುತ್ತಿದ್ದೇವೆ. ಮುಂದಿನ ಸಂಚಿಕೆಯಿಂದ ಅಖಿಲ ಭಾರತ ಮಟ್ಟದ ಕೆಲ ಮುಖ್ಯ ಸಮಾಜವಾದಿ ನಾಯಕರನ್ನು ಪರಿಚಯ ಮಾಡಿಕೊಡಲಾಗುವುದು–ಸಂ)**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ – ೩೮

–ಇಂದಿರಾ ಬಿ. ಕೃಷ್ಣಪ್ಪ

## ಚಂದ್ರಪ್ರಸಾದ್ ತ್ಯಾಗಿಯವರ ಕಥೆ ಮತ್ತು ವ್ಯಥೆ

ಸಂಘಟನೆ, ಹೋರಾಟ, ಸಮಾವೇಶ, ದಿನಾಚರಣೆ, ಶಿಬಿರಗಳ ಆಯೋಜನೆ ವಿಷಯದಲ್ಲಿ ತುರ್ತುಕಾರ್ಡ್ – ದೀರ್ಘಪತ್ರಗಳ ಸಾಲುಗಳಲ್ಲಿ ಚಂದ್ರಪ್ರಸಾದ್ ತ್ಯಾಗಿಯವರು – ಸಮಸ್ಯೆಗಳಿಗೆ ತೀವ್ರ ಸಂವೇದನೆ, ಜನರೊಡನಾಟ, ಸ್ಥಳೀಯ ರಾಜಕಾರಿಣಿಗಳನ್ನು ಎದುರಿಸಿದ ಪರಿ ವ್ಯಕ್ತವಾಗುತ್ತದೆ. ಅವರ ಒಂದು ಪತ್ರದಲ್ಲಿ "ಹೋರಾಟದ ಸಮಸ್ಯೆಗಳಿಗೆ, ಹೊಳೆನರಸೀಪುರ ಎಂಎಲ್ಎ...... ರವರು ಹಾಗು ಎಂಎಲ್‌ಸಿ ... ಬಹಳ ಕುತಂತ್ರ ಕೆಲಸ ಮಾಡುತ್ತಿರುವರು. ರಾಜಕೀಯ ಭ್ರಷ್ಟರಿಗೆ ನಾವು ಸೋತರೆ ತಲೆಬಾಗಿಸಿದಂತಾಗುತ್ತದೆ" ಎಂದು ಬರೆಯುತ್ತಾ, ಕೃಷ್ಣಪ್ಪನವರು ತಕ್ಷಣವೇ ಹಾಸನಕ್ಕೆ ಬರಬೇಕೆಂದು ಬಿದರೆ ಕಾವಲು ಜಮೀನು ಮಂಜೂರಾತಿ ವಿಷಯದಲ್ಲಿ ಕಂದಾಯ ಮಂತ್ರಿಗಳು, ರೆವಿನ್ಯೂ ಆಯುಕ್ತರವರುಗಳಿಗೆ ಪತ್ರ ಬರೆಯಬೇಕೆಂದು ತಿಳಿಸಿದ್ದರು. ನಿರಂತರವಾಗಿ ಎರಡ್ಮೂರು ವರ್ಷ ನಡೆದ – ಬಿದರೆ ಕಾವಲು ಭೂ ಹೋರಾಟದ ಸಂದರ್ಭದಲ್ಲಿ ಹಾಸನಕ್ಕೆ ಬಂದಿದ್ದ ಕಂದಾಯ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರೊಂದಿಗೆ ಚರ್ಚಿಸಿದ್ದರು. ಬಿದರೆ ಕಾವಲು ಭೂ ಹೋರಾಟದ ಪ್ರಶ್ನೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ, ಸುಮಾರು ೧೫೦ ಜನ ಒಟ್ಟು ೪೫೦ ಎಕರೆ ಜಮೀನು ಪಡೆದರು. ಇದು ಹಾಸನ ಜಿಲ್ಲೆಯಲ್ಲಿ ನಡೆದ ಯಶಸ್ವಿ ಭೂ ಹೋರಾಟವಾಗಿತ್ತು. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ದಲಿತರ ಮೇಲಿನ ಪೋಲೀಸ್ ದೌರ್ಜನ್ಯದ ಬಗ್ಗೆ ಅಂದಿನ ಗೃಹಮಂತ್ರಿ ಬಿ. ರಾಚಯ್ಯನವರಿಗೆ ಪ್ರೊ. ಬಿ.ಕೆ. ಸುಧೀರ್ಘ ಪತ್ರ ಬರೆದಿದ್ದರು. ಈ ವಿಷಯದಲ್ಲಿ ಬಿ. ಬಸವಲಿಂಗಪ್ಪನವರು, ಶಾಸನಸಭೆಯಲ್ಲಿ ಗೃಹಸಚಿವರಿಗೆ ಇದನ್ನು ಪ್ರಶ್ನಿಸಿದ್ದರು. ಇದಕ್ಕೆ ಗೃಹಸಚಿವರು "ಇದು ದಲಿತರೊಳಗಿನ ಗುಂಪು ಘರ್ಷಣೆ" ಎಂದು ಹಾರಿಕೆಯ ಉತ್ತರ ನೀಡಿದ್ದರು. ಈ ವಿಷಯದಿಂದ ತೀವ್ರ ಮನನೊಂದ ತ್ಯಾಗಿಯವರು, ಕೃಷ್ಣಪ್ಪನವರಿಗೆ ಪತ್ರ ಬರೆದು "ಹಾಸನಕ್ಕೆ ತಕ್ಷಣ ಬರಬೇಕೆಂದೂ, ಇಲ್ಲವಾದಲ್ಲಿ, ನಾವು ಹೋರಾಟದಲ್ಲಿ ಕ್ಷೀಣವಾಗಿ ಸಾಯಬೇಕೇ? ನೀವೇ ಹೇಳಿ; ಕೂಡಲೇ ಬನ್ನಿ" ಎಂದು ತಿಳಿಸಿದ್ದರು.

ಈ ಹೋರಾಟ ಜನತಾ ಪಕ್ಷ ಮತ್ತು ದಸಂಸದ ನಡುವಣ ಹೋರಾಟವನ್ನು ತೀವ್ರವಾಗಿಸಿತ್ತು. ಯಾವ ಸಂಘಟನೆ ಜನತಾ ಪಕ್ಷವನ್ನು ಚುನಾವಣೆಯಲ್ಲಿ ಬೆಂಬಲಿಸಿತ್ತೋ, ಅದೇ ಪಕ್ಷ ಅಧಿಕಾರ ಬಂದಾಗ, ಸಂಘಟನೆಯವರನ್ನು ಬಗ್ಗು ಬಡಿಯತೊಡಗಿದ್ದು ದಸಂಸಕ್ಕೆ ಉಗುಳು ನುಂಗಲೆಡೆಯಿಲ್ಲದಂತಾಗಿತ್ತು. ಮುಂದುವರಿದ ಹೋರಾಟದ ಭಾಗವಾಗಿ, ಬೆಂಗಳೂರಿನಲ್ಲಿ ಗೃಹಸಚಿವರ ಮನೆ ಮುಂದೆ ಪಿಕೆಟಿಂಗ್‌ನ್ನು, ಪ್ರೊ. ಬಿ.ಕೆ. ಹಾಗೂ ಬೆಂಗಳೂರಿನ ಜಿಲ್ಲಾ ಘಟಕ ವ್ಯವಸ್ಥೆ ಮಾಡಿತ್ತು. ಇದರಿಂದ ತಲ್ಲಣಗೊಂಡ ಸಚಿವರು, ಸಂಘಟನೆಯವರನ್ನು ಕರೆಯಿಸಿ ಮಾತುಕತೆ ನಡೆಸಿತ್ತು. ಸುಮಾರು ಒಂದು ತಿಂಗಳವರೆಗೆ ನಡೆದ ಈ ಹೋರಾಟದಲ್ಲಿ, ದಲಿತ ನೌಕರರ ಮೇಲೂ ಪ್ರಕರಣಗಳು ದಾಖಲಾಗಿದ್ದವು. ಕೆಲವರನ್ನು ಸಸ್ಪೆಂಡ್ ಮಾಡಲಾಗಿತ್ತು. ಕಾಲಾಂತರದಲ್ಲಿ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆದು ತರುವಾಯ ಪ್ರಕರಣಗಳಿಗೆ 'ಬಿ' ರಿಪೋರ್ಟ್ ಹಾಕಲಾಯಿತು.

ಹಾಸನ ಜಿಲ್ಲೆಯಲ್ಲಿ ದಸಂಸ ಬಲಿಷ್ಠ ಸಂಘಟನೆಯಾಗಿ ಬೆಳೆದಿತ್ತು. ಇದಕ್ಕೆ, ಚಂದ್ರಪ್ರಸಾದ್ ತ್ಯಾಗಿಯವರ ಕರ್ತೃತ್ವ ಶಕ್ತಿ, ಬದ್ಧತೆ, ಮಿಡಿವ ಹೃದಯವಂತಿಕೆಯೇ ಕಾರಣವಾಗಿತ್ತು. ತ್ಯಾಟೂರು, ಹಾಲುವಾಗಿಲು ಮಾದಿಹಳ್ಳಿ, ಹೊಸಳ್ಳಿಯಲ್ಲಿನ ನಿವೇಶನ ಹೋರಾಟಗಳು, ಬಾಳ್ಳುಪೇಟೆ ದಲಿತರ ಮೇಲಿನ ದೌರ್ಜನ್ಯ, ಹಾಸನದ ತಾಯಮ್ಮ ಮತ್ತು ಬೋರಮ್ಮನ ಮೇಲಿನ ಅತ್ಯಾಚಾರ, ಕೊಲೆ – ವಿರೋಧದ ಹೋರಾಟಗಳು – ಹಾಸನ ಜಿಲ್ಲೆಯಲ್ಲಿ ನಡೆದ ಪ್ರಮುಖ ಹೋರಾಟಗಳಾಗಿವೆ. ಈ ಹೋರಾಟಗಳಲ್ಲಿ, ಕಾಲೇಜು ಉಪನ್ಯಾಸಕರಾಗಿದ್ದ ಹೆಚ್.ಎಂ. ರುದ್ರಸ್ವಾಮಿ, ಸಾಹಿತಿಗಳಾದ ಬಾನು ಮುಷ್ತಾಕ್, ಚಂದ್ರಶೇಖರ್, ಕೇಶವ ಧರಣಿ ಮುಂತಾದವರು ಪಾಲ್ಗೊಳ್ಳುತ್ತಿದ್ದರು.

ಭದ್ರಾವತಿಯ ಕಬ್ಬಿಣ ಉಕ್ಕು ಕಾರ್ಖಾನೆಯಲ್ಲಿ ಸಾಮಾನ್ಯ ಕಾರ್ಮಿಕರಾಗಿದ್ದ ಚಂದ್ರಪ್ರಸಾದ್ ತ್ಯಾಗಿಯವರು, ಸಾರ್ವಜನಿಕ ಸಮಸ್ಯೆಗಳನ್ನು ಕುರಿತು



ತಮ್ಮ ೫೦ನೇ ಹುಟ್ಟುಹಬ್ಬದ ಸಂಭ್ರಮದಲ್ಲಿ ಚಂದ್ರಪ್ರಸಾದ್ ತ್ಯಾಗಿ

ವಿಶ್ಲೇಷಣಾತ್ಮಕವಾಗಿ ಭಾಷಣ ಮಾಡುವಷ್ಟು, ತರಬೇತಿ ಶಿಬಿರಗಳಲ್ಲಿ ವಿವರಣಾತ್ಮಕವಾಗಿ ವಿಷಯ ಮಂಡಿಸುವಷ್ಟು ಪ್ರಬುದ್ಧರಾಗಿ ಬೆಳೆದಿದ್ದರು. ಇಂಥ ಹುಣ್ಣಿಮೆಯ ಬೆಳದಿಂಗಳ ಚಂದಿರನ ಮೇಲೆ ಕಪ್ಪು ಛಾಯೆಗಳು ಮೆಲ್ಲಗೆ ಆವರಿಸತೊಡಗಿತ್ತು. ಬಿದರೆ ಕಾವಲು ಹೋರಾಟ ಸಂದರ್ಭದಲ್ಲಿ ಮೂರ್‍ನಾಲ್ಕು ಬಾರಿ ಕೃಷ್ಣಪ್ಪ ಹೋಗಿದ್ದಾಗ, ತ್ಯಾಗಿಯವರು ಭೇಟಿಯಾಗಲೇ ಇಲ್ಲ. ಈ ವಿಷಯದಲ್ಲಿ ಖಾರವಾಗಿಯೇ ಪತ್ರ ಬರೆದಿದ್ದ ಕೃಷ್ಣಪ್ಪನವರಿಗೆ, ತ್ಯಾಗಿಯವರು ಹಲವಾರು ಒತ್ತಡದ ಕಾರ್ಯಭಾರದ ಸಮಜಾಯಿಷಿ ಕೊಟ್ಟಿದ್ದರು. ಬಿದರೆ ಕಾವಲು ಹೋರಾಟಕ್ಕೆ ಹೋಗಿದ್ದ ಭದ್ರಾವತಿಯ ಎನ್. ಗಿರಿಯಪ್ಪ, ಪೂರ್ಣಾವಧಿ ಕಾರ್ಯಕರ್ತರಾಗಿದ್ದ ವಿಜಯಪಾಟೀಲ್, ರಾಮದೇವ್ ರಾಖೆ ಮುಂತಾದವರು ತ್ಯಾಗಿಯವರ ವ್ಯಕ್ತಿತ್ವದಲ್ಲಾದ ಬದಲಾವಣೆಗಳನ್ನು ಭದ್ರಾವತಿಯ ಮನೆಗೆ ಬಂದು ವಿವರಿಸಿದ್ದರು. ಜನತಾ ಪಕ್ಷದೊಂದಿಗಿನ ಅವರ ಒಡನಾಟ, ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವಿಕೆ, ದಸಂಸ ತಾಲ್ಲೂಕು ಪದಾಧಿಕಾರಿಗಳ ಹೆಸರಲ್ಲಿ ಚುನಾವಣಾ ಕರಪತ್ರ ಹೊರಡಿಸಿರುವುದು, ಸಾರ್ವತ್ರಿಕ ಸಮಸ್ಯೆಗಳನ್ನು ಹೋರಾಟಕ್ಕೆ ಎತ್ತದೆ, ವ್ಯಕ್ತಿಗತ ಸಮಸ್ಯೆ ಪರಿಹಾರಗಳಿಗೆ ದಸಂಸ ಹೆಸರು ಬಳಸಿಕೊಳ್ಳುವುದು ಇತ್ಯಾದಿಗಳ ಬಗ್ಗೆ ಹಲವರಿಂದ ಸುದ್ದಿಗಳು ಕೃಷ್ಣಪ್ಪನವರ ನಿದ್ದೆಗೆಡಿಸಿತ್ತು.

ದಸಂಸ ಕಾರ್ಯಕರ್ತರೆನಿಸಿಕೊಂಡವರಿಗೆ ಸರಿಯಾದ ಮೆದುಳಿಲ್ಲವೆನಿಸಿದೆ. ಸ್ವಲ್ಪ ಮಾತನಾಡಲು ಬಂದ ತಕ್ಷಣದ ಚುನಾವಣೆಯಂತಹ ಅಧಿಕಾರದಾಸೆಗೆ ಓಡುವ ಸ್ಥಿತಿಯಲ್ಲಿರುವುದು ಅಪಾಯಾಕಾರಿಯಾಗಿದೆ. ಅಲ್ಲದೆ ದಸಂಸದಲ್ಲಿ ವ್ಯಕ್ತಿಗತ ದ್ವೇಷ ಅಸೂಯೆಗಳು, ಆರೋಪಗಳು ಪ್ರಾರಂಭವಾಗಿ ಸಂಘಟನೆ ಛಿದ್ರಗೊಳಿಸಲು ಪ್ರಯತ್ನಿಸುವ ಶಕ್ತಿಗಳು ಉಂಟಾಗುತ್ತಿವೆ. ಇದನ್ನರಿತು ನಾವು ಸಂಘಟನೆಯ ಚೈತನ್ಯದ ಬಗ್ಗೆ ಹೊಸಹೆಜ್ಜೆ ಇಡಬೇಕು. ಸಂಘಟನೆಗೆ ಅರ್ಪಿಸಿಕೊಂಡಿರುವ ನಾನು ಮತ್ತು ದಸಂಸದ ಅನೇಕರು ನಿದ್ರೆಯೂ ಬಾರದೆ ಚಿಂತೆಗೆ ಒಳಗಾಗಿದ್ದೇವೆ. ನೀವು ಈ ಬಗ್ಗೆ ತೀವ್ರ ಗಮನಹರಿಸಬೇಕೆಂದು ಮನನೊಂದು ಹೇಳುತ್ತಿದ್ದ ವ್ಯಕ್ತಿ – ಚಂದ್ರಪ್ರಸಾದ್ ತ್ಯಾಗಿ, ಸಂಘಟನೆಯ ಸಂವಿಧಾನದ ವಿರೋಧವಾಗಿ ನಡೆದುಕೊಳ್ಳತೊಡಗಿದ್ದು, ಪಕ್ಷ ರಾಜಕಾರಣದ ಕೈವಾಡಕ್ಕೆ ಬಲಿಯಾದರೆನಿಸುತ್ತದೆ. ಎನ್. ಮುನಿಸ್ವಾಮಿಯವರು ರಾಜ್ಯ ಸಂಚಾಲಕರಾಗಿದ್ದಾಗ, ತ್ಯಾಗಿಯವರು ರಾಜ್ಯ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾಗಿದ್ದರೂ ಸಹ, ಹಾಸನದ ಜಿಲ್ಲಾ ಕಚೇರಿಗೆ ಅವರ ಅನುಯಾಯಿಗಳೊಂದಿಗೆ ನುಗ್ಗಿ ಕಡತಗಳು, ಪೀಠೋಪಕರಣಗಳನ್ನು ಹೊತ್ತೊಯ್ದಿದ್ದಾರೆಂದೂ, ಬದನವಾಳು–ಹೂಡಿ ನಿವೇಶನ ಹೋರಾಟಕ್ಕೆ ಬೆಂಬಲ ಸೂಚಿಸಿ ನಡೆಸಿದ ಧರಣಿಗೆ ಪ್ರತಿಸ್ಪರ್ಧಿಯಾಗಿ, ಎದುರು ಭಾಗದಲ್ಲಿ ತ್ಯಾಗಿಯವರು, ಅವರ ಬೆಂಬಲಿಗರೊಂದಿಗೆ ಧರಣಿ ನಡೆಸಿದ್ದಾರೆಂದೂ ಹೇಳಿ "ದಸಂಸದಲ್ಲಿ ಒಡಕು" ಎಂಬ ಶೀರ್ಷಿಕೆಯಲ್ಲಿ ಪತ್ರಿಕೆಗಳಲ್ಲಿ ವರದಿಗಳು ಪ್ರಕಟಗೊಂಡಿದ್ದವು. ನಂತರದ ಬೆಳವಣಿಗೆಯಲ್ಲಿ ಜನತಾಪಕ್ಷ (ಜನತಾದಳ) ದೊಂದಿಗೆ ಗುರ್ತಿಸಿಕೊಂಡ ತ್ಯಾಗಿಯವರನ್ನು ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷರನ್ನಾಗಿ ಮಾಡಿತ್ತು.

ಯಾವುದೋ ಕಾರಣದಿಂದ ಅವರ ಅಧ್ಯಕ್ಷಾವಧಿ ಪೂರ್ಣಗೊಳ್ಳಲಿಲ್ಲ. ನಂತರ ದೈಹಿಕ ಅನಾರೋಗ್ಯದ ಕಾರಣ ತ್ಯಾಗಿಯವರು ಈ ಲೋಕವನ್ನು ತ್ಯಜಿಸಿದರು.

ಆಗಾಗ್ಗೆ ಸಂಘಟನೆಯ ವಿಚಾರದಲ್ಲಿ ನಮ್ಮ ಭದ್ರಾವತಿ ಮನೆಗೆ ಬರುತ್ತಿದ್ದ ತ್ಯಾಗಿಯವರು, ಅವರ ಮಕ್ಕಳು, ಅವರ ಓದು ವಿಚಾರಗಳನ್ನೂ ನನ್ನಲ್ಲಿ ಹಂಚಿಕೊಳ್ಳುತ್ತಿದ್ದರು. ದೇವನೂರು ಮಹಾದೇವ ಅವರ "ಎದೆಗೆ ಬಿದ್ದ ಅಕ್ಷರ" ಕೃತಿ ಬಿಡುಗಡೆ ಸಮಾರಂಭ ದಿ. ೨೩.೦೨.೨೦೧೩ರಲ್ಲಿ ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜಿಸಲಾಗಿತ್ತು. ಪುಸ್ತಕದ ಲೋಕಾರ್ಪಣೆ ಜವಾಬ್ದಾರಿ ನನ್ನದಾಗಿತ್ತು. ಆ ದಿನ ತ್ಯಾಗಿಯವರ ಪತ್ನಿಯವರು ನನ್ನೊಡನೆ ವೇದಿಕೆಯಲ್ಲಿದ್ದರು. ಬಹಳ ವರ್ಷಗಳ ನಂತರದ ಭೇಟಿ ಅದಾಗಿತ್ತು. ಕಾರ್ಯಕ್ರಮದ ನಂತರ ಅವರ ಮಗ ಕ್ರಾಂತಿ, ಮಗಳು, ಸೊಸೆ, ಮೊಮ್ಮಕ್ಕಳನ್ನು ಪರಿಚಯಿಸಿದ್ದರು. ನಂತರ ಹಾಸನದಲ್ಲಿ ದಲಿತ ಸಂಘಟನೆಯವರು ಆಯೋಜಿಸಿದ್ದ 'ಸಾವಿತ್ರಿ ಬಾ ಪುಲೆ' ಜನ್ಮದಿನಾಚರಣೆಗೆ ಹೋಗಿದ್ದ ನಾನು ತ್ಯಾಗಿಯವರ ಮನೆಗೆ ಹೋಗಿದ್ದೆ. ಮಗನೋ, ಮಗಳೋ ಜನತಾದಳದಿಂದ ಹಾಸನದ ನಗರಸಭೆಗೆ ಸ್ಪರ್ಧಿಸಿದ್ದು, ಪ್ರಚಾರದ ತುರಾತುರಿಯಲ್ಲಿದ್ದರು. ಮನೆಯವರೆಲ್ಲರ ಆದರೋಪಚಾರದ ನಡುವೆ ಹಳೆಯ ಆಲ್ಬಂಗಳ ವೀಕ್ಷಣೆ ನನ್ನನ್ನು ದಸಂಸ ನಡೆದು ಬಂದ ದಾರಿಯನ್ನು ನೆನಪಿಗೆ ತಂದಿತ್ತು. ಡಾ. ಶಿವರಾಮ ಕಾರಂತರ ಕೃತಿ 'ಅಳಿದ ಮೇಲೆ' ಕಾದಂಬರಿಯ ನಾಯಕ – ಯಶವಂತರಾಯರ ಉಯಿಲಿನ ಅನುಸಾರ, ಸಂಬಂಧಿಸಿದ ವ್ಯಕ್ತಿಗಳನ್ನು ಅರಸುತ್ತಾ ಹೋಗುವಾಗ ಯಶವಂತರಾಯನ ಜೀವನ ತತ್ವಗಳೂ ಹಾಗೂ ಅವರು ತೆಗೆದುಕೊಳ್ಳುವ ಅತಾರ್ಕಿಕ ನಡೆಗಳು ವಿಸಂಗತಿಯಾಗಿ ಕಂಡು ಬರುವಂತೆ, ಚಂದ್ರಪ್ರಸಾದ್ ತ್ಯಾಗಿಯವರು ಜೀವನದಲ್ಲಿ ಅಳವಡಿಸಿಕೊಂಡ ಜೀವನ ತತ್ವಗಳು ಮತ್ತು ಕಾಲಕ್ರಮೇಣ ಅವರು ತೆಗೆದುಕೊಂಡ ನಿರ್ಣಯಗಳು ವಿರೋಧಾಭಾಸವಾಗಿ ಕಂಡು ಬರುತ್ತವೆ. ಹಾಗಿದ್ದರೂ ಕದಸಂಸವನ್ನು ಕಟ್ಟುವಲ್ಲಿ ತ್ಯಾಗಿಯವರ ಅರ್ಪಣಾ ಭಾವ ಮತ್ತು ನಿಸ್ವಾರ್ಥತೆ ಸಂಘಟನೆ ಕಟ್ಟುವವರಿಗೆ ಸ್ಫೂರ್ತಿಯಾಗಿದೆ ಮತ್ತು ಮಾದರಿಯಾಗಿದೆ. **(ಮುಂದುವರೆಯುವುದು)**

## ಅಂಬೇಡ್ಕರ್ ಪರಿನಿರ್ವಾಣ ದಿನದ ನೆನಪಿನಲ್ಲಿ...



**ಡಿಸೆಂಬರ್ ೬, ಅಂಬೇಡ್ಕರ್ ಅವರ ಪರಿನಿರ್ವಾಣ ದಿನ. ಅವರು ಬದುಕಿದ್ದಾಗಲೇ, ಅವರು ರೂಪಿಸಿದ ಸಿದ್ಧಾಂತ ಮತ್ತು ಕಟ್ಟಿಕೊಟ್ಟ ಹೋರಾಟಗಳು ಕುಸಿಯತೊಡಗಿದ ಸೂಚನೆಗಳು ಅವರಿಗೇ ಕಾಣತೊಡಗಿದ್ದವು. ತಮ್ಮ ಅನುಯಾಯಿಗಳು ದಾರಿ ತಪ್ಪುತ್ತಿದ್ದಾರೆ ಎಂಬ ಆತಂಕ ಅವರನ್ನು ಕಾಡತೊಡಗಿತ್ತು. ತಮ್ಮ ಹೋರಾಟದಿಂದ ಪ್ರಯೋಜನ ಪಡೆದ ದಲಿತರು ಆ ಪ್ರಯೋಜನಗಳಿಂದ ವಂಚಿತರಾಗಿರುವ ದಲಿತರ ಕೈಹಿಡಿಯುತ್ತಿಲ್ಲ ಎಂಬ ನೋವು ಅವರನ್ನು ಕಾಡತೊಡಗಿತ್ತು. ಹಾಗಾಗಿಯೇ ಅವರು ತಾವು ಎಳೆದುಕೊಂಡು ಬಂದ ದಲಿತ ಹೋರಾಟದ ತೇರನ್ನು ಮುಂದೊಯ್ಯಲಾಗದಿದ್ದರೂ ಹಿಂದಕ್ಕೊಯ್ಯಬೇಡಿ ಎಂದು ಅವರು ತಮ್ಮ ಜೀವಿತ ಕಾಲದಲ್ಲೇ ಅಸಹಾಯಕರಾಗಿ ಮನವಿ ಮಾಡಿದ್ದರು.**

**ಆದರೆ ಇಂದೇನಾಗಿದೆ? ಅಂಬೇಡ್ಕರ್ ಹೆಸರಿನ ಹೋರಾಟಗಳೇನೋ ವ್ಯಾಪಕವಾಗಿ ಹಬ್ಬಿವೆ. ಅವು ಹೆಚ್ಚು ಕೂಗುಮಾರಿಯೂ ಆಗಿವೆ. ಅಂಬೇಡ್ಕರ್ ದೇವರಾಗಿ ಪೀಠ ಏರಿ ನಿಜವಾಗಿ 'ಅಸ್ಪೃಶ್ಯ'ರಾಗಿಬಿಟ್ಟಿದ್ದಾರೆ–ಅವರನ್ನು ಅವರ ಅಭಿಮಾನಿಗಳ ಹೊರತಾಗಿ ಇನ್ನಾರೂ 'ಮುಟ್ಟು'ವಂತಿಲ್ಲ! ಬಹುಪರಾಕುಗಳ ಹೊರತಾಗಿ ಇನ್ನಾವ ರೀತಿಯಲ್ಲೂ ಅವರನ್ನು ಸ್ಮರಿಸುವಂತಿಲ್ಲ. ಜೊತೆಗೆ ಈ ಹಿಂದಿನ ಮಹಾರಾಷ್ಟ್ರ ದಲಿತ ಪ್ಯಾಂಥರ್ಸ್ ಅಥವಾ ಕರ್ನಾಟಕದ ದಲಿತ ಚಳುವಳಿಯಂತೆ ಅದು ಸೃಜನಶೀಲವಾಗಿ ತನ್ನ ರಾಜಕೀಯ ಮತ್ತು ಸಾಂಸ್ಕೃತಿಕ ಬಹುರೂಪಗಳನ್ನು ಅದು ತನ್ನನ್ನು ತಾನು ಅಭಿವ್ಯಕ್ತಗೊಳಿಸಿಕೊಳ್ಳಲಾರದೆ ಸುಮ್ಮನೆ ತಳಮಳಿಸುತ್ತಿದೆ. ಇದರ ಪರಿಣಾಮವೇ ದಲಿತ ನಾಯಕತ್ವ ತನ್ನ ತಾತ್ವಿಕ ದೃಷ್ಟಿಕೇಂದ್ರವನ್ನು ಕಳೆದುಕೊಂಡು ತಾನು ಹೋಗಬಾರದೆಡೆಗಳಲೆಲ್ಲ ಹೋಗಿ, ಆಡಬಾರದ ಮಾತುಗಳನ್ನೆಲ್ಲ ಆಡಿ ದಲಿತ ಸಮೂಹದ ವಿಶ್ವಾಸಾರ್ಹತೆಯನ್ನೂ, ಸಾರ್ವಜನಿಕರ ಸಹಾನುಭೂತಿಯನ್ನೂ ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ. ಈ ಬಗ್ಗೆ ಒಂದು ವಿಶ್ಲೇಷಣೆ ಇಲ್ಲಿದೆ.–ಸಂ.**

# ದಲಿತ ಹೋರಾಟ, ಸಾಹಿತ್ಯ ಮತ್ತು ನಾಯಕತ್ವ : ಕೆಲ ದ್ವಂದ್ವಗಳು

**–ಡಾ. ವಾಸುದೇವ ಬೆಳ್ಳೆ**

ಆಧುನಿಕ ಭಾರತವನ್ನು ಪ್ರಜಾತಾಂತ್ರಿಕ ಪ್ರಭುತ್ವ ಸಮಾಜವಾದಿ ವ್ಯವಸ್ಥೆಯಾಗಿ ನಿರ್ಮಿಸುವ ಅವರ ಪ್ರಯತ್ನದಲ್ಲಿ ನಿರ್ದಿಷ್ಟವಾಗಿ ಭಾರತದ ದಲಿತರ ಕುರಿತ ಅಂಬೇಡ್ಕರ್ ಅವರ ಕೆಲಸ ಮತ್ತು ಚಿಂತನೆ ಬಹಳ ಮಹತ್ವದ್ದು. ಕಾಲಾಂತರದಲ್ಲಿ ಜಾತಿಯೆಂಬ ಅತ್ಯಂತ ಅಸಹ್ಯ ನೀಚ ಸಮಾಜ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯೆಂಬ ಅಮಾನವೀಯ ಕಟ್ಟುಪಾಡಿಗೆ ಒಳಗಾದವರ ಏಳ್ಗೆಯ ಕುರಿತು ಚಾರಿತ್ರಿಕವಾದ ಹೊಸ ಚಿಂತನೆಯನ್ನು ಅವರು ಕಟ್ಟಿದರು. ಜಾತಿ ಮತ್ತು ಅಸ್ಪೃಶ್ಯತೆಯಿಂದ ನಿರ್ಮಾಣವಾಗುವ ವ್ಯಕ್ತಿತ್ವವನ್ನು ಪ್ರಶ್ನಿಸಿ ದಲಿತರಿಗೂ ಹೊಸ ವ್ಯಕ್ತಿತ್ವದ ಅಸ್ಮಿತೆಯನ್ನು ಶೋಧಿಸಿದ್ದು ಅಂಬೇಡ್ಕರರ ಬಹಳ ದೊಡ್ಡ ಸಾಧನೆ ಎನ್ನಬಹುದು.

ಅಂಬೇಡ್ಕರ್ ಹೋರಾಟ ಮತ್ತು ಚಿಂತನೆ ಆಧುನಿಕ ಭಾರತದ ದೃಷ್ಟಿಯಿಂದ ಉತ್ತಮ ಆರಂಭ. ಆದರೆ ಅದನ್ನು ಮುಂದಿನ ಪೀಳಿಗೆಯವರು ಮುಂದುವರಿಸಬೇಕು ಎಂಬ ಇಚ್ಛೆಯನ್ನು ಅವರೇ ವ್ಯಕ್ತಪಡಿಸಿದ್ದರು. ಬಹಳ ಮಹತ್ವದ ಅಂಶ ಏನೆಂದರೆ ಭಾರತದ ಅತ್ಯಂತ ಶೋಷಿತರ ಬಗ್ಗೆ ಭವಿಷ್ಯತ್ತಿನಲ್ಲಿ ವಿಪುಲವಾದ ಚಿಂತನೆಯನ್ನು ಮಾಡಲು ಅನುಕೂಲವಾಗಬಲ್ಲ ಚರ್ಚೆಗಳನ್ನು ಅವರು ಹುಟ್ಟುಹಾಕಿ ಹೋಗಿದ್ದಾರೆ. ಮಾತ್ರವಲ್ಲ, ದಲಿತರ ಸಾಮಾಜಿಕ ನ್ಯಾಯದ ಪ್ರಶ್ನೆಗೆ ಒಂದು ಬಗೆಯ ಅಗತ್ಯವಾದ ರಕ್ಷಣೆಯನ್ನು ಅವರು ಒದಗಿಸಿಕೊಟ್ಟಿದ್ದಾರೆ.

ಆದರೆ ಇತ್ತೀಚೀನ ದಶಕಗಳಲ್ಲಿ ಕಂಡುಬರುತ್ತಿರುವ ದಲಿತ ನಾಯಕತ್ವದಲ್ಲಿ ಅಂಬೇಡ್ಕರ್ ಹಾಕಿಕೊಟ್ಟ ಸೈದ್ಧಾಂತಿಕ ನಿಖರತೆ, ವಿಶಾಲ ದೃಷ್ಟಿಕೋನ, ದೂರದೃಷ್ಟಿತ್ವ, ಆಳವಾದ ಚಾರಿತ್ರಿಕ ತಿಳುವಳಿಕೆ, ನಿಸ್ಸಂದಿಗ್ಧ ಜನಪರ–ಸಮುದಾಯ ಪರವಾದ ಕಾಳಜಿಗಳು ವ್ಯಕ್ತವಾಗುತ್ತಿಲ್ಲ. ತಕ್ಷಣದ ಲಾಭ, ಸೀಮಿತ ವ್ಯಾಪ್ತಿ, ಸ್ವಾರ್ಥಪರವಾದ ರಾಜಕೀಯ ಉದ್ದೇಶಗಳಿಂದ ದಲಿತ ನಾಯಕತ್ವ ರೂಪುಗೊಳ್ಳುತ್ತಿದೆ. ಇದರಿಂದಾಗಿ ಮತ್ತು ಇನ್ನಿತರ ಹಲವಾರು ಕಾರಣಗಳಿಂದಾಗಿ ದಲಿತ ನಾಯಕತ್ವ ಇಂದು ದಿಕ್ಕುತಪ್ಪುತ್ತಿದೆ. ಮಾರ್ಗದರ್ಶನರಹಿತವಾದ ದಲಿತ ನಾಯಕತ್ವದ ಬಿಕ್ಕಟ್ಟುಗಳ ಒಂದೆರಡು ಅಂಶಗಳನ್ನು ಗಮನಿಸುವುದು ಈ ಲೇಖನದ ಉದ್ದೇಶವಾಗಿದೆ.

ಅಂಬೇಡ್ಕರೋತ್ತರ ಭಾರತದಲ್ಲಿ ಅವರು ದಲಿತ ಚಿಂತನೆ ಹಾಗೂ ಹೋರಾಟಗಳ ಚಿಂತನಾ ಸ್ಫೂರ್ತಿಯಾಗಿ ಬಂದರು. ಈ ಕಾಲಘಟ್ಟದ ನಂತರ ಅಂಬೇಡ್ಕರ್ ಬರೀ ರಾಜಕೀಯ ಚಳುವಳಿಯ ಸ್ಫೂರ್ತಿಯಾಗಿ ಮಾತ್ರ ಮೂಡಿಬರಲಿಲ್ಲ. ಜೊತೆಗೆ ಸಾಹಿತ್ಯ, ಕಲೆಗಳ ಸೃಷ್ಟಿಗೂ ಸ್ಫೂರ್ತಿಯಾದರು. ಈ ಬಗೆಯ ಸಾಹಿತ್ಯ, ಕಲೆ, ರಾಜಕೀಯ ಚಳುವಳಿಗಳು ದೇಶದ ಬೇರೆ ಬೇರೆ ರಾಜ್ಯ, ಪ್ರಾಂತ್ಯಗಳಲ್ಲಿ ಹುಟ್ಟಿಕೊಂಡವು ಎನ್ನುವುದು ತಿಳಿದಿರುವ ವಿಚಾರ. ಹಾಗೆ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಸಾಹಿತಿ ಕಲಾವಿದರ ಜೊತೆಗೆ ಹೋರಾಟಗಾರರ ಸಂಘಟನೆಯಾಗಿ ಹುಟ್ಟಿಕೊಂಡಿತು.

ಆಧುನಿಕ ಶಿಕ್ಷಣ ಪಡೆದ ವಿದ್ಯಾವಂತರು, ಉದ್ಯೋಗಸ್ಥರು, ತಕ್ಕ ಮಟ್ಟಿಗೆ ಅಂಬೇಡ್ಕರರನ್ನು ಓದಿಕೊಂಡವರು ಹಾಗೂ ಸಾಹಿತ್ಯ ಬರೆಯುವ ಆಸಕ್ತಿ ಇದ್ದವರಿಂದ ಈ ದಸಂಸ ಸಂಘಟನೆ ಹುಟ್ಟಿಕೊಂಡಿತೆನ್ನುವುದು ಎಲ್ಲರಿಗೆ ತಿಳಿದಿದೆ. ಅಂಬೇಡ್ಕರರ ಚಳುವಳಿಯ ಪ್ರೇರಣೆ, ದೇವರಾಜ ಅರಸು ಅವರ ಆಡಳಿತದಲ್ಲಿನ ಶೋಷಿತಪರ ನಿರ್ಧಾರಗಳು, ಆಧುನಿಕ ಶಿಕ್ಷಣ, ವೈಚಾರಿಕತೆ, ವಿದೇಶಗಳಲ್ಲಿ ಹಾಗೂ ನಮ್ಮ ದೇಶದ ಇತರ ರಾಜ್ಯಗಳಲ್ಲಿ ಆರಂಭಗೊಂಡ ದಲಿತ/ಕಪ್ಪು ಜನರ ಹೋರಾಟಗಳು ದಸಂಸದ ಹುಟ್ಟಿಗೆ ಕಾರಣವಾಯಿತು. ಇಲ್ಲಿದ್ದ ಜಾತಿಯ



**ಒಂದು ದಲಿತ ಸಾಹಿತ್ಯ ಸಮ್ಮೇಳನ**

ಶೋಷಣೆ, ದಲಿತ ವರ್ಗದ ದುಃಸ್ಥಿತಿ, ಜೊತೆಗೆ ೧೯೭೦ರ ಕಾಲಘಟ್ಟದಲ್ಲಿ ಕರ್ನಾಟಕದ ಪ್ರಬಲ ಜಾತಿಗಳು ದಲಿತರ ಮೇಲೆ ಮಾಡಿದ ದೌರ್ಜನ್ಯ ದಸಂಸದ ಹುಟ್ಟಿಗೆ ಕಾರಣವಾಗಿದೆ. ಪಾರಂಪರಿಕವಾದ ಜಾತಿಯ ಶೋಷಣೆಯ ಜೊತೆಗೆ ಸ್ವಲ್ಪ ಮಟ್ಟಿಗೆ ಕಲಿತ ದಲಿತರು ತಮ್ಮ ಹೊಸ ಅಸ್ಮಿತೆ ಮತ್ತು ಹಕ್ಕುಗಳ ಬಗ್ಗೆ ತೋರಿದ ಜಾಗೃತಿ ಈ ಬಗೆಯ ದೌರ್ಜನ್ಯ ಹಿಂಸೆಗೆ ಕಾರಣವಾಗಿದೆ.

ಕರ್ನಾಟಕದ ಚರಿತ್ರೆಯಲ್ಲಿ ದಸಂಸದ ಹುಟ್ಟು ಮತ್ತು ಹೋರಾಟ ಅತ್ಯಂತ ಅಪೂರ್ವವಾದುದು ಮತ್ತು ಮಹತ್ವದ್ದು ಎಂಬುದಾಗಿ ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಈ ದಸಂಸ ಸಂಘಟನೆ ಪ್ರಬಲ ಜಾತಿಗಳ ಶಕ್ತಿಗೆ ಪ್ರತಿರೋಧ ತೋರುವ, ಸೆಡ್ಡು ಹೊಡೆಯುವ ಧೈರ್ಯವನ್ನು ಗಳಿಸಿಕೊಂಡಿತು. ಜೊತೆಗೆ ದಲಿತರು ಭೂಮಿಯನ್ನು ಪಡೆಯುವ ಹೋರಾಟವನ್ನು ಕೈಗೆತ್ತಿಕೊಂಡು ದಸಂಸ ಹಲವಾರು ಕಡೆಗಳಲ್ಲಿ ಅದರಲ್ಲಿ ಸಫಲತೆಯನ್ನು ಸಾಧಿಸಿತು. ದಲಿತ ಜನರ ಶೋಷಣೆಗೆ ಮೂಲ ಕಾರಣವಾದ ಮೌಢ್ಯದಿಂದ ಬಿಡುಗಡೆಗೊಳಿಸುವ, ಅವರಲ್ಲಿ ವೈಚಾರಿಕತೆ ಮತ್ತು ಶಿಕ್ಷಣದ ಜಾಗೃತಿಯನ್ನು ಮೂಡಿಸುವ ದಿಸೆಯಲ್ಲಿ ಈ ಸಂಘಟನೆ ಕೆಲಸ ಮಾಡಿತು.

ಆದರೆ ದಸಂಸ ಸಂಘಟನೆಯ ಮೂಲ ಸ್ವರೂಪದಲ್ಲಿಯೇ ಹಲವಾರು ಮಿತಿಗಳಿದ್ದವು. ಮುಖ್ಯವಾಗಿ ಅದು ಹೋರಾಟಗಾರರ, ಸಾಹಿತಿಗಳ, ಕಲಾವಿದರ, ಚಿಂತಕರ ಅತ್ಯಂತ ವಿರಳ ಸಂಘಟನೆಯಾದರೂ, ಅವರೆಲ್ಲರ ಉದ್ದೇಶ ಭಿನ್ನ ಭಿನ್ನವಾಗಿದ್ದವು. ಅವರ ಉದ್ದೇಶಗಳಲ್ಲಿ ಭಿನ್ನತೆ ಇತ್ತೆಂದು ಬಹಳ ಬೇಗನೆ ಕಂಡುಬಂತು. ಸಾಹಿತ್ಯ ಚಿಂತನೆ ಮತ್ತು ಹೋರಾಟ ಜೊತೆ ಜೊತೆಯಾಗಿ ಒಂದಕ್ಕೊಂದು ಪೂರಕವಾಗಿ ನಡೆದರೆ ಒಳ್ಳೆಯದೆ. ಆದರೆ ಇಲ್ಲಿ ಸಾಹಿತ್ಯ ಆರಂಭದಲ್ಲಿ ಹೋರಾಟಕ್ಕೆ ಪೂರಕವಾಗಿ ಒದಗಿಬಂತಾದರೂ ಅದು ಮುಂದೆ ಭಿನ್ನ ದಾರಿ ಹಿಡಿಯಿತು. ಮುಂದೆ ಅದು ಕನ್ನಡದ ಹೊಸ ಸಾಹಿತ್ಯ ಪಂಥವಾಗಿ ರೂಪು ಪಡೆಯಲು ಬಯಸಿತು. ಸಾಹಿತ್ಯದಲ್ಲಿ ದಲಿತ ಬರಹಗಾರರ ಮತ್ತು ಸಮಾಜದ ಶೋಷಣೆಯ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನ ನಡೆದರೆ, ಅದರ ಸಾಹಿತ್ಯಿಕ ಕಲಾತ್ಮಕ ವಿಮರ್ಶೆಗೆ ಕನ್ನಡ ವಿಮರ್ಶೆ ತೊಡಗಿತು. ನವ್ಯದ ಕೃತಿನಿಷ್ಠ ವಿಮರ್ಶೆಯನ್ನು ವಿರೋಧಿಸಿದ ದಲಿತ ಸಾಹಿತ್ಯ ನಂತರ ತನ್ನ ಮೌಲ್ಯಮಾಪನ ಮಾಡಲು ಬಳಸಿದ್ದು ನವ್ಯ ವಿಮರ್ಶೆಯನ್ನೇ. ಈ ಬಗೆಯ ಕಸುಬು ಮತ್ತು ಕ್ರಿಯಾಚರಣೆ ಅದು ಸಾಹಿತಿ, ವಿಮರ್ಶಕ ವರ್ಗದ್ದಾಗಿದೆ. ಈ ಸಾಹಿತ್ಯ ತನ್ನ ಹೊಸ ಭಾಷೆ ಮತ್ತು ಅದನ್ನು ಬರೆಯುವ ಶೈಲಿಯಿಂದ ಸಾಹಿತ್ಯಿಕ ಮಹತ್ವವನ್ನು ಪಡೆಯುತ್ತದೆ. ಒಟ್ಟಾರೆಯಾಗಿ ಅದು ದಲಿತ ಸಾಮಾಜಿಕ ಚಿಂತನೆಯಿಂದ ಪ್ರತ್ಯೇಕಗೊಂಡು ಸಾಹಿತ್ಯಿಕ ಚಿಂತನೆಯಾಗಿ ಪರಿವರ್ತನೆಗೊಳ್ಳುತ್ತದೆ.

ಆದರೆ ದಲಿತ ಸಾಹಿತ್ಯ ಹುಟ್ಟುವಾಗ ಇದನ್ನು ದಲಿತಪರ, ಪ್ರಗತಿಪರ ಎಂದು ಗುರುತಿಸಿಕೊಳ್ಳಲಾಗಿತ್ತು. ಆ ಗ್ರಹೀತಗಳೆ ಕನ್ನಡ ವಿಮರ್ಶೆಯಲ್ಲಿ ಸಂಶೋಧನೆಯಲ್ಲಿ ಮುಂದುವರಿದು ಕರ್ನಾಟಕದ ಸಾರ್ವಜನಿಕ ವಲಯದಲ್ಲೂ ಆ ನಿಲುವುಗಳೇ ಮುಂದುವರಿಯುತ್ತಿವೆ. ಹಾಗಾಗಿ ದಲಿತ ಸಾಹಿತ್ಯವನ್ನು ದಲಿತ ಚಳುವಳಿ ಎಂದೇ ಗುರುತಿಸಿಕೊಂಡು ಬರಲಾಗುತ್ತಿದೆ. ಆದರೆ ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ವಿಷಯಗಳಿಗೂ ಇದಕ್ಕೂ ವ್ಯತ್ಯಾಸಗಳಿವೆ.

ದಲಿತ ಸಾಹಿತ್ಯ ಆಧುನಿಕ ಸಾಹಿತ್ಯ ಜಗತ್ತಿನಲ್ಲಿ ಹೊಸ ಸೃಷ್ಟಿಯೇ ಹೌದು. ಅದು ಕನ್ನಡದ ಹಿಂದಿನ ಇತರ ಕಾಲಘಟ್ಟಗಳಲ್ಲಿ ಬಂದ ಸಾಹಿತ್ಯಕ್ಕಿಂತ ಭಿನ್ನವಾಗಿದೆ. ಅದು ದಲಿತ ಲೋಕದ ಹೊಸ ಅನುಭವ ಜಗತ್ತನ್ನು ಸಾಹಿತ್ಯ ಕ್ಷೇತ್ರಕ್ಕೆ ತಂದಿತು. ಸಾಹಿತ್ಯದಲ್ಲಿ ಅಸಹ್ಯವೆಂದು ಕಡೆಗಣಿಸಲ್ಪಟ್ಟ ಜೀವನ ಅನುಭವವನ್ನು ಈ ಸಾಹಿತ್ಯ ಕಟ್ಟಿಕೊಟ್ಟಿತು. ಕೀಳೆಂದು ತಿರಸ್ಕರಿಸಲ್ಪಟ್ಟಿದ್ದ ಅನುಭವಗಳಿಗೆ ಗೌರವ ದೊರಕಿತು. ದಲಿತ ಲೋಕದ ಭಾಷಾ ವೈವಿಧ್ಯ ದಾಖಲಾಯಿತು. ದಲಿತರ ನೋವು, ಸಿಟ್ಟು, ಪ್ರತಿಭಟನೆ, ಸಂಸ್ಕೃತಿಗಳು ದಾಖಲಾದವು. ದಲಿತ ಸಾಹಿತ್ಯವನ್ನು ನೋಡುವ ದೃಷ್ಟಿಕೋನದ ಕುರಿತಂತೆ ಚರ್ಚೆಗಳು ನಡೆಯತೊಡಗಿದವು. ಕನ್ನಡ ದಲಿತ ಸಾಹಿತ್ಯ ಕ್ಷೇತ್ರದಲ್ಲಿ ಕೆಲವು ಶ್ರೇಷ್ಠ ಬರಹಗಾರರು ಮತ್ತು ಸಾಹಿತ್ಯ ಕೃತಿಗಳು ಬಂದವು. ಆದರೆ ದಲಿತ ಸಾಹಿತ್ಯ ಪಂಥದ ಪ್ರತಿನಿಧೀಕರಣ ಅಥವಾ ನಾಯಕತ್ವ ಬೇರೆ ಹಾಗೂ ದಲಿತ ಚಳುವಳಿಯ ನಾಯಕತ್ವದ ಪ್ರಶ್ನೆ ಬೇರೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಕರ್ನಾಟಕದ ಸಂದರ್ಭದಲ್ಲಿ ದಲಿತ ಸಾಹಿತ್ಯವನ್ನು ದಲಿತ ಚಳುವಳಿ ಎನ್ನುವ ನೆಲೆಯಲ್ಲಿ ನೋಡುವುದು ಸಾಧ್ಯವಾಗುವುದಿಲ್ಲ. ಕನ್ನಡ ದಲಿತ ಸಾಹಿತ್ಯದ ರಚನೆ, ಅದರ ವಿಮರ್ಶೆ, ಅದು ಕಟ್ಟುವ ಕನ್ನಡ ಸಾಹಿತ್ಯದ ಪರಂಪರೆಯನ್ನು ೭೦ರ ದಶಕದ ನಂತರದಲ್ಲಿ ದಲಿತ ವರ್ಗದ ಬರಹಗಾರರ ಸಾಹಿತ್ಯಿಕ ಪ್ರತಿನಿಧೀಕರಣದ ಪ್ರಕ್ರಿಯೆಯಾಗಿ ವಿವರಿಸಬಹುದಾಗಿದೆ. ಆ ವಿದ್ಯಮಾನವನ್ನು ಹೊಸದಾಗಿ ಉದಯಿಸಿದ ದಲಿತ ಉದ್ಯೋಗಸ್ಥ ದಲಿತ ವರ್ಗದ ಸಾಹಿತ್ಯಿಕ ಪ್ರತಿನಿಧೀಕರಣದ ಉತ್ಪನ್ನವಾಗಿ ನೋಡಬೇಕು.

ಈಗಾಗಲೇ ಗುರುತಿಸಿದಂತೆ ದಸಂಸ ಆರಂಭದಲ್ಲಿ ಉತ್ತಮವಾದ ಕೆಲಸವನ್ನೇ ಮಾಡಿತು. ಬಂಡಾಯ ಮತ್ತು ದಲಿತ ಸಾಹಿತ್ಯದ ನಡುವೆ ಉಂಟಾದ ಬಿರುಕು ಕೂಡ ಇಲ್ಲಿ ತುಂಬಾ ಮುಖ್ಯ ಬೆಳವಣಿಗೆ. ನಂತರ ದಸಂಸ ಗುಂಪುಗಳಾಗಿ ರಾಜಕೀಯ ಪಕ್ಷದ ಹಿಂದೆ ಹೋಗತೊಡಗಿದರು. ರಾಜಕೀಯ ಶಕ್ತಿ ಮುಖ್ಯ ಪ್ರಶ್ನೆಯಾದರೂ, ಜನತಾ ದಳವನ್ನು ಬೆಂಬಲಿಸಿದ್ದು ಅತ್ಯಂತ ಅವಸರದ ಅಥವಾ ಅದರ ತಾತ್ವಿಕ ಸ್ಪಷ್ಟತೆಯ ಕೊರತೆಯಾಗಿದೆ. ಹೀಗೆ ಜನತಾ ಪಕ್ಷ ಮತ್ತು ನಂತರ ಬಿಎಸ್ಪಿಯ ಬೆಂಬಲಿತ ಗುಂಪುಗಳ ನಡುವಿನ ಸಂಘರ್ಷ ದಸಂಸವನ್ನು ದುರ್ಬಲಗೊಳಿಸಿತು. ಕರ್ನಾಟಕದ ಸಾಮಾಜಿಕ ಸನ್ನಿವೇಶದಲ್ಲಿ ದಲಿತರದೇ ಆದ ಒಂದು ಸಂಘಟನೆಯನ್ನು ಬೆಳೆಸುವ ಅವಕಾಶವನ್ನು ಕಳೆದುಕೊಂಡಂತಾಯಿತು. ಇದಕ್ಕೆ ಕಾರಣಗಳು ಹಲವಾರು ಇರಬಹುದು. ಆದರೆ ಇಲ್ಲಿನ ಹಿನ್ನಲೆಯಲ್ಲಿ ರಾಜಕೀಯ ಚಿಂತನೆಯನ್ನು ರೂಪಿಸುವ ಆಳವಾದ ತಿಳುವಳಿಕೆಯುಳ್ಳ ಮತ್ತು ಈ ದಿಸೆಯಲ್ಲಿ ಅಂಬೇಡ್ಕರ್ ಚಿಂತನೆಯನ್ನು ಗಂಭೀರವಾಗಿ ಪರಿಗಣಿಸಿದ ನಾಯಕತ್ವದ ಕೊರತೆ ಎದ್ದು ಕಾಣುತ್ತದೆ. ಭಿನ್ನ ಭಿನ್ನ ಹಿತಾಸಕ್ತಿಗಳನ್ನು ದಲಿತ ಪರವಾದ ಗಂಭೀರ ಚಿಂತನೆಗಳ ಕಡೆಗೆ ತರಬಲ್ಲ ಮತ್ತು ಆ ಕುರಿತಂತೆ ತಿಳಿಹೇಳಬಲ್ಲ ಮುಂದಾಳುತನದ ಕೊರತೆಯನ್ನು ಗುರುತಿಸಬಹುದು.

ಹಾಗಾಗಿ ದಸಂಸದಲ್ಲಿ ವೈಷಮ್ಯ, ಸಂಕುಚಿತತೆ ಮುಂದೆ ಬಂದು ತಾತ್ವಿಕ ಒತ್ತಾಸೆಗಳು, ದೂರದೃಷ್ಟಿತ್ವಗಳು ದೂರವಾದವು. ನಂತರ ಬೇರೆ ಬೇರೆ ಬಣಗಳಾಗಿ ಒಡೆಯುತ್ತಲೇ ಹೋಯಿತು. ಕರ್ನಾಟಕದ ಸಾಮಾಜಿಕ ರಾಜಕೀಯ ಸನ್ನಿವೇಶದಲ್ಲಿ ದಲಿತರು ರಾಜಕೀಯ ಶಕ್ತಿಯನ್ನು ಸಂವರ್ಧಿಸಿಕೊಳ್ಳುವ ಕುರಿತಂತೆ ತಾತ್ವಿಕ ಸ್ಪಷ್ಟತೆ ಇರಲಿಲ್ಲ. ಅದರ ಕಾರ್ಯಕ್ರಮಗಳಲ್ಲಿ ಸ್ಪಷ್ಟತೆ ಇರಲಿಲ್ಲ. ದಲಿತರ ಬಗ್ಗೆ, ಶೋಷಿತರ ಬಗ್ಗೆ ಕಾಳಜಿ ಇಟ್ಟುಕೊಂಡು ಕೆಲವು ಕಾರ್ಯಕ್ರಮಗಳನ್ನು ರೂಪಿಸಿದರೂ ಅದಕ್ಕೆ ದೀರ್ಘಕಾಲೀನ ಮುನ್ನೋಟ ಯೋಜನೆ ಇದ್ದ ಹಾಗೆ ಕಂಡು ಬರಲಿಲ್ಲ. ನಂತರದ ದಿನಗಳಲ್ಲಿ ಅದು ಅಂಬೇಡ್ಕರ್ ಜಯಂತಿ ಆಚರಣೆ ಮತ್ತು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತಗೊಂಡಿತು. ನಮ್ಮ ಸಮಾಜದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸುವುದಕ್ಕೂ ಅಡಚಣೆಗಳಿರುವಾಗ ಅದನ್ನು ಆಚರಿಸುವುದು ಮುಖ್ಯ. ಆದರೆ ಒಂದು ಮಹತ್ವದ ಸಂಘಟನೆಯಾಗಿ ಅಂಬೇಡ್ಕರರನ್ನು ಕೀರ್ತಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ಅವರ ಬಗ್ಗೆ ಗೌರವ ಇಟ್ಟುಕೊಂಡೇ ಸಮಕಾಲೀನ ಸಂದರ್ಭದಲ್ಲಿ ಅವರ ಚಿಂತನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವುದು ಮುಖ್ಯ. ಇದರಿಂದ ದಸಂಸ ವಿಮುಖವಾಯಿತು. ಹೊಸಕಾಲದ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಬರೀ ಅಂಬೇಡ್ಕರ್ ಪ್ರತಿಮೆಗೆ, ಭಾವಚಿತ್ರಕ್ಕೆ ಜೋತುಬೀಳುವುದಕ್ಕೆ ಸೀಮಿತವಾಯಿತು. ಅಂಬೇಡ್ಕರ್ ಹೆಸರಿನಲ್ಲಿ ಸ್ವಸಮರ್ಥನೆ ಮಾಡದೇ, ಹಕ್ಕು ಸಾಧಿಸದೇ ಅವರ ಚಿಂತನೆಗಳನ್ನು ಕಾಲದ ಜ್ವಲಂತ ಸಮಸ್ಯೆಗಳಿಗೆ ಮುಖಾಮುಖಿಯಾಗಲು ಬಿಡಬೇಕು. ದಲಿತ ಸಾಮಾಜಿಕ ನ್ಯಾಯದ ಬೇಡಿಕೆಗಳನ್ನು ದಿಕ್ಕು ತಪ್ಪಿಸುವ ಎದುರಾಳಿಗಳಿಗೆ ಉತ್ತರವೀಯಲು ಸಜ್ಜುಗೊಳಿಸಬೇಕು. ಈ ನೆಲೆಯಲ್ಲಿ ಕರ್ನಾಟಕದಲ್ಲಿ ಅಂಬೇಡ್ಕರೋತ್ತರ ದಲಿತ ನಾಯಕತ್ವ ಸ್ಥಗಿತತೆಗೆ ಕಾರಣವಾಯಿತು ಎನ್ನಬಹುದು.

ಇದರ ಹೊರತಾಗಿಯೂ ಕರ್ನಾಟಕದಲ್ಲಿ ದಲಿತ ಚಿಂತನೆಗೆ ಪ್ರೇರಣೆ ನೀಡಿದ ಬಹಳಷ್ಟು ಬರಹಗಾರರು ಚಿಂತಕರು ಸಾಹಿತಿಗಳಿದ್ದಾರೆ. ಇವರೆಲ್ಲರಿಂದಾಗಿ ಕರ್ನಾಟಕದಲ್ಲಿ ದಲಿತರ, ಶೋಷಿತರ ಚಿಂತನೆಗಳು ಸಾರ್ವಜನಿಕವಾಗಿ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ಆದರೆ ಇಲ್ಲಿನ ಬಿಕ್ಕಟ್ಟು ಏನೆಂದರೆ ದಲಿತ ಸಾಹಿತ್ಯವೇ ದಲಿತ ಚಳುವಳಿಯ ಸ್ಥಾನವನ್ನು ಆಕ್ರಮಿಸಿಕೊಂಡಿದೆ ಎನ್ನುವುದು. ಮಾತ್ರವಲ್ಲದೇ ದಲಿತ ಸಾಹಿತ್ಯ ಸೃಷ್ಟಿ ಮಾಡಿರುವ ವಿಚಾರಗಳಿಗೆ ದಲಿತ ಚಿಂತನೆ ಮತ್ತು ಚಳುವಳಿಯ ಸ್ಥಾನವನ್ನು ಕೊಟ್ಟು ಬಿಟ್ಟಿರುವುದರಿಂದ ಜನಸಾಮಾನ್ಯ ದಲಿತರ ಜ್ವಲಂತ ಸಮಸ್ಯೆಗಳನ್ನು ಇಟ್ಟುಕೊಂಡು ದಲಿತ ಚಳುವಳಿ ರೂಪುಗೊಳ್ಳುತ್ತಿಲ್ಲ. ಕನ್ನಡ ದಲಿತ ಸಾಹಿತ್ಯ ಪ್ರತಿನಿಧಿಸುತ್ತಿರುವ ಚಿಂತನಾ ಸ್ವರೂಪ ಮತ್ತು ಸಮಕಾಲೀನ ಕರ್ನಾಟಕದ ದಲಿತರ ಸಾಮಾಜಿಕ ಸಮಸ್ಯೆಗಳ ಸ್ವರೂಪಗಳ ನಡುವಿನ ಭಿನ್ನತೆಯನ್ನು ಗುರುತಿಸಿಕೊಳ್ಳದಿದ್ದರೆ ಚರ್ಚೆ ಮುಂದುವರಿಯುವುದು ಮತ್ತು ವಾಸ್ತವಿಕ ನೆಲೆಗಟ್ಟಿಗೆ ಹೊರಳುವುದು ಸಾಧ್ಯವಿಲ್ಲ. ಒಂದು ರೀತಿಯಲ್ಲಿ ಸಾಮಾಜಿಕ ನೆಲೆಯ ದಲಿತ ಚಿಂತನೆಯು ಬೆಳೆಯದಿರುವುದಕ್ಕೆ ದಲಿತ ಸಾಹಿತ್ಯದ ಕನ್ನಡ ಜನಪರ ವಿಮರ್ಶೆಯೂ ಕೂಡಾ ಕಾರಣವೆನ್ನಬಹುದು. ಉದಾಹರಣೆಗೆ, ದಲಿತ ಕಾವ್ಯ ಕೃತಿಗಳನ್ನು ವಿಮರ್ಶಿಸುವಾಗ ಅವುಗಳನ್ನು ದಲಿತ ಪ್ರತಿಭಟನೆ, ಶೋಷಣೆಯ ಅಭಿವ್ಯಕ್ತಿ, ದಲಿತರು ಕೀಳು ಶಕ್ತಿಹೀನರಲ್ಲ ಅವರಲ್ಲೂ ಅಪಾರ ಶಕ್ತಿ ಸಾಧ್ಯತೆಗಳಿವೆ ಎಂದು ಜನಪರ ದಲಿತಪರ ನೆಲೆ ವಿವರಿಸಿದಾಗ ಅದು ಪಠ್ಯಕೇಂದ್ರಿತ ಮತ್ತು ಸಾಹಿತ್ಯಿಕ ಕಲಾತ್ಮಕ ವಿಮರ್ಶೆಯಾಗುತ್ತದೆಯೇ ಹೊರತು ದಲಿತರ ಸಾಮಾಜಶಾಸ್ತ್ರೀಯ ವಿಮರ್ಶೆ ಆಗುವುದಿಲ್ಲ. ಅಂದರೆ ದಲಿತ ಸಾಹಿತ್ಯಕ್ಕೂ ಮತ್ತು ದಲಿತ ಸಾಮಾಜಿಕ ವಾಸ್ತವಕ್ಕೂ ಒಂದು ಅಂತರ ಇದೆ.

ಯಾಕೆಂದರೆ ಇವತ್ತು ಕೂಡಾ ಕರ್ನಾಟಕದ ಬಹುಪಾಲು ದಲಿತರು ಭೂರಹಿತರು, ಆಧುನಿಕ ಶಿಕ್ಷಣದಿಂದ ವಂಚಿತರು, ಹುದ್ದೆಗಳಿಂದ ವಂಚಿತರು ಆಗಿದ್ದಾರೆ. ಬಹುತೇಕರು ಕೃಷಿ ಮತ್ತು ಕೂಲಿ ಕಾರ್ಮಿಕರಾಗಿದ್ದಾರೆ ಎನ್ನುವುದನ್ನು ಅಂಕಿ–ಅಂಶಗಳು ಹೇಳುತ್ತಿವೆ. ಇವತ್ತಿಗೂ ಕೆಲವು ಕಡೆ ಜೀತ ಜೀವಂತವಾಗಿದೆ. ಪ್ರಗತಿಯ ಎಲ್ಲಾ ಬಗೆಯ ಅಂಕಿ ಅಂಶಗಳಿಂದ ಮುಂದಿರುವ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲೆ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಕರ್ನಾಟಕದ ವಿವಿಧ ಭಾಗಗಳಿಂದ ದಲಿತರ ಸಾಮಾಜಿಕ ಬಹಿಷ್ಕಾರದ ಪ್ರಕರಣಗಳು ವರದಿಯಾಗುತ್ತವೆ. ಮಲಹೊರುವ ಪದ್ಧತಿ, ಮ್ಯಾನ್‌ಹೋಲ್‌ಗಳಲ್ಲಿ ಸಾಯುತ್ತಿರುವವರ ಪ್ರಕರಣಗಳು ಪ್ರಕಟವಾಗುತ್ತಿವೆ. ಬಡತನ, ಅಪೌಷ್ಟಿಕತೆ, ರೋಗರುಜಿನಗಳು, ಸಾಮಾಜಿಕ ಅವಮಾನತೆಗಳು ಮುಂದುವರಿಯುತ್ತಿವೆ. ದಲಿತರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗಳು ಹೀಗಿರುವಾಗ ಈ ಮುಖ್ಯ ಪ್ರಶ್ನೆಗಳನ್ನು ಮುಂದಿಡುವ ಚಿಂತನೆಗಳು ಯಾಕೆ ಬರುತ್ತಿಲ್ಲ ಎನ್ನುವುದು ಪ್ರಶ್ನೆ. ಅಂಬೇಡ್ಕರ್ ನಡೆಸಿದ ಮತ್ತು ಆನಂತರ ಆದ ದಲಿತ ಚಿಂತನೆಗಳ ಆಧಾರದಲ್ಲಿ ಕರ್ನಾಟಕದ ಈ ಜ್ವಲಂತ ಸಮಸ್ಯೆಗಳನ್ನು ಮರುವಿಶ್ಲೇಷಣೆಗೆ ಒಳಪಡಿಸುವ ನಾಯಕತ್ವ ಮತ್ತು ಸಂಘಟನೆ ಬೇಕು.

ಅಂಬೇಡ್ಕರ್ ನಂತರ ಉದಯಿಸಿ ಬಂದ ಮೊದಲ ತಲೆಮಾರಿನ ನಾಯಕರು ಬುದ್ಧಿಜೀವಿಗಳಾಗಿರುವುದರಿಂದ ಈ ಬಿಕ್ಕಟ್ಟು ಆಗಿರುವ ಸಾಧ್ಯತೆ ಇದೆ. ಆದರೆ ಈ ಚಾರಿತ್ರಿಕ ಬಿಕ್ಕಟ್ಟನ್ನು ಎದುರಿಸಬೇಕಾಗಿದೆ. ಯಾಕೆಂದರೆ ಈ ಬಿಕ್ಕಟ್ಟುಗಳಿಂದ ಕರ್ನಾಟಕದ ದಲಿತ ನಾಯಕತ್ವ ತಪ್ಪಿಸಿಕೊಳ್ಳುವಂತಿಲ್ಲ.

ಅಂಬೇಡ್ಕರೋತ್ತರ ದಲಿತ ನಾಯಕತ್ವದ ಇನ್ನೊಂದು ಬಹಳ ಮುಖ್ಯವಾದ ಬಿಕ್ಕಟ್ಟು ದಲಿತರ ಹಿಂದುತ್ವ ನಾಯಕತ್ವದ ಕುರಿತದ್ದು. ಭಾರತದಲ್ಲಿ ಇಂದು ದಲಿತರು ಬೇರೆ ಬೇರೆ ಪಕ್ಷಗಳ ಹಿಂದೆ ಇದ್ದಾರೆ. ಅಂಬೇಡ್ಕರ್, ದಲಿತರಿಗೆ ಎರಡು ಮತದಾನದ ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ಕೇಳಿದ್ದರ ಹಿಂದೆ ಈ ಉದ್ದೇಶ ಇತ್ತು ಅನ್ನಿಸುತ್ತದೆ. ಅಂದರೆ ದಲಿತರ ಸಮಸ್ಯೆ ನಿವಾರಣೆಯಾಗಬೇಕಾದರೆ ದಲಿತರ ನಾಯಕತ್ವ ಅಗತ್ಯ. ಈ ದೇಶದಲ್ಲಿ ಎಲ್ಲರೂ ಮತ ಹಾಕಿ ಉತ್ತಮ ಸ್ವಂತಿಕೆಯುಳ್ಳ ದಲಿತ ನಾಯಕನನ್ನು ಆಯ್ಕೆ ಮಾಡಲಾಗುವುದಿಲ್ಲ. ರಾಜಕೀಯ ಪಕ್ಷಗಳು ತಮ್ಮ ತಮ್ಮ ಅಧೀನದಲ್ಲಿರುವ ದುರ್ಬಲ ದಲಿತ ಪ್ರತಿನಿಧಿಯನ್ನು ಆಯ್ಕೆಮಾಡುತ್ತಾರೆ ಎಂದು ಅರಿತಿದ್ದ ಅಂಬೇಡ್ಕರ್ ಈ ಚುನಾವಣಾ ಪದ್ಧತಿಯ ಬೇಡಿಕೆಯನ್ನು ಇಟ್ಟಿದ್ದರು. ಇದು ಗಾಂಧಿಯ ವಿರೋಧದಿಂದ ಆಗಲಿಲ್ಲ. ಬಹುಶಃ ಈ ವ್ಯವಸ್ಥೆಯಿಂದ ದಲಿತ ನಾಯಕತ್ವಕ್ಕೆ ಸೈದ್ಧಾಂತಿಕ ಸ್ವಂತಿಕೆ ದೊರಕುತ್ತಿತ್ತು. ಆದರೆ ಈಗಿನ ದುರ್ಬಲ ದಲಿತ ನಾಯಕತ್ವಕ್ಕೆ ವಿವಿಧ ರಾಜಕೀಯ ಪಕ್ಷಗಳ ಓಲೈಕೆ ಕೂಡಾ ಕಾರಣ. ದಲಿತರ ವಿಮೋಚನೆ ಮತ್ತು ಏಳಿಗೆಯ ವಿಚಾರಗಳು ಮುಂದೂಡಲ್ಪಡುತ್ತಲೇ ಇವೆ. ಸುದೀರ್ಘವಾಗಿ ಆಳಿದ ಕಾಂಗ್ರೆಸ್ ಈ ಪ್ರಶ್ನೆಯನ್ನು ನಿವಾರಿಸಲಿಲ್ಲ. ಇಂದು ದಲಿತರು ಹಿಂದುತ್ವ ರಾಜಕಾರಣದಲ್ಲಿ




**ಹಿಂದುತ್ವ ಶಕ್ತಿಗಳೊಡನೆ ಗುರುತಿಸಿಕೊಂಡಿರುವ ದಲಿತ ನಾಯಕರು: ರಾಂವಿಲಾಸ್ ಪಾಸ್ವಾನ್, ಉದಿತ್‌ರಾಜ್, ರಾಂದಾಸ್ ಅಥವಳೆ ಮತ್ತು ಮಾಂಝಿ**

ಗುರುತಿಸಿಕೊಳ್ಳತೊಡಗಿದ್ದಾರೆ. ಹಿಂದುತ್ವ ಸೈದ್ಧಾಂತಿಕವಾಗಿ ತಳ ಸಮುದಾಯಗಳ ಪರ ಅಲ್ಲ. ಅದು ಮೇಲ್ಜಾತಿ, ಶ್ರೀಮಂತ, ಬಂಡವಾಳಶಾಹಿ, ಭೂಮಾಲಿಕರ ಪರವಾದ ಸಂಘಟನೆ ಎಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ. ಒಂದು ರೀತಿಯಲ್ಲಿ ಅದು ತಳ ಸಮುದಾಯಗಳ ಬಿಡುಗಡೆಯ ಚಲನೆಯ ವಿರುದ್ಧವೇ ಹುಟ್ಟಿಕೊಂಡ ಚಿಂತನೆ. ಅದು ಹಿಂದುತ್ವ ಪ್ರಜ್ಞೆಯ ಜೊತೆಗೆ ಜಾತಿ ಪ್ರಜ್ಞೆಯನ್ನು ಗಟ್ಟಿಗೊಳಿಸುತ್ತದೆ. ಜಾತಿಯ ಪಾರಂಪರಿಕ ಮೌಲ್ಯಗಳನ್ನು ಗಟ್ಟಿಗೊಳಿಸುತ್ತದೆ. ಹೀಗಿರುವಾಗ ದಲಿತರು ಹಿಂದುತ್ವಕ್ಕೆ ನಾಯಕತ್ವ ನೀಡುತ್ತಿರುವ ಅಪಾಯವನ್ನು ಗಮನಿಸಬೇಕು. ಇದು ಒಂದು ರೀತಿಯಲ್ಲಿ ದಲಿತರ ಬಿಡುಗಡೆಯ ದಾರಿಯಲ್ಲಿ ದಲಿತರೇ ಸಿಕ್ಕಿಹಾಕಿಕೊಂಡ ಹಾಗೆ.

ಈಗ ಹಿಂದುತ್ವ ರಾಜಕಾರಣ ಹೆಚ್ಚು ಹೆಚ್ಚು ದಲಿತರನ್ನು ಒಳಗೊಳ್ಳುವ ರಾಜಕಾರಣವನ್ನು ಮಾಡುತ್ತಿದೆ. ಹಿಂದುತ್ವ ಅಂಬೇಡ್ಕರರನ್ನು ತನ್ನ ಉದ್ದೇಶಕ್ಕೆ ಬಳಸಿಕೊಳ್ಳುವ ಪ್ರಯತ್ನದಲ್ಲಿದೆ. ಈ ಉದ್ದೇಶಕ್ಕೆ ಕೂಡಾ ಅದಕ್ಕೆ ದಲಿತ ನಾಯಕರ ಅಗತ್ಯ ಇದೆ. ಅದು ಒಟ್ಟಾರೆ ಅಂಬೇಡ್ಕರ್ ಮತ್ತು ದಲಿತ ಚಿಂತನೆಗೆ ಹಿಂದುತ್ವದ ರೂಪ ನೀಡುವ ಪ್ರಯತ್ನದಲ್ಲಿದೆ.

ಹಾಗಾಗಿ ದಲಿತರ ಹಿಂದುತ್ವ ನಾಯಕತ್ವ ಚಾರಿತ್ರಿಕವಾಗಿ ಅತ್ಯಂತ ತಪ್ಪು ಬೆಳವಣಿಗೆ. ಅಂಬೇಡ್ಕರ್ ತನ್ನ ಜೀವಮಾನ ಇಡೀ ಹಿಂದುತ್ವ ಶಕ್ತಿಯ ವಿರುದ್ಧ ಹೋರಾಡಿದರು. ಅವರ ಚಿಂತನೆ ಮಾತ್ರವಲ್ಲ, ಸಂವಿಧಾನಿಕ ಪ್ರಯತ್ನಗಳು, ರಾಜಕೀಯ ಆವಿಷ್ಕಾರಗಳು ಭಾರತದ ಶೋಷಕ ಮೇಲ್ಜಾತಿ ಹಿಂದುತ್ವ ಶಕ್ತಿಗಳ ವಿರುದ್ಧವೇ ಆಗಿತ್ತು ಎನ್ನುವುದನ್ನು ಮರೆಯಬಾರದು. ಅಂಬೇಡ್ಕರ್ ಆಧುನಿಕ ಮೌಲ್ಯಗಳನ್ನು ಬಳಸಿಕೊಂಡು ಭಾರತದ ಜಾತಿ ಮೂಲದ ಶಕ್ತಿಗಳನ್ನು ದುರ್ಬಲಗೊಳಿಸುವ ದಲಿತ ಪರಿಕಲ್ಪನೆಯನ್ನು ರೂಪಿಸಿದರು. ದಲಿತರ ಹಿಂದುತ್ವ ನಾಯಕತ್ವ ಇದಕ್ಕೆ ಸಂಪೂರ್ಣ ವಿರುದ್ಧವಾದುದು. ಹಿಂದುತ್ವವಾದಿಗಳನ್ನು ಗಟ್ಟಿಗೊಳಿಸುವ ಮತ್ತು ತಕ್ಷಣಕ್ಕೆ ತಮಗೆ ರಾಜಕೀಯ ಲಾಭ ಗಳಿಸಿಕೊಳ್ಳುವ ಈ ಪ್ರಮಾದದಿಂದ ಭವಿಷ್ಯದಲ್ಲಿ ದಲಿತ ಸಮುದಾಯಗಳನ್ನು ಸಂಪೂರ್ಣ ದಾರಿತಪ್ಪಿಸಿಬಿಡುವ ಪಾಪಕಾರ್ಯವಿದೆ. ದಲಿತ ಪರಿಕಲ್ಪನೆ ಉಗಮಗೊಂಡ ಉದ್ದೇಶ ಮತ್ತು ಅಗತ್ಯವನ್ನು ಅರ್ಥೈಸಿಕೊಳ್ಳದೇ ದಲಿತರು ಹಿಂದುತ್ವವನ್ನು ಒಪ್ಪಿಕೊಳ್ಳುವುದು ಸರಿಯಲ್ಲ. ಅಂಬೇಡ್ಕರ್ ಬೌದ್ಧ ಧರ್ಮವನ್ನು ಯಾಕೆ ಒಪ್ಪಿಕೊಂಡರು ಎನ್ನುವುದನ್ನು ಕೂಡಾ ಇವರು ಗಮನಿಸುತ್ತಿಲ್ಲ. ಅಂಬೇಡ್ಕರರನ್ನು ಸರಿಯಾಗಿ ಓದದೇ, ಅರ್ಥೈಸದಿರುವುದು ಕೂಡಾ ದಲಿತರು ಹಿಂದುತ್ವದ ಹಿಂದೆ ಹೋಗಲು ಕಾರಣ ಎನ್ನಬಹುದು.

ಧರ್ಮ ನಿರಪೇಕ್ಷತೆ, ಜಾತ್ಯತೀತ ಸಿದ್ಧಾಂತಕ್ಕೂ ದಲಿತ ಪರಿಕಲ್ಪನೆಗೂ ಇರುವ ಸಂಬಂಧ, ಹಿಂದುತ್ವಕ್ಕೂ ಜಾತಿಗೂ ಇರುವ ಅಂತರ್ಸಂಬಂಧ, ಭಾರತದ ಸಾಮಾಜಿಕ ವಾಸ್ತವ ಮತ್ತು ಅದು ರಾಜಕಾರಣದಲ್ಲಿ ಸಕ್ರಿಯವಾಗುವ ರೀತಿ ಇದನ್ನೆಲ್ಲಾ ಅರಿಯದೇ ದಲಿತ ರಾಜಕಾರಣವನ್ನು ಹೆಣೆಯುವುದು ಕಷ್ಟ. ಮುಖ್ಯವಾಗಿ ಕಲಿತ ದಲಿತ ವರ್ಗ ಅಂಬೇಡ್ಕರರನ್ನು ಸಾಮಾಜಿಕ ಹೊಣೆಗಾರಿಕೆಯಿಂದ ಅರಿಯುವ ಮನಸ್ಸು ಮಾಡಬೇಕು. ಆದರೆ ಇವತ್ತು ರೂಪುತಾಳುತ್ತಿರುವ ದಲಿತ ನಾಯಕತ್ವಗಳಲ್ಲಿ ದಲಿತರ ಕುರಿತ ಮುಂಗಾಣ್ಕೆಗಳು ಕಾಣುತ್ತಿಲ್ಲ. ಇಂದು ದಲಿತ ನಾಯಕತ್ವ ದಿಕ್ಕುತಪ್ಪಿದ ದಾರಿಯಲ್ಲಿ ಸಾಗುತ್ತಿದೆ ಎನ್ನಬಹುದು.



**(ಮಂಗಳೂರಿನ ಸರ್ಕಾರಿ ಪ.ಪೂರ್ವ ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕರಾಗಿರುವ ಲೇಖಕ ವಾಸುದೇವ ಬೆಳ್ಳೆ, ದಲಿತ ಹೋರಾಟ ಕುರಿತು ವ್ಯಾಪಕ ಅಧ್ಯಯನಗಳಲ್ಲಿ ತೊಡಗಿರುವ ವಿದ್ವಾಂಸರೂ ಹೌದು.)**

ಯುವ ಸಮಾಜವಾದಿ ಚಿಂತನ ವೇದಿಕೆ

# ಯುವಜನತೆ ಮತ್ತು ಹೊಸ ಮಾಧ್ಯಮ

–ಹರ್ಷಕುಮಾರ್ ಕುಗ್ವೆ



**ಯಾ**ವುದೇ ಸಾಮಾಜಿಕ ಚಿಂತನೆ ಅಥವಾ ಜನಪರ ಕಾಳಜಿಗಳು ಸಮಾಜದಲ್ಲಿ ದೊಡ್ಡ ಪರಿಣಾಮವುಂಟುಮಾಡಬೇಕಾದರೆ ಅವು ಮುಖ್ಯವಾಗಿ ಆ ಕಾಲದ ಯುವಜನತೆಯ ಮನಸ್ಸಿನಲ್ಲಿ ಬೇರುಬಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಇಂದು ಒಂದು ಮಟ್ಟಿಗಿನ ನಿರಾಶೆ ನಮ್ಮನ್ನು ಕಾಡುತ್ತದೆ. ಇಂದಿನ ಯುವಜನತೆಯ ಮನಸ್ಸಿನಲ್ಲಿ ಆಳವಾಗಿ ಬೇರುಬಿಡುತ್ತಿರುವುದು ಜನಪರ ಕಾಳಜಿಗಳಲ್ಲ, ಸಮಾಜವಾದಿ, ಸಾಮಾಜಿಕ ಚಿಂತನೆಗಳಲ್ಲ; ಬದಲಿಗೆ ಮತಿವಿಕಾರಗಳು. ಇದು ಆತಂಕದ ವಿಷಯವೂ ಹೌದು.

ಇದು ಯಾಕೆ ಹೀಗಾಗುತ್ತಿದೆ? ನಾವೆಲ್ಲಿ ಎಡವಿದ್ದೇವೆ ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರಗಳನ್ನೂ ಆದಷ್ಟು ಬೇಗನೇ ಕಂಡುಕೊಳ್ಳುವ ತುರ್ತು ನಮ್ಮ ಮುಂದಿದೆ. ಈಗ್ಗೆ ಎರಡೂವರೆ ದಶಕಗಳಿಂದ ಜಾರಿಗೊಂಡಿರುವ ಜಾಗತೀಕರಣ ಉಂಟು ಮಾಡಿರುವ ಸಾಂಸ್ಕೃತಿಕ ಪರಿಣಾಮಗಳ ಹಿನ್ನೆಲೆಯಲ್ಲಿಯೂ ಈ ಪ್ರಶ್ನೆಯನ್ನು ಹಾಕಿಕೊಳ್ಳಬಹುದು. ನಮಗೆ ಮೇಲುನೋಟಕ್ಕೆ ಗೋಚರವಾಗದ ಜಾಗತೀಕರಣದ ದಾಳಿ ಇದೇ ಆಗಿದೆ. ಅದು ಸಮಾಜದ ಜನವರ್ಗಗಳ ಸಾಮುದಾಯಿಕ ಚಿಂತನೆ, ನಡೆ ನುಡಿಗಳ ಮೇಲೆ ನಡೆಸಿರುವ ದಾಳಿ. ಪ್ರತಿಯೊಂದನ್ನೂ ಸಂಕುಚಿತಗೊಳಿಸಿ ಏಕರೂಪಿಯಾಗಿಸುವ ದಾಳಿ ಅದು. ಭಾಷೆ, ಆಹಾರ, ಅಭಿರುಚಿ ಹೀಗೆ ಪ್ರತಿಯೊಂದರ ವಿಷಯದಲ್ಲಿಯೂ ಇದೇ ಆಗಿದೆ. ಹೀಗಾಗಿಯೇ ಜಾಗತೀಕರಣದ ಈ ಏಕರೂಪಿ ಚಿಂತನೆಗಳಿಗೂ ನಮ್ಮ ದೇಶದ ಏಕರೂಪಿ ಸಾಮಾಜಿಕ–ಧಾರ್ಮಿಕ ಚಿಂತನೆಗಳಿಗೂ ಉತ್ತಮವಾದ ಹೊಂದಾಣಿಕೆ ಸಾಧ್ಯವಾಗಿದೆ. ಬಹುಸಂಸ್ಕೃತಿ, ವೈವಿಧ್ಯತೆಗಳಿಗೆ ಮಾರಣಾಂತಿಕ ಪೆಟ್ಟು ನೀಡುವಲ್ಲಿಯೂ ಈ ಎರಡೂ ಶಕ್ತಿಗಳು ಜಂಟಿಯಾಗಿ ಕೆಲಸ ಮಾಡಿವೆ. ಇದೇ ಬಗೆಯಲ್ಲಿ ನಮ್ಮ ಯುವಜನತೆಯೂ ಸಹ ಇಂತಹ ಸಾಂಸ್ಕೃತಿಕ ದಾಳಿಗೆ ಒಳಗಾಗಿದೆ.

ಇಂದು ತಂತ್ರಜ್ಞಾನದ ಫಲವಾಗಿ ಬಂದಿರುವ ಸಂವಹನ ಸಲಕರಣೆಗಳು, ಅಂತರ್ಜಾಲ, ಸಾಮಾಜಿಕ ಜಾಲತಾಣಗಳು ಹೊರ ಸ್ವರೂಪದಲ್ಲಿ ಹೆಚ್ಚೆಚ್ಚು ಜನರನ್ನು ಒಳಗೊಳ್ಳುವ ಪ್ರಜಾತಾಂತ್ರಿಕ ಮಾಧ್ಯಮ ಮತ್ತು ಸಾಧನಗಳೇ ಎನ್ನಿಸಿದರೂ ಅಂತರ್ಯದಲ್ಲಿ ಇವು ಮೇಲೆ ಹೇಳಿದ ಏಕಸ್ವಾಮ್ಯ ಮತ್ತು ಏಕರೂಪಿ ಚಿಂತನೆಗಳನ್ನು ಬಿತ್ತುವ ಶಕ್ತಿಗಳಿಗೇ ನೆರವಾಗಿವೆ. ಇವುಗಳ ಮೇಲಿನ ಹಿಡಿತ ಹೊಂದಿರುವ ಶಕ್ತಿಗಳು ಈ ತಂತ್ರಜ್ಞಾನಗಳ ಸದುಪಯೋಗ ಸಮಾಜಕ್ಕೆ ಆಗದಂತೆ ಮಾಡಿವೆ.

ಫೇಸ್‌ಬುಕ್, ವಾಟ್ಸಪ್‌ನಂತಹ ಸಂವಹನ ವೇದಿಕೆಗಳು ಹೀಗೆ ಯುವಜನರನ್ನು ತಮ್ಮ ಸಮಾಜ ವಿರೋಧಿ ಚಿಂತನೆಗಳೆಡೆಗೆ ಸೆಳೆಯುವ ಮಾಧ್ಯಮಗಳಾಗಿ ಪರಿಣಮಿಸಿವೆ. ಪ್ರತಿ ವ್ಯಕ್ತಿಗೆ ಒಂದಿಲ್ಲೊಂದು ಬಗೆಯ ಅಸ್ಮಿತೆಯ ಬಿಕ್ಕಟ್ಟು ಇರುತ್ತದೆಯೆನ್ನಿ. ಈ ಸಾಮಾಜಿಕ ಜಾಲತಾಣಗಳು ಮುಖ್ಯವಾಗಿ ಯುವಜನರನ್ನು ಹುರಿದುಂಬಿಸುತ್ತಿರುವುದು ಈ ಐಡೆಂಟಿಟಿಯ ಬಿಕ್ಕಟ್ಟನ್ನು ತಾತ್ಕಾಲಿಕವಾಗಿ ಮತ್ತು ಸಣ್ಣಮಟ್ಟದಲ್ಲಿ ಪೂರೈಸುವ ಕಾರಣಕ್ಕೆ. ಮಾತ್ರವಲ್ಲ, ಇವುಗಳ ಮೇಲೆ ಕೊಂಚ ಹಿಡಿತ ಸಾಧಿಸಿದರೆ ಅಲ್ಲಿ ಅವನು ಬಹುಜನರು ಗುರುತಿಸುವ ಒಬ್ಬ ಕವಿಯೋ, ಒಬ್ಬ ಲೇಖಕನೋ, ಒಬ್ಬ ವಿಮರ್ಶಕನೋ, ಇಲ್ಲವೆ ಒಬ್ಬ ನಾಯಕನೋ ಹೀಗೆ ಎಲ್ಲವೂ ಆಗಿಬಿಡುತ್ತಾನೆ.

ದಿನಪತ್ರಿಕೆಯ ಸುದ್ದಿಗಳನ್ನಾಗಲೀ, ಸುದ್ದಿವಾಹಿನಿಗಳ ಸುದ್ದಿಯನ್ನಾಗಲೀ ಗಮನಿಸದ ಯುವಜನತೆ ಈ ಹೊಸರೂಪದ ಮಾಧ್ಯಮಗಳ ಸುದ್ದಿಗಳ ಬಗ್ಗೆ ಇನ್ನಿಲ್ಲದ ಕುತೂಹಲ ಹೊಂದಿರುತ್ತಾರೆ ಮತ್ತು ಅಂತಹ ಸುದ್ದಿಗಳ ಸೃಷ್ಟಿಕರ್ತರು ಮತ್ತು ಪ್ರಸರಣಕಾರರು ತಾವೇ ಆಗುವ ಹಂಬಲವನ್ನೂ ಹೊಂದಿರುತ್ತಾರೆ.

ಇದೇ ಹೊತ್ತಿನಲ್ಲಿ ಗ್ರಾಮೀಣ ಭಾಗಗಳ ಯುವಜನರು ಸಹ ಈ ಆಧುನಿಕ ಮಾಧ್ಯಮಗಳ ಬಗ್ಗೆ ಆಕರ್ಷಣೆ ಇಲ್ಲವೇ ಅವುಗಳನ್ನು ಹೊಂದದ ಬಗ್ಗೆ ಕೀಳರಿಮೆ ವ್ಯಕ್ತಪಡಿಸುವುದನ್ನೂ ನೋಡಬಹುದು. ಮುಂದಿನ ಕೆಲವು ವರ್ಷಗಳಲ್ಲಿ ೪ಜಿ ತಂತ್ರಜ್ಞಾನದ ಪ್ರವೇಶದೊಂದಿಗೆ ಈ ಪ್ರಕ್ರಿಯೆ ತ್ವರಿತಗೊಳ್ಳಬಹುದು.

ಮತ್ತೆ ಮೊದಲಿನ ಪ್ರಶ್ನೆಗೆ ಬರುವುದಾದರೆ, ಇಂತಹ ಒಂದು ಐಡೆಂಟಿಟಿಯ ಬಿಕ್ಕಟ್ಟು ಮತ್ತು ಅದನ್ನು ನಿವಾರಿಸಿಕೊಳ್ಳುವ ಹೊಸ ಮಾರ್ಗಗಳನ್ನು ಕಂಡುಕೊಂಡಿರುವ ಯುವಜನತೆಯನ್ನು ಸಾಮಾಜಿಕ ಚಿಂತನೆಗಳೆಡೆಗೆ ಮುಖ ಮಾಡಿಸಲು ಸಾಧ್ಯವಿದೆಯೇ? ಖಂಡಿತಾ ಸಾಧ್ಯವಿದೆ. ಹಿಂದೆಂದಿಗಿಂತ ಹೆಚ್ಚು ಸಾಧ್ಯವಿದೆ. ಆದರೆ ಇದಕ್ಕೆ ಈಗಾಗಲೇ ಸಮಾಜಮುಖಿ ಚಿಂತನೆಗಳನ್ನು ಅರಿತು ಬಾಳುತ್ತಿರುವ ಜನರು ತಮ್ಮ ಕೊಡುಗೆ ನೀಡಿದಾಗ ಮಾತ್ರ ಸಾಧ್ಯವಾಗುತ್ತದೆ. ಈ ಕಾಲದ ಯುವಜನರು ಯಾವ ಮಾಧ್ಯಮಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾರೋ ಅದೇ ಮಾಧ್ಯಮಗಳೊಳಕ್ಕೆ ನಾವೂ ಧುಮುಕಬೇಕು. ಯುವಜನರೊಂದಿಗೆ ಸಂವಹನಕ್ಕೆ ಬೇಕಾದ ಹೊಸ ಭಾಷೆಯೊಂದನ್ನು ನಾವು ರೂಢಿಸಿಕೊಳ್ಳಬೇಕು. ಈ ಜಾಗವನ್ನು ಈಗಾಗಲೇ ಆಕ್ರಮಿಸಿಕೊಂಡು ಯುವಜನರನ್ನು ಹಳ್ಳ ಹಿಡಿಸುತ್ತಿರುವ ಪ್ರತಿಗಾಮಿ ಚಿಂತನೆಗಳಿಗೆ ಪ್ರತಿಯಾದ ಸಮರ್ಥ ಚಿಂತನೆಗಳನ್ನು ಹರಿಬಿಡಬೇಕು. ನಾವು ಒಬ್ಬೊಬ್ಬರೂ ಒಂದೊಂದು ಶಕ್ತಿಯಾಗಬೇಕು. ಯುಕ್ತಿಯಿಂದ ಕಾರ್ಯನಿರ್ವಹಿಸಬೇಕು.

ಇಂತಹ ಒಂದು ಪ್ರಯತ್ನದಿಂದ ನಾವು ಖಂಡಿತವಾಗಿಯೂ ಸಮಾಜಮುಖಿ ಚಿಂತನೆಗಳೆಡೆಗೆ ಈ ಕಾಲದ ಯುವಜನತೆಯನ್ನು ಅಣಿನೆರೆಸಲು ಸಾಧ್ಯವಿದೆ. ಆದರೆ ಬಹಳಷ್ಟು ಹಿರಿಯರು ಈ ಕಾಲದ ತಂತ್ರಜ್ಞಾನ ಕೊಡಮಾಡಿರುವ ಇಂತಹ ಅವಕಾಶವನ್ನು ನಾನಾ ಕಾರಣಗಳಿಂದಾಗಿ ಅಸಡ್ಡೆ ಮಾಡುವುದೋ ಇಲ್ಲವೇ ತಮ್ಮ ಪಾಡಿಗೆ ತಮ್ಮದೇ ಹಳೆಯ ರೀತಿನೀತಿಗಳಲ್ಲಿ ಇದ್ದುಬಿಡುವುದು ವಿಷಾದಕರ.

ಮತ್ತೆ ಸಮೂಹ ಹಿತದ ಚಿಂತನೆಗಳು ಬಲಗೊಳ್ಳಬೇಕಿದೆ, ಸಾಮುದಾಯಿಕ ಚಿಂತನೆ ಯುವಜನತೆಯಲ್ಲಿ ಚೈತನ್ಯ ಪಡೆಯುವಂತೆ ಮಾಡಬೇಕಿದೆ. ಇಂತಹ ಒಂದನ್ನು ಅದೆಷ್ಟು ತ್ವರಿತವಾಗಿ ಮಾಡಬಹುದು ಎಂಬುದಕ್ಕೆ ಈ ಹಿಂದಿನ ಆಮ್ ಆದ್ಮಿ ಪಕ್ಷದ ತಂತ್ರಗಾರಿಕೆಯೇ ಸಾಕ್ಷಿ. ಇಂದು ಅದರ ಆಂತರಿಕ ವೈರುಧ್ಯದಲ್ಲಿ ಅದು ಸೋತಿರಬಹುದು ಆದರೆ ಇಡೀ ದೇಶದ ಒಂದು ಗಣನೀಯ ಮಟ್ಟದ ಯುವಪಡೆಯನ್ನು ಈ ಹೊಸಕಾಲದ ಮಾಧ್ಯಮದ ಮೂಲಕ ಸಂಘಟಿಸಲು ಸಾಧ್ಯವಾಯಿತಲ್ಲವೇ? ಈ ನಿಟ್ಟಿನಲ್ಲಿ ನಾವೆಲ್ಲ ಯೋಚಿಸಿ ಕಾರ್ಯಪ್ರವೃತ್ತರಾಗೋಣ.




**(ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕುಗ್ವೆ ಗ್ರಾಮದ ಹರ್ಷಕುಮಾರ್, ವಿದ್ಯಾರ್ಥಿ ದೆಸೆಯಲ್ಲಿ ಹಲವು ರಾಜಕೀಯ–ಸಾಮಾಜಿಕ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ನಂತರ ಹಲವು ಪತ್ರಿಕೆಗಳಲ್ಲೂ ಕೆಲಸ ಮಾಡಿದ ಅನುಭವ ಇರುವ ಇವರು, ಸದ್ಯಕ್ಕೆ *ಬ್ಲಾಗ್, ಫೇಸ್‌ಬುಕ್, ವಾಟ್ಸಾಪ್*‌ನಂತಹ ಸಾಮಾಜಿಕ ಮಾಧ್ಯಮಗಳನ್ನು ಸಮಾಜಮುಖಿಯಾಗಿ ಬಳಸಿಕೊಳ್ಳುವ ಕೆಲಸಗಳಲ್ಲಿ ತೊಡಗಿದ್ದಾರೆ.)**

**ಹೊಸ ಚಂದಾದಾರರಿಗೆ ಸೂಚನೆ**

**ಪತ್ರಿಕೆಗೆ ಚಂದಾದಾರರಾಗಬಯಸುವವರು (ಡಿಸೆಂಬರ್, ೨೦೧೫–ಆಗಸ್ಟ್, ೨೦೧೬) ತಮ್ಮ ಚಂದಾ (ರೂ. ೧೪೦/–) ಹಣವನ್ನು ಶಿವಮೊಗ್ಗದ IFSC ಕೋಡ್: SBMY 0040444) ವಿನೋಬನಗರ ಶಾಖೆಯಲ್ಲಿ 'ಸಂಪಾದಕರು ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ವರ್ಗಾಯಿಸಿ/ಜಮಾ ಮಾಡಿ 9449242284 –ಈ ಸಂಖ್ಯೆಗೆ ಕರೆ ಮಾಡಿ ತಿಳಿಸಬೇಕು ಅಥವಾ ಸಂದೇಶ ಕಳಿಸಬಹುದು.–ಸಂ.**

ಸಮಕಾಲೀನ

# ವಿಜ್ಞಾನ–ತಂತ್ರಜ್ಞಾನ: ಇದು ಜ್ಞಾನವೋ ಅ–ಜ್ಞಾನವೋ?



ಇದು ಆಧುನಿಕ ಯುಗ. ವೈಜ್ಞಾನಿಕತೆಯೇ ಇದರ ಅಡಿಗಲ್ಲು ಎಂದು ಹೇಳಲಾಗುತ್ತದೆ. ಅಂದರೆ ಇದರ ರುಚಿ–ಅಭಿರುಚಿ, ಸರಿ–ತಪ್ಪುಗಳೆಲ್ಲ ವಿಜ್ಞಾನದ ಒರೆಗಲ್ಲಿನಲ್ಲೇ ನಿರ್ಣಯವಾಗುವುದು. ನಮ್ಮ ಬುದ್ಧಿಜೀವಿಗಳ ಸಾಮಾಜಿಕ ಆಲೋಚನೆಗಳಿಂದ ಹಿಡಿದು ನಮ್ಮ ರೈತರು ತಮ್ಮ ಉತ್ಪನ್ನಗಳಿಗೆ ಕೇಳುವ ಬೆಲೆಗಳವರೆಗೆ ಎಲ್ಲವೂ ವೈಜ್ಞಾನಿಕವಿದ್ದರೇ ಅದು ನ್ಯಾಯವೆನ್ನಿಸುವುದು. ಅಷ್ಟರಮಟ್ಟಿಗೆ ವಿಜ್ಞಾನ ಈ ಯುಗದ ಮಹಾಜ್ಞಾನವಾಗಿ(ನಮ್ಮ ಎಲ್ಲ ಸಮಸ್ಯೆಗಳಿಗೂ ಇಲ್ಲಿ ಉತ್ತರವಿದೆ ಎಂಬರ್ಥದಲ್ಲಿ), ಅಂತಿಮ (ಆತ್ಯಂತಿಕ ಎಂಬರ್ಥದಲ್ಲಿ)ಜ್ಞಾನವಾಗಿ ನಮ್ಮನ್ನು ಆಳುತ್ತಿದೆ. ಹಾಗೆ ನೋಡಿದರೆ, ದೇವರು–ಧರ್ಮಗಳ ಹೆಸರಿನಲ್ಲಿ ಪಟ್ಟಭದ್ರ ಶಕ್ತಿಗಳು ಬಂಧಿಸಿಟ್ಟಿದ್ದ ಜನಸಾಮಾನ್ಯರನ್ನು ಮೂಢ ನಂಬಿಕೆಗಳ ಸೆರೆಯಿಂದ ಬಿಡುಗಡೆಗೊಳಿಸಿ ಅವರ ಬದುಕಿನಲ್ಲಿ ಮಾನವ ಘನತೆಯ ಹೊಸ ಮೌಲ್ಯಗಳನ್ನು ಬಿತ್ತಿದ್ದೇ ವಿಜ್ಞಾನ ಬಿಚ್ಚಿಟ್ಟ ಅನೇಕ ಸೃಷ್ಟಿ ರಹಸ್ಯಗಳೇ ಅಲ್ಲವೇ? ಹಾಗೇ ಮನುಷ್ಯನ ಬದುಕಿಗೆ ಹೊಸ ಅನುಕೂಲ ಮತ್ತು ಸುಖಗಳ ಅಸಂಖ್ಯ ಮತ್ತು ಅಸೀಮ ಸೌಲಭ್ಯಗಳನ್ನು ಒದಗಿಸಿದ್ದೂ, ಒದಗಿಸುತ್ತಿರುವುದೂ ತಂತ್ರಜ್ಞಾನವೆಂಬ ಈ ವಿಜ್ಞಾನದ ಅನ್ವಯಗಳೇ ಅಲ್ಲವೇ?

ಆದರೆ ಈ ವಿಜ್ಞಾನ ನಿಜವಾಗಿಯೂ ಮಹಾ ಅಥವಾ ಅಂತಿಮ ಜ್ಞಾನವೇ? ಇದಕ್ಕೆ ಇತಿಮಿತಿಗಳೇ ಇಲ್ಲವೇ? ಇಂದು ಅದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ? ಒಂದು ಕಡೆ ಸ್ವತಃ ವಿಜ್ಞಾನದ ಉನ್ನತ ಸಂಶೋಧನೆಗಳೇ ವಿಜ್ಞಾನ ತಲುಪಿರುವ ತಾತ್ವಿಕ ಬಿಕ್ಕಟ್ಟುಗಳ ಕಡೆ, ಅದರ ಅಂತಿಮ ಸೀಮೆಗಳ ಕಡೆ ಬೊಟ್ಟು ಮಾಡುತ್ತಿದ್ದರೆ, ಅದರ ಅನ್ವಯಶಾಸ್ತ್ರವಾದ ತಂತ್ರಜ್ಞಾನ ತನ್ನ ನಾಗಾಲೋಟದಲ್ಲಿ ಮಾಡಿದ ಅನಾಹುತಗಳ ಆತ್ಯಂತಿಕ ಪರಿಣಾಮವೆಂಬಂತೆ ತನಗೇ ಗೊತ್ತಿಲ್ಲದಂತೆ ಅನಾವರಣ ಮಾಡಿದ ಪರಿಸರ ವಿಜ್ಞಾನವೆಂಬ ಹೊಸ ಜ್ಞಾನಶಿಸ್ತು ಈ ತಂತ್ರಜ್ಞಾನದಲ್ಲಿ ಅಂತರ್ಗತವಾಗಿರುವ ಮಾನವನ ಸ್ವಯಂವಿನಾಶದ ಅಪಾಯದ ಕಡೆ ಬೊಟ್ಟು ಮಾಡುತ್ತಿದೆ.

ಹೀಗಾಗಿ ಇಂದು ವಿಜ್ಞಾನವನ್ನು ಮಹಾಜ್ಞಾನವೆಂದಾಗಲೀ, ಆತ್ಯಂತಿಕ ಜ್ಞಾನವೆಂದಾಗಲೀ ನೋಡುವ ಕ್ರಮವೇ ಪ್ರಶ್ನಾರ್ಹವೆನ್ನಿಸಿದೆ. ನಿಜವಾಗಿ ನಾವು ವಿಜ್ಞಾನವೆಂದು ಏನನ್ನು ಕರೆಯುತ್ತೀವೋ ಅದು ಕೇವಲ ಜಡವಸ್ತು ವಿಜ್ಞಾನ ಮತ್ತು ಅಳತೆಗೆ ಸಿಗುವ ವಸ್ತುಗಳ ವಿಜ್ಞಾನ ಮಾತ್ರ. ಆದರೆ ಸೃಷ್ಟಿ ಕೇವಲ ಅಳತೆಗಳಿಗೆ ಸಿಗಬಲ್ಲ ಜಡವಸ್ತುಗಳ ಸಂಯೋಜನೆಯಲ್ಲ. ಅದು ಒಂದು ಆದಿಮ ಮತ್ತು ಅಖಂಡ ವಿದ್ಯಮಾನ. ಅಷ್ಟೇ ಅಲ್ಲ, ಅದು ತನ್ನದೇ ಲಯದಲ್ಲಿ ಉಸಿರಾಡುತ್ತಿದೆ, ಜೀವಂತವಾಗಿದೆ ಎಂಬ ಅರಿವು ಈಗ ವಿಜ್ಞಾನದ ಮೀರಲಾಗದ ಎಲ್ಲೆಗಳಲ್ಲಿ ನಮ್ಮ ಅರಿವಿಗೆ ಬರುತ್ತಿದೆ. ನಾವು ಹೆಮ್ಮೆಪಟ್ಟುಕೊಂಡ ವಿಜ್ಞಾನ ಏನಿದ್ದರೂ ವಿ–ಜ್ಞಾನ; ಅಂದರೆ ವಿಗ್ರಹ ಜ್ಞಾನ; ಅಂದರೆ ಎಲ್ಲವನ್ನೂ ಒಡೆದು ನೋಡುವ–ವಿಶ್ಲೇಷಿಸಿ ನೋಡುವ ಒಂದು ಜ್ಞಾನ ಶಿಸ್ತೇ ಹೊರತು, ಒಂದು ವಸ್ತು ಅಥವಾ ವಿದ್ಯಮಾನವನ್ನು ಅದು ಇರುವ ಅಖಂಡ ಸ್ಥಿತಿಯಲ್ಲಿ ಅರಿಯಲಾಗದ ಜ್ಞಾನ; ಹಾಗಾಗಿ ಅದು ಅಪೂರ್ಣ ಜ್ಞಾನ ಮತ್ತು ಒಂದರ್ಥದಲ್ಲಿ ಅ–ಜ್ಞಾನವೇ ಸರಿ ಎಂಬ ಸಮಗ್ರ ಜ್ಞಾನ (ಇದನ್ನು ಬೌದ್ಧರು ಸಮ್ಯಕ್ ಜ್ಞಾನ ಎನ್ನುತ್ತಾರೆ) ಇಂದು ಉಂಟಾಗಿದೆ.

ಇಂತಹ ಅ–ಜ್ಞಾನದಿಂದಾಗಿಯೇ ನಾವು ಮೇರೆವರಿಯದ ತಂತ್ರಜ್ಞಾನದ ಹಿಂದೆ ಬಿದ್ದು ಅದರ ದಾಸರಾಗಿ ಮನುಷ್ಯಲೋಕವನ್ನು ಅನಾತ್ಮಿಕವಾಗಿಸುತ್ತಿದ್ದೇವೆ. ಸುಖ–ಮಿತಿ ಇಲ್ಲದ ಸುಖ–ನಮ್ಮ ಹಕ್ಕು ಎಂದು ನಂಬಿ ನಾವು ಯಾವುದರ ಸೃಷ್ಟಿಯೋ ಆ ಸೃಷ್ಟಿಯ ಆಧಾರ ಶಕ್ತಿಗಳನ್ನೇ ನಾಶ ಮಾಡುತ್ತಿದ್ದೇವೆ. ಹೌದು ಅವು ಶಕ್ತಿಗಳು, ವಸ್ತುಗಳಲ್ಲ. ನಾವು ಹೆಮ್ಮೆ ಪಡುತ್ತಾ ಬೆಳೆಸುತ್ತಾ ಬಂದ ಭೌತ(ಅಥವಾ ಜಡ ಅಥವಾ ಪದಾರ್ಥ) ವಿಜ್ಞಾನ ಈ ಶಕ್ತಿಗಳನ್ನು ಗುರುತಿಸಿದ್ದು ಜಡವಸ್ತುವಿನ ಭಾಷೆಯಲ್ಲೇ. ಹಾಗಾಗಿಯೇ ಅದು ಪ್ರಜ್ಞಾಶೂನ್ಯವಾಗಿ ಇಂದು ಸೃಷ್ಟಿಯನ್ನು ಸಂಪೂರ್ಣ ಮಲಿನಗೊಳಿಸಿ ಅದನ್ನು ನಾಶ ಮಾಡಲು ಹೊರಟಿರುವುದು. ಇದನ್ನು ಎಷ್ಟು ಹೇಳಿದರೂ, ಹೇಗೆ ಹೇಳಿದರೂ ಮನುಷ್ಯರಿಗೆ ಅರ್ಥವಾಗುತ್ತಿಲ್ಲ. ತಾಪಮಾನದ ಹೆಚ್ಚಳ, ಹಿಮ ಯುಗ, ಜೀವ ತಳಿಗಳ ನಾಶದ ಪರಿಣಾಮಗಳು, ಪ್ರಾಕೃತಿಕ ಸಂಪನ್ಮೂಲಗಳ ಬರಿದು–ಇವಾವುವೂ ಇಂದು ಮನುಷ್ಯ ಹಂದಿಯ(ಅಂದರೆ ತೃಪ್ತಿಯೇ ಇಲ್ಲದ ಏಕಾಗ್ರ ಕಬಳಿಕೆಯ)–ಆಧುನಿಕ–ಬಾಳನ್ನು ನಿಲ್ಲಿಸಲು ಪ್ರೇರೇಪಿಸುತ್ತಿಲ್ಲ. ವೈವಿಧ್ಯಮಯ ಹಿಂಸೆ, ಅತ್ಯಾಚಾರ, ಯುದ್ಧ, ಭಯೋತ್ಪಾದನೆಗಳೂ ಅವನ್ನು ಎಚ್ಚರಿಸುತ್ತಿರುವಂತೆ ಕಾಣುತ್ತಿಲ್ಲ. ಭಯೋತ್ಪಾದನೆಗೆ, ಒಂದು ನಿರ್ದಿಷ್ಟ ಧರ್ಮದಲ್ಲೋ ತೈಲ ರಾಜಕಾರಣದಲ್ಲೋ ಅವನು ಕಾರಣಗಳನ್ನು ಹುಡುಕುತ್ತಾ ಮೈಮರೆತಿದ್ದಾನೆ. ಈ ಎಲ್ಲ ಹಿಂಸೆ–ಅಶಾಂತಿಗೆ ಬೆನ್ನೆಲುಬಾಗಿರುವುದು ಸಾಮಾಜಿಕ ಮಾಧ್ಯಮಗಳೂ ಸೇರಿದಂತೆ ಆಧುನಿಕ ತಂತ್ರಜ್ಞಾನವೆಂಬುದು ಅವನ ಸದ್ಯದ ಹಂದಿ–ಅರಿವಿಗೆ ತಾಕುತ್ತಿಲ್ಲ. ಹಾಗಾಗಿ 'ಕೊಡಲಿ ಮತ್ತು ಕಂಪ್ಯೂಟರ್' ಎಂಬ ಈ ಒಂದು ಉಪಕಥೆ:

೧೯೪೫ರಲ್ಲಿ ನಾಗಸಾಕಿಯ ಮೇಲೆ ಅಣುಬಾಂಬ್ ಹಾಕಿ ಸಾವಿರಾರು ಜನ ಕ್ಷಣಾರ್ಧದಲ್ಲಿ ಸತ್ತು ಇನ್ನಷ್ಟು ಸಾವಿರಾರು ಜನ ನೋವು–ಸಂಕಟ–ರೋಗ–ರುಜಿನಗಳಿಗೆ ಸಿಕ್ಕಿ ಸಾಯುವಂತೆ ಮಾಡಿದ ವಿಮಾನ ಚಾಲಕ ನಂತರ **'thou shall not kill'** ಎಂಬ ಕ್ರಿಶ್ಚಿಯನ್ ಧಾರ್ಮಿಕ ಪ್ರಜ್ಞೆಗೆ ಸಿಲುಕಿ ಒದ್ದಾಡಿ ಹುಚ್ಚನಾಗಿ ಹೋಗಿ ಸತ್ತ. ಆದರೆ ಕೆಲವೇ ವರ್ಷಗಳ ನಂತರ ವಿಯಟ್ನಾಂ ಯುದ್ಧದಲ್ಲಿ ರಾಸಾಯನಿಕ ಬಾಂಬ್ ಹಾಕಿ ಹೆಂಗಸರು ಮಕ್ಕಳೂ ಸೇರಿದಂತೆ ಅಷ್ಟೇ ಸಾವಿರಾರು ಜನರನ್ನು ಕೊಂದ ವೈಮಾನಿಕನನ್ನು ಯಾವುದೇ ಪಾಪಪ್ರಜ್ಞೆ, ಧಾರ್ಮಿಕ ಪ್ರಜ್ಞೆ ಬಾಧಿಸದೆ ಅವನು ಸಂತೋಷದ ಬದುಕನ್ನೇ ಬದುಕಿದ. ಅವನನ್ನೊಮ್ಮೆ ಸಾಮಾಜಿಕ ತಜ್ಞರು ಒಂದು ಸಂದರ್ಶನದಲ್ಲಿ, ನಿನ್ನ ಕೈಗೆ ಒಂದು ಕೊಡಲಿ ಕೊಟ್ಟು ಎದುರಿನ ಬೀದಿಯಲ್ಲಿ ಹೋಗುತ್ತಿರುವ ಮುದುಕಿಯನ್ನು ಕೊಂದು ಬರುತ್ತೀಯಾ ಎಂದು ಕೇಳಿದಾಗ ಅವನು ಗಾಬರಿ ಬಿದ್ದು 'ಹಾಗೇಕೆ ನನಗೆ ಹೇಳುತ್ತೀರಿ, ಅದು ಭಯಾನಕ! ನಾನೊಬ್ಬ ಕ್ರಿಶ್ಚಿಯನ್ನನಾಗಿ ಮನುಷ್ಯನನ್ನು ಕೊಲ್ಲುವುದು ಮಹಾಪಾಪ' ಎಂದನಂತೆ. ಅದಕ್ಕೆ ಆ ಸಂಶೋಧಕರು ಮತ್ತೆ 'ನೀನು ವಿಯಟ್ನಾಂನಲ್ಲಿ ಬಾಂಬ್ ಹಾಕಿ ಸಾವಿರಾರು ಜನರನ್ನು ಕೊಂದೆಯಲ್ಲ? ಏಕೆ, ನಿನ್ನನ್ನು ಆ ಕ್ರಿಶ್ಚಿಯನ್ ಪ್ರಜ್ಞೆ ಬಾಧಿಸಲಿಲ್ಲವೆ?' ಎಂದು ಕೇಳಿದಾಗ ಅವನು ಹೇಳಿದ್ದು: 'ಬಾಂಬ್ ಹಾಕಿದ್ದು ನಾನಲ್ಲ; ವಿಮಾನಕ್ಕೆ ಅಳವಡಿಸಿದ್ದ ಕಂಪ್ಯೂಟರ್!'

ಇದು ತಂತ್ರಜ್ಞಾನದ ಮಹಿಮೆ! ಅವನ ಪ್ರಜ್ಞೆಯನ್ನೇ ಒಡೆದು ಮನುಷ್ಯನನ್ನು ಮನುಷ್ಯನನ್ನಾಗಿಸಿರುವ ಅವನಲ್ಲಿನ ಪಾಪಪ್ರಜ್ಞೆಯಿಂದಲೇ ಅವನನ್ನು ಚ್ಯುತಗೊಳಿಸಿ ಅವನನ್ನು ಅಮಾನವೀಕರಣಕ್ಕೊಳಪಡಿಸುವ ಶಕ್ತಿಯೇ ಇಂದಿನ ತಂತ್ರಜ್ಞಾನ! ಮನುಷ್ಯನ ಕೈಕಾಲುಗಳನ್ನೇ ಅಪ್ರಸ್ತುತಗೊಳಿಸಿರುವ ಯಂತ್ರ ನಾಗರೀಕತೆ ಮನುಷ್ಯನನ್ನು ರಾಕ್ಷಸನನ್ನಾಗಿ ಮಾಡಿರುವ ಆಧುನಿಕತೆಯ ಪ್ರತೀಕವೇ ಆಗಿದೆ. ದುಡಿಮೆಯ ಸಂಕಷ್ಟಗಳಿಂದ ಪಾರು ಮಾಡಿ ಮನುಷ್ಯನಿಗೆ ಒಂದಿಷ್ಟು ಬಿಡುವು ಒದಗಿಸುವುದಾಗಿ ಸಾರುತ್ತಾ ಬಂದ ತಂತ್ರಜ್ಞಾನ ಇಂದು ಅವನನ್ನು ಸ್ಪರ್ಧಾತ್ಮಕ ಸುಖಗಳ ದುರಾಸೆಗೆ ಬೀಳಿಸಿ ಅವನನ್ನು ಬಿಡುವಿಲ್ಲದ ದುಡಿಮೆಗೆ ಹಚ್ಚುವ ಅನಾಗರಿಕ–ಸಂಸ್ಕೃತಿಹೀನ ಬದುಕಿನ ಮಾದರಿಗೆ ದಾರಿ ಮಾಡಿಕೊಟ್ಟಿದೆ.. ದೇಹಾತ್ಮನಾದ ಮನುಷ್ಯನನ್ನು ಬರೀ ದೇಹದ ಮಟ್ಟಕ್ಕೆ ಇಳಿಸಿದೆ. ಭೂಮಿಯನ್ನೇ ಕೊಲ್ಲಬಲ್ಲ ಹವಾಮಾನ ವೈಪರೀತ್ಯ ಕುರಿತು ಮುವ್ವತ್ತು ಸಭೆಗಳು ನಡೆದರೂ ನಾವು ಒಂದು ಇತ್ಯರ್ಥಕ್ಕೆ ಬರಲಾಗಿಲ್ಲ! ಪಶ್ಚಿಮಘಟ್ಟಗಳ ಅಳಿವು–ಉಳಿವಿನ ಪ್ರಶ್ನೆ ಕುರಿತು ಅತ್ಯಂತ ಸಮಗ್ರವಾಗಿದ್ದ ಗಾಡ್ಗೀಳ್ ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ ನಾವು ನಂತರದ ಅಸಮಗ್ರ ಕಸ್ತೂರಿ ರಂಗನ್ ವರದಿಯನ್ನೂ ತಿರಸ್ಕರಿಸಲು ಸಿದ್ಧರಾಗುತ್ತಿದ್ದೇವೆ! ಕಾರಣ: ತೀರದ ನಮ್ಮ 'ಅಭಿವೃದ್ಧಿ'ಯ ದಾಹ.!

ಕೆಲವರಿಗೆ ಇದು ಉತ್ಪ್ರೇಕ್ಷೆಯ, ಹುಚ್ಚುತನದ ಮಾತೆನ್ನಿಸಬಹುದು. ಆದರೆ ಆಧುನಿಕ ಜಗತ್ತಿನ ಋಷಿಗಳೆನಿಸಿದ ರಾಜಕೀಯ ದಾರ್ಶನಿಕ ಗಾಂಧಿ, ಅಧ್ಯಾತ್ಮಿಕ ವಿಜ್ಞಾನಿ ಐನ್‌ಸ್ಟೀನ್, ಮಾನವ ಅರ್ಥಶಾಸ್ತ್ರಜ್ಞ ಶೂಮೇಕರ್ ಮತ್ತು ಕೃಷಿ ಸಂತ ಫುಕುವೋಕಾಗಳೂ ಹುಚ್ಚರಾಗಿದ್ದರೆ ನಾವೂ ಹುಚ್ಚರಾಗುವುದೇ ಲೇಸು ಎಂದು ನನ್ನ ಸಮಾಜವಾದಿ ಪ್ರಜ್ಞೆ ಹೇಳುತ್ತಿದೆ. ಏಕೆಂದರೆ, ಸಮಾಜವಾದ ಎಂದರೆ ಆತ್ಯಂತಿಕವಾಗಿ ಮಿತಿಗಳುಳ್ಳ ಬದುಕಿನ ಅರಿವಿನ ಅನಾವರಣವೇ ಆಗಿದೆ. ಮುಂದಿನ ನಾಲ್ಕು ಲೇಖನಗಳು ಇದನ್ನು ಇನ್ನಷ್ಟು ವಿವರವಾಗಿ ತಿಳಿಸುತ್ತದೆ. ಓದಿ, ಬರೆಯಿರಿ.–ಸಂ.

# ವಿಜ್ಞಾನ ಎಂದರೇನು?

–ಎಂ.ಆರ್. ರಾಮಶೇಷ



'ವಿಜ್ಞಾನ' ಎಂಬುದೊಂದು ಬೃಹತ್ತಾದ ಜ್ಞಾನ ಪ್ರಕಾರ. ಮನುಷ್ಯ ಚಿಂತನೆಗೆ ತೊಡಗಿದಾಗಿನಿಂದ ಇಂದಿನವರೆಗೆ ನಡೆದಿರುವ ಈ ಕ್ಷೇತ್ರದ ಕೃಷಿ ಹುಲುಸಾದ ಬೆಳೆಯನ್ನಿತ್ತಿದೆಯಾದರೂ ಕಾಲಕಾಲಕ್ಕೆ ಈ 'ಜ್ಞಾನ ಪ್ರಕಾರ'ದ ಮೂಲ ವ್ಯಾಖ್ಯೆಯೇ ಬದಲಾಗುತ್ತಾ ಬಂದಿರುವುದೊಂದು ವಿಶೇಷ. ನಾವು ವಿಜ್ಞಾನ ಎಂದು ಅನುವಾದಿಸಿಕೊಂಡಿರುವ 'ಸೈನ್ಸ್' ಎಂಬುದು ಮೂಲತಃ ಲ್ಯಾಟಿನ್ ಭಾಷೆಯಲ್ಲಿ 'ಜ್ಞಾನ' ಎಂಬ ಅರ್ಥವುಳ್ಳ 'ಸೈನ್ಷಿಯ' ಎಂಬ ಧಾತುವಿನಿಂದ ನಿಷ್ಪತ್ತಿಯಾಗಿದೆ. ವೆಬ್ಸ್ಟರ್ ನಿಘಂಟಿನ ಪ್ರಕಾರ 'ವಿಜ್ಞಾನ' ಎಂಬುದು ಅಧ್ಯಯನ ಹಾಗೂ ಪ್ರಯೋಗಶೀಲತೆಯಿಂದ ನಮ್ಮ ಸುತ್ತಲಿನ ಪ್ರಪಂಚದ ಬಗ್ಗೆ ಗಳಿಸಿದ 'ಜ್ಞಾನ ಸಮುಚ್ಚಯ'. ಇಂತಹ ಒಂದು ವಿಶಾಲಾರ್ಥದಲ್ಲಿ ಗಮನಿಸಿದಾಗ ಮನುಷ್ಯ ಈವರೆಗೆ ಕಟ್ಟಿದ ಹತ್ತು ಹಲವು ಸಂಸ್ಕೃತಿಗಳೆಲ್ಲದರಲ್ಲೂ ಇಂತಹ 'ಜ್ಞಾನ ಸಮುಚ್ಚಯ' ಇದೆ. ಆದರೆ ಇವೆಲ್ಲವೂ ಆಯಾ ಸಂಸ್ಕೃತಿಗೇ ವಿಶಿಷ್ಟ ಎನ್ನಬಹುದಾದ ಒಂದು 'ಪ್ರಪಂಚದ ಪರಿಕಲ್ಪನೆ'ಗಳಿಗೆ ಅನುಗುಣವಾಗಿವೆ. ಉದಾಹರಣೆಗೆ ಮಾನವನ ದಾಖಲಿತ ಚರಿತ್ರೆಯ ಪ್ರಾರಂಭಕ್ಕಿಂತಲೂ ಮುಂಚಿತವಾಗಿಯೇ, ಮನುಷ್ಯರಿಗೆ ವಿಷಭರಿತ ಸಸ್ಯಗಳನ್ನು ತಿನ್ನಲು ಯೋಗ್ಯವಾಗಿಸುವ ಹಲವು ವಿಧಿವಿಧಾನಗಳು ತಿಳಿದಿದ್ದವು. ಅಷ್ಟೆ ಅಲ್ಲ; ಕಣ್ಣಿಗೆ ಕಂಡ ಸಂಗತಿಗಳನ್ನು ಅಮೂರ್ತ ಚಿಂತನೆಗಳ ಮೂಲಕ ಪರಿಭಾವಿಸಿ ಅರ್ಥೈಸಿಕೊಳ್ಳುವ ಕ್ರಮವೂ ಮನುಷ್ಯರಿಗೆ ತಿಳಿದಿತ್ತು. ಇದರಿಂದಾಗಿ ಅವರು ತಮ್ಮದೇ ಆದ ರೀತಿಯಲ್ಲಿ ಕಾಲಗಣನೆ, ಕಟ್ಟಡ ನಿರ್ಮಾಣ ಇತ್ಯಾದಿ ಸಂಗತಿಗಳನ್ನು ರೂಪಿಸಿಕೊಂಡಿದ್ದರು.

ಆದರೆ ವಿಜ್ಞಾನ ಎಂಬ 'ಜ್ಞಾನ ಪ್ರಕಾರ' ಒಂದು ಶಾಸ್ತ್ರೀಯವಾದ ಸಿದ್ಧಾಂತವಾಗಿ ರೂಪು ಗೊಂಡಿದ್ದು ನಂತರದ ಬೆಳವಣಿಗೆ. ಈ ಹಂತದಲ್ಲಿ, ವಿಜ್ಞಾನದ ಬೆಳವಣಿಗೆಗೆ ಭಾರತ ಹಾಗೂ ಮಧ್ಯಪ್ರಾಚ್ಯದ ಸಂಸ್ಕೃತಿಗಳು ಅಪಾರ ಕೊಡುಗೆಯನ್ನಿತ್ತಿವೆ. ತದನಂತರ ವಿಜ್ಞಾನದ ನಿರ್ವಚನೆಯಲ್ಲಿ ಬಂದ ಮಹತ್ವದ ಬದಲಾವಣೆಯ ಕಾರಣಪುರುಷನೆಂದರೆ ಮಧ್ಯಪ್ರಾಚ್ಯದ ಮುಸ್ಲಿಮ್ ವಿದ್ವಾಂಸ–ಇಬ್ನ್ ಅಲ್ ಹಯಾತಮ್ (ಈತನನ್ನು ಆಧುನಿಕ 'ವೈಜ್ಞಾನಿಕ' ಚಿಂತನಾಕ್ರಮದ ಜನಕನೆಂದು ಕರೆಯುತ್ತಾರೆ.) ಈತನ ಪ್ರಕಾರ ವಿಜ್ಞಾನ ಎಂದರೆ ಪ್ರಯೋಗಗಳ ಮೂಲಕ ಸಿದ್ಧಗೊಂಡ ಹಾಗೂ ಪುನರಾವರ್ತನೆಯ ನಿಕಷದಲ್ಲಿ ನಿಲ್ಲಬಹುದಾದ ಜ್ಞಾನ ವಿಶೇಷ ಮಾತ್ರ. ಹೀಗೆ ಜ್ಞಾನಾರ್ಜನೆಯ ಕ್ರಮವಾಗಿ ಗುರುತಿಸಲ್ಪಟ್ಟು ಸಂಕುಚಿತಗೊಂಡ 'ಜ್ಞಾನ ಸಮುಚ್ಚಯ' ಅಲ್ಲಿಂದಾಚೆಗೆ ಸಾಗಿದ ಹಾದಿಯೇ ಬೇರೆ. ಜ್ಞಾನಾರ್ಜನೆಯ ಕ್ರಮದ ಮೇಲೆ ಬಿದ್ದ ಒತ್ತು, ಆ ಕ್ರಮವನ್ನೇ ಒಂದು ವಿಧಾನಶಾಸ್ತ್ರವಾಗಿ ಬೆಳೆಸಿತು. ಈ ವಿಧಾನಶಾಸ್ತ್ರ ಜ್ಞಾನಭಂಡಾರವನ್ನು ಪ್ರವೇಶಿಸಬಯಸುವ ಸಂಗತಿಗಳ ಪ್ರವೇಶಾರ್ಹತೆಯನ್ನು ನಿರ್ಧರಿಸುವ ಗೇಟ್ ಕೀಪರ್ ಆಗಿಬಿಟ್ಟಿತು. 'ಪ್ರಯೋಗ ಹಾಗೂ ಪುನರಾವರ್ತನೆ' ಎಂಬುದು ಹೀಗೆ ವಿಜ್ಞಾನದ ಒಂದು ಆಧಾರಸ್ತಂಭವಾಯಿತು.

ತದನಂತರದ ವಿಜ್ಞಾನದ ಬೆಳವಣಿಗೆ ಕಂಡುಬರುವುದು ಯೂರೋಪಿನ 'ನವೋದಯ' (renaissance)ದ ಕಾಲದಲ್ಲಿ, ಹೊಸ ತಾರ್ಕಿಕ ಚಿಂತನಾಕ್ರಮ, ಕ್ರಿಶ್ಚಿಯನ್ ಮತದ ಸುಧಾರಣೆ, ಪ್ರಾಟೆಸ್ಟೆಂಟ್ ಮತದ ಉದಯ ಇತ್ಯಾದಿಗಳ ಅಲೆಗಳಿಂದಾಗಿ ವಿಜ್ಞಾನದ ಬೆಳವಣಿಗೆಗೊಂದು ಹೊಸ ಉತ್ತೇಜನ ದೊರಕಿತು. ವಿಜ್ಞಾನ ಕೇವಲ 'ಭೌತಿಕ ಪ್ರಪಂಚದ ಬಗ್ಗೆ ಇರುವ ಎಲ್ಲ ಜ್ಞಾನದ ಸಮುಚ್ಚಯವಲ್ಲ; ಬದಲಿಗೆ ಅದು, ಒಂದು ವಸ್ತುನಿಷ್ಠ ವ್ಯವಸ್ಥಿತ ಕ್ರಮದಲ್ಲಿ ನಿರೂಪಿತವಾದ ಹಾಗೂ ಪ್ರಯೋಗ–ಪರೀಕ್ಷೆಗಳ ಮೂಲಕ ಸಾಬೀತು ಪಡಿಸಬಲ್ಲ ವಿಷಯಗಳ ಹಾಗೂ ಅಂತಹ ವಿಷಯಾಧಾರಿತ ಸತರ್ಕ ಊಹೆಗಳ ಸಮುಚ್ಚಯ ಮತ್ತು ಅಂತಹ ಸಮುಚ್ಚಯವನ್ನು ಬೆಳೆಸುವ ಒಂದು ಉದ್ಯಮ' ಎಂಬ ಒಂದು ಉನ್ನತ ಧ್ಯೇಯೋದ್ದೇಶ ಹಾಗೂ ಅಂದಿನ ಆದರ್ಶ ಕಸುಬುದಾರರ ದಾರಿದೀಪವಾಗಿತ್ತು. ಹೀಗೆ ಗಳಿಸಿದ ಜ್ಞಾನವು ಮತಾಧಾರಿತ ಕುರುಡು ನಂಬಿಕೆಗಳಿಂದ ಬದುಕುತ್ತಿದ್ದ ಜನರ ಜೀವನಕ್ರಮವನ್ನು ಹಸನು ಗೊಳಿಸಬಲ್ಲದು ಎಂಬ ತಿಳುವಳಿಕೆ ವಿಜ್ಞಾನಿಗಳ ಪ್ರಯತ್ನಕ್ಕೆ 'ಇದೊಂದು ಮಾನವ ಕಲ್ಯಾಣಕ್ಕಾಗಿ ನಡೆಯುತ್ತಿರುವ ಮಹತ್ಕಾರ್ಯ' ಎಂಬ ಧನ್ಯತಾಭಾವವನ್ನೂ ಕೊಟ್ಟಿತ್ತು. ಯೂರೋಪಿನ ಮತಕೇಂದ್ರಿತ ಸಮಾಜದಲ್ಲಿ ಉಂಟಾದ ತಾತ್ವಿಕ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳಲು ವಿಜ್ಞಾನ ಹಾಗೂ ವೈಜ್ಞಾನಿಕ ಚಿಂತನಾಕ್ರಮ ಅನುಕೂಲಕರ ಉಪಕರಣವಾಯಿತು. ವಿಜ್ಞಾನದ ಅಂದಿನ ಮುಖ್ಯ ಲಕ್ಷಣಗಳೆಂದರೆ :೧. ಪ್ರಯೋಗ ಹಾಗೂ ಅವಲೋಕನದ ಮೂಲಕ ಮಾಹಿತಿ ಸಂಗ್ರಹಣೆ ೨. ಸಂಗ್ರಹಿಸಿದ ಮಾಹಿತಿಗಳನ್ನು ಕಲ್ಪಿತ ಸಿದ್ಧಮಾದರಿಯೊಂದಿಗೆ ವ್ಯವಸ್ಥಿತ ತರ್ಕಬದ್ಧ ಕ್ರಮದಲ್ಲಿ ಜೋಡಣೆ. ೩. ಅದೇ ತರ್ಕದ ವಿಸ್ತರಣೆಯಿಂದ ಹೊಮ್ಮುವ ಹೊಸ ನಿರ್ಧಾರಗಳನ್ನು ಪುನರಾವರ್ತನೀಯ ಪ್ರಯೋಗ ಪ್ರಮಾಣದ ಮೂಲಕ ಪರೀಕ್ಷಣೆ.

ಇಂತಹ ಕ್ರಮದ ಮೂಲಕ ಇಡೀ ಪ್ರಪಂಚವನ್ನು ಹಾಗೂ ಅದರ ಹಿಂದಿರುವ ರಹಸ್ಯಗಳನ್ನು ಅರಿತುಕೊಳ್ಳಲು ಹೊರಟ ವಿಜ್ಞಾನದ ಕ್ರಮವಿಧಾನಕ್ಕೆ ಊಹೆಗೂ ನಿಲುಕಲಾರದಷ್ಟು ಸಫಲತೆ ಸಿಕ್ಕಿತು. ಒಂದು ರೀತಿಯಲ್ಲಿ 'ನವೋದಯ'ದ ನಂತರದ ಕಾಲವನ್ನು ವಿಜ್ಞಾನದ ಉತ್ಕರ್ಷ ಕಾಲವೆನ್ನಬಹುದು. ಆಗ ಬಂದ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ ವಿಜ್ಞಾನದ ಶಾಖೋಪಶಾಖೆಗಳಲ್ಲಿನ ಆವಿಷ್ಕಾರಗಳು ಮಾನವಕುಲವನ್ನೇ ದಂಗುಬಡಿಸುವಂತಿದ್ದವಷ್ಟೇ ಅಲ್ಲ, ಅಂದಿನ ಜೀವನ ಕ್ರಮವನ್ನು ಹಾಗೂ ತನ್ನ ಸುತ್ತಲಿನ ವಿಶ್ವವನ್ನು ಪರಿಭಾವಿಸುವ ಕ್ರಮವನ್ನೂ ಮೂಲಭೂತವಾಗಿ ಬದಲಾಯಿಸಿದವು. ಅದುವರೆಗೂ ನಂಬಿ ಬಂದ ನಂಬಿಕೆಗಳನ್ನು ಪ್ರಶ್ನಿಸುವ, ಅವಕ್ಕೆ ಹೊಸ ಉತ್ತರ ಹುಡುಕುವ ಉತ್ಸಾಹ ಎಣೆಯಿಲ್ಲದ ಬೆಳವಣಿಗೆಗೆ ಎಡೆಮಾಡಿಕೊಟ್ಟಿತು. ಅದುವರೆಗೂ ಯಾವದನ್ನು ಕೌತುಕವೆಂದು, ದೈವನಿಯಾಮಕ ನಿಗೂಢತೆಯೆಂದು ಭಾವಿಸಲಾಗಿತ್ತೋ, ಅಂತಹ ಬಹಳಷ್ಟು ಸಂಗತಿಗಳ ಹಿಂದೆ ಅಡಗಿರುವ ಸೂತ್ರರೂಪಿ ತತ್ತ್ವಗಳು ಜಗಜ್ಜಾಹೀರಾಯಿತು.

ಹೀಗೆ ಸಿಕ್ಕ ಸಫಲತೆಯಿಂದಾಗಿ ವಿಜ್ಞಾನದ ಜ್ಞಾನಾರ್ಜನಾ ಕ್ರಮ/ವಿಧಾನಶಾಸ್ತ್ರ(Scientific methodology)ವನ್ನು ಮನುಷ್ಯ ಜೀವನದ ಇತರ ಕ್ಷೇತ್ರಗಳಿಗೂ ವಿಸ್ತರಿಸುವ ಕ್ರಮ ಬೆಳೆಯಿತು. ಅದುವರೆಗೂ ವಿಜ್ಞಾನದ ಪರಿಧಿಯಾಚೆಗಿನ ಕ್ಷೇತ್ರ ಎಂದು ಭಾವಿಸಲಾದ ಕಲೆ, ಧರ್ಮ, ಲೌಕಿಕ ವ್ಯವಹಾರ, ಇತ್ಯಾದಿ ಮಾನವಿಕ ಕ್ಷೇತ್ರಗಳು – ಇವೆಲ್ಲಕ್ಕೂ ಈ ವೈಜ್ಞಾನಿಕ ವಿಧಾನ ಏಕಮೇವ ವಿಶ್ವಂಭರ ಸತ್ಯ ಶೋಧನಾ ಕ್ರಮವಾಗಿ ಆವರಿಸಿತು.

ಇದರ ಜೊತೆಯಲ್ಲೇ ಆದ ಇನ್ನೊಂದು ಮಹತ್ವದ ಬದಲಾವಣೆಯೆಂದರೆ, ವಿಜ್ಞಾನದ ಅನ್ವಯದಿಂದ ಮೂಡಿದ ಹೊಸ ತಂತ್ರಜ್ಞಾನ ಕ್ಷೇತ್ರ ಜನರ ಜೀವನಕ್ರಮ (ಹಾಗೂ ಚಿಂತನಾಕ್ರಮ)ವನ್ನೇ ಬದಲಾಯಿಸಬಲ್ಲ ಹಲವಾರು ಉಪಕರಣಗಳ (ಉದಾಹರಣೆಗೆ, ಉಗಿಬಂಡಿ, ಪ್ರಯಾಣ ಹಾಗೂ ಸಂಪರ್ಕ ಸಾಧನಗಳು ಮತ್ತು ಹೊಸ ಹೊಸ ಶಸ್ತ್ರಾಸ್ತ್ರಗಳು ಇತ್ಯಾದಿ) ಆವಿಷ್ಕಾರಗಳನ್ನು ಹೊರಹಾಕಿತು. ಈ ಆವಿಷ್ಕಾರಗಳ ಹಿಂದೆ ಇರುವ ಅಭೂತಪೂರ್ವ ವ್ಯಾಪಾರಿ ಸಾಧ್ಯತೆಗಳನ್ನು ಮನಗಂಡ ಹಲವರು ವಿಜ್ಞಾನದ ಬೆಳವಣಿಗೆಗೆ ಬೇಕಾದ ಹಣವನ್ನು ಬಂಡವಾಳವಾಗಿ ಹೂಡಿ ಅದರ ಪ್ರತಿಫಲಗಳ ಮೇಲೆ ತಮ್ಮ ಸ್ವಾಮ್ಯತೆಯನ್ನು ಬಿಗಿಗೊಳಿಸಿಕೊಳ್ಳತೊಡಗಿದರು. ಈ ಭರಾಟೆಯಲ್ಲಿ ಸರಕಾರಗಳೂ ಸಕ್ರಿಯವಾಗಿ ಭಾಗವಹಿಸಿ ತಮ್ಮ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವ ಕಾರ್ಯದಲ್ಲೂ ತೊಡಗಿಕೊಂಡವು.

ಈ ಎಲ್ಲ ಪ್ರಯತ್ನಗಳಿಗೆ ಸಿಕ್ಕ ಊಹೆಗೂ ನಿಲುಕದಂತಹ ಯಶಸ್ಸು ವಿಜ್ಞಾನದ ಹೊಳಪನ್ನು ಎಷ್ಟು ಹೆಚ್ಚಿಸಿದವೆಂದರೆ ವಿಜ್ಞಾನೇತರ ಜ್ಞಾನಾರ್ಜನಾ ವಿಧಾನಗಳು ಮೂಲೆಗುಂಪಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿ ತಲುಪಿದವು. ವಿಪರ್ಯಾಸವೆಂದರೆ ಅದೇ ಸರಿಸುಮಾರು ಹೊತ್ತಲ್ಲಿ, ದಾಪುಗಾಲು ಹಾಕುತ್ತಾ ಮುಂದುವರೆಯುತ್ತಿದ್ದ ವಿಜ್ಞಾನದ 'ಸೇನೆ'ಯ ಮುಂಚೂಣಿಯಲ್ಲಿದ್ದ ಭೌತಶಾಸ್ತ್ರ ತನ್ನ ಅಣು–ಪರಮಾಣು ವಿಜ್ಞಾನ ಸಂಶೋಧನೆಯಲ್ಲಿ ಎದುರುಗೊಂಡ ಸಮಸ್ಯೆಗಳು, ಅಲ್ಲಿನವರೆಗಿನ (ವೈಜ್ಞಾನಿಕ)ನಂಬಿಕೆಗಳನ್ನೇ ಬುಡಮೇಲು ಮಾಡುವಂತಹ ಬಿಕ್ಕಟ್ಟಿನ ಸನ್ನಿವೇಶದಲ್ಲಿತ್ತು! ಉದಾಹರಣೆಗೆ ಎಲೆಕ್ಟ್ರಾನ್ ಎಂಬ ಒಂದು 'ವಿಶೇಷ'ದ ಮೂಲ ಸ್ವರೂಪ ಕಣವೋ ಅಲೆಯೋ ಎಂಬುದು ಭೌತಶಾಸ್ತ್ರಿಗಳಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿತ್ತು; ಆದರೆ ಎಲೆಕ್ಟ್ರಾನ್‌ನ ಮೂಲಸ್ವರೂಪದ

ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದ 'ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನ ಕ್ಷೇತ್ರ' ಸಹಸ್ರಾರು ಹೊಸ ಹೊಸ ಉಪಕರಣಗಳನ್ನು ರೂಪಿಸಿ(ಉದಾಹರಣೆಗೆ, ರೇಡಿಯೋ, ರೆಡಾರ್, ಟಿವಿ, ಕಂಪ್ಯೂಟರ್ ಇತ್ಯಾದಿ) ಪ್ರಪಂಚದ ಒಟ್ಟಾರೆ ನಕ್ಷೆಯನ್ನೇ ಬದಲಿಸಿತ್ತು.

ಭೌತಶಾಸ್ತ್ರಿಗಳು ತಮ್ಮ ಸಮಸ್ಯೆಗೆ ಕಂಡುಕೊಂಡ ಉತ್ತರಗಳು ಆಧ್ಯಾತ್ಮ ಹಾಗೂ ಧರ್ಮ ಮತ್ತು ಕಲಾ ಪ್ರಾಕಾರಗಳು ಕಂಡುಕೊಂಡ ಜ್ಞಾನಕ್ಕೆ ಹತ್ತಿರವಾಗಿದ್ದವು. (ವಿಜ್ಞಾನದ ಬಗ್ಗೆ ಆಸಕ್ತಿಯನ್ನೇ ಹೊಂದಿಲ್ಲದ ಅರವಿಂದರು ೧೯೧೦ರ ಸುಮಾರಿನಲ್ಲೇ –ಅಂದರೆ ವಿಜ್ಞಾನ, ಅಣುವನ್ನು ಒಡೆದು ಪರಮಾಣು ಕಣಗಳ ಶೋಧ ಶುರು ಹಚ್ಚಿದ ದಿನಗಳಿಗಿಂತ ಮುಂಚೆಯೇ – ಹೇಳಿದ್ದ 'ಅಣುಗಳನ್ನು ಎಷ್ಟು ಒಡೆದರೂ ಮೂಲಭೂತ ಕಣಗಳನ್ನು ಮಾನವ ತಲುಪಲಾರ' ಎಂಬ ಅಥವಾ 'ವಸ್ತು ಮತ್ತು ಶಕ್ತಿ ಎಂಬೆರಡೂ ಮೂಲಭೂತವಾಗಿ ಒಂದೇ ಎಂಬುದನ್ನು ಮಾನವ ತಿಳಿಯುವನಕ ಅವನ ಏಳಿಗೆ ಇಲ್ಲ' ಎಂಬ ಕಾಣ್ಕೆಗಳು ನಂತರ ವಿಜ್ಞಾನ ತನ್ನ ಬಿಕ್ಕಟ್ಟನ್ನು ಪರಿಹರಿಸಿಕೊಂಡಾಗ ಕಂಡ ಕಾಣ್ಕೆಗಳಿಗೆ ಸರಿಸಮಾನವಾಗಿದೆ.)


ಆ ಹೊತ್ತಿಗೆ ಹಲವಾರು ವಿಜ್ಞಾನಿಗಳಿಗೆ ವಿಜ್ಞಾನೇತರ ಜ್ಞಾನಾರ್ಜನಾ ಕ್ರಮಗಳು ಆಸಕ್ತಿಪೂರ್ಣವಾಗಿ ಕಾಣತೊಡಗಿದರೂ, ತಂತ್ರಜ್ಞಾನ ಹಾಗೂ ವಾಣಿಜ್ಯಾಸಕ್ತಿಗಳ ಹಿಡಿತ ವಿಜ್ಞಾನವನ್ನು ಆ ವೇಳೆಗಾಗಲೇ ಬೇರೊಂದು ದಾರಿಯಲ್ಲಿ ಬಹುದೂರ ಮುನ್ನಡೆಸಿ ವಿಜ್ಞಾನದ ಹಾಗೂ ವೈಜ್ಞಾನಿಕ ವಿಧಾನಶಾಸ್ತ್ರದ ಸಾಧ್ಯಾಸಾಧ್ಯತೆಯ ಬಗ್ಗೆ ಸಲ್ಲದ ಕಲ್ಪನೆಗಳನ್ನು ಜನಸಮುದಾಯದಲ್ಲಿ ಹರಡಿಬಿಟ್ಟಿದ್ದವು. ಇವುಗಳಲ್ಲಿ ಪ್ರಮುಖವಾದವೆಂದರೆ:

೧. ವೈಜ್ಞಾನಿಕ ವಿಧಾನದಿಂದ ಪ್ರಕೃತಿಯ ಎಲ್ಲ ರಹಸ್ಯಗಳನ್ನರಿಯಲು ಸಾಧ್ಯ; ಹಾಗೆ ಅರಿತ ರಹಸ್ಯಗಳನ್ನು ಉಪಯೋಗಿಸಿ ಪಕೃತಿಯ ಮೇಲೆ ನಿಯಂತ್ರಣ ಸಾಧಿಸುವುದು ಸಾಧ್ಯ ಹಾಗೂ ಸಾಧು. ೨. ಪ್ರಪಂಚದ ಎಲ್ಲ ಸಮಸ್ಯೆಗೂ ಸರ್ವಮಾನ್ಯ ಪರಿಹಾರವನ್ನು ಒದಗಿಸಲು ವಿಜ್ಞಾನದಿಂದಷ್ಟೇ ಸಾಧ್ಯ. ವಿಜ್ಞಾನ ಅಥವಾ ಅದರ ಅಂಗಭಾಗವಾದ ತಂತ್ರಜ್ಞಾನ ಸೃಷ್ಟಿಸಿದ ಸಮಸ್ಯೆಗಳಿಗೂ ಪರಿಹಾರ ವೈಜ್ಞಾನಿಕ ವಿಧಾನದಿಂದಲೇ ಸಾಧ್ಯ. ೩. ವಿಜ್ಞಾನ ಸಮಸ್ಯೆಗಳ ಪರಿಹಾರದ ಅಂಗವೇ ಹೊರತು ಸಮಸ್ಯೆಯ ಭಾಗವಲ್ಲ. ೪. ಭಾವಾಧಾರಿತ ಕ್ರಮಕ್ಕಿಂತ 'ವಸ್ತುನಿಷ್ಠ (ಇನ್ನೂ ನಿಖರವಾಗಿ ಹೇಳಬೇಕೆಂದರೆ ವ್ಯಕ್ತಿನಿರಪೇಕ್ಷ) ತರ್ಕಶುದ್ಧ ಚಿಂತನಾಕ್ರಮ'ವೇ ಶ್ರೇಷ್ಠ.

ತನ್ನ ಅಸದಳ ಆಕರ್ಷಣೆಯಿಂದಾಗಿ ವಿಜ್ಞಾನದ ಉಪ–ಉತ್ಪನ್ನವಾದ ತಂತ್ರಜ್ಞಾನ, ವಾಣಿಜ್ಯಾಸಕ್ತಿಗಳ ಜೊತೆಗೂಡಿ ವಿಜ್ಞಾನದ ದಿಕ್ಕುದಿಶೆಗಳನ್ನು ನಿರ್ಧರಿಸುವ ನಿರ್ದೇಶಕ ಸ್ಥಾನವನ್ನು ಆಕ್ರಮಿಸಿದೆ. ಈಗ್ಗೆ ಸುಮಾರು ೭೦ ವರ್ಷಗಳಿಂದೀಚೆಗೆ, ತಂತ್ರಜ್ಞಾನ ಹಾಗೂ ತತ್ಸಂಬಂಧಿ ಆವಿಷ್ಕಾರಗಳಾಗಿವೆಯೇ ವಿನಃ ಮೂಲ ವಿಜ್ಞಾನ ಶಾಖೆಗಳಲ್ಲಿ ವಿಶೇಷವೆನಿಸಬಹುದಾದ ಯಾವುದೇ ಹೊಸ ಬೆಳವಣಿಗೆ ಕಾಣದೇ ವಿಜ್ಞಾನ ನಿಂತನೀರಾಗಿ ಕೊಳೆಯುತ್ತಿದೆ ಎಂಬುದು ಹಲವು ವೈಜ್ಞಾನಿಕ ಚಿಂತಕರ ನಂಬಿಕೆ.

ತನ್ನ ಪ್ರಾಮುಖ್ಯತೆಯನ್ನು ಮೊದಮೊದಲು ಹೆಚ್ಚಿಸಿದ ತಂತ್ರಜ್ಞಾನದ ಮಿತಿಗಳ ಬಗ್ಗೆ ಮಾತಾಡದೆ ಸಹಿಸಿದ ವಿಜ್ಞಾನ ಇಂದು ತಂತ್ರಜ್ಞಾನದ ಕಾಲಡಿಯಲ್ಲಿ ಇಡೀ ಮಾನವಕುಲವನ್ನಷ್ಟೇ ಅಲ್ಲ ಸ್ವತಃ ತನ್ನನ್ನೇ ಸಿಕ್ಕಿಸಿಕೊಂಡಿರುವ ಪರಿ 'ತನ್ನ ಬಲೆ ತಾನೆ ಬಲಿ ಜೇಡನಾ ಪರಿ' ಎಂಬಂತಾಗಿದೆ. ತಂತ್ರಜ್ಞಾನದ ಈ ಹುಚ್ಚುಹೊಳೆಯಿಂದ ಮಾನವನಿಗೆ ಮುಕ್ತಿ ನೀಡಬಲ್ಲ ಸಾಧ್ಯತೆ ವಿಜ್ಞಾನಕ್ಕೆ ಬರಬೇಕಾದರೆ ಅದು ಇತರ ಜ್ಞಾನಾರ್ಜನಾಕ್ರಮಗಳ ಬಗ್ಗೆ ವಿನಮ್ರ ಕುತೂಹಲವನ್ನು ಬೆಳೆಸಿಕೊಳ್ಳಬೇಕಾದುದು ಅತ್ಯವಶ್ಯ.

**(ಈಗ ಮೈಸೂರಿನಲ್ಲಿ ನೆಲೆಸಿರುವ ಲೇಖಕ ಎಂ. ಆರ್. ರಾಮಶೇಷ, ಮೊದಲ ತಲೆಮಾರಿನ ಗಣಕ ತಂತ್ರಜ್ಞರಾಗಿದ್ದು, ಕೆಲ ಕಾಲ ಅಮೇರಿಕಾದಲ್ಲಿ ನೆಲೆಸಿದ್ದರು. ನಂತರ ಮೈಸೂರಿನ ಜೆ.ಸಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಗಣಕಶಾಸ್ತ್ರ ಬೋಧಿಸಿ ಈಗ ವೇದಾಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ)**



# ಪದಾರ್ಥ ವಿಜ್ಞಾನದಿಂದ ಪರಿಸರ ವಿಜ್ಞಾನದೆಡೆಗೆ...

–ಪ್ರಸನ್ನ



**ಪ**ದಾರ್ಥವಿಜ್ಞಾನ ಪರಿಸರವಿಜ್ಞಾನ: ವೈಜ್ಞಾನಿಕ ಜಗತ್ತಿನ ಎರಡು ತುದಿಗಳಿವು, ಭಿನ್ನದೃಷ್ಟಿಕೋನಗಳು. ವಿರುದ್ಧ ದಿಕ್ಕುಗಳಿಂದ ಇವು ಜ್ಞಾನವನ್ನು ಸಮೀಪಿಸುತ್ತವೆ. ಪದಾರ್ಥ ವಿಜ್ಞಾನವು ಎಲ್ಲವನ್ನೂ ವಿಭಜಿಸಿ, ವಿಘಟಿಸಿ, ಬೇರ್ಪಡಿಸಿ, ಪ್ರತ್ಯೇಕತೆಯನ್ನು ಅರ್ಥಮಾಡಿಕೊಳ್ಳಲು ಹೆಣಗಿದರೆ, ಪರಿಸರ ವಿಜ್ಞಾನವು ಸಮಗ್ರತೆಯನ್ನು ಅರಿಯಲು ಹೆಣಗುತ್ತದೆ. ವಿವಿಧ ಪದಾರ್ಥಗಳು, ಜೀವಪರಿಸರಗಳು, ವಾತಾವರಣಗಳು ಎಲ್ಲವೂ ಅಂತರ್‌ಸಂಬಂಧದಿಂದ ರೂಪಿತವಾದವುಗಳು ಎಂದು ಪರಿಸರ ವಿಜ್ಞಾನ ತಿಳಿಯುತ್ತದೆ.

ಎಲ್ಲವನ್ನೂ ಪ್ರತ್ಯೇಕಿಸಿ, ವರ್ಗೀಕರಿಸಿ, ನೋಡುವ ವಿಧಾನಕ್ಕೆ ಬೌದ್ಧರು ಒಂದು ಹೆಸರನ್ನೇ ನೀಡಿದ್ದಾರೆ. ಅದನ್ನವರು *ಡಿಸ್ಕ್ರಿಮಿನೇಟರಿ ನಾಲೆಡ್ಜ್* ಅಥವಾ ವರ್ಗೀಕರಣ ವಿಧಾನ ಎಂದು ಕರೆಯುತ್ತಾರೆ. ಮಾತ್ರವಲ್ಲ, ವರ್ಗೀಕರಿಸಿ ನೋಡುವ ತೆವಲನ್ನು ಹತ್ತಿಕ್ಕಬೇಕು ಎಂದು ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಯಾವುದೂ ಪ್ರತ್ಯೇಕವಲ್ಲ, ಯಾವುದಕ್ಕೂ ಸ್ವತಂತ್ರ ಅಸ್ತಿತ್ವವಿಲ್ಲ. ಹಾಗಾಗಿಯೇ ಆತ್ಮನೆಂಬುವವನಿಲ್ಲ ಎಂದು ಬೌದ್ಧರು ನಂಬುತ್ತಾರೆ.

ಪದಾರ್ಥ ವಿಜ್ಞಾನವು ಭಿನ್ನತೆಯನ್ನು ಸಂಭ್ರಮಿಸುತ್ತದೆ. ಅಥವಾ ಸಂಭ್ರಮಿಸುತ್ತಿತ್ತು. ಐನ್‌ಸ್ಟೈನನ ಸಾಪೇಕ್ಷ ಸಿದ್ಧಾಂತವು ಜಾರಿಗೆ ಬಂದ ನಂತರದಲ್ಲಿ ಪದಾರ್ಥ ವಿಜ್ಞಾನವೂ ಸಹಿತ ಭಿನ್ನತೆಯ ಪರಿಕಲ್ಪನೆಯಿಂದ ದೂರ ಸರಿಯತೊಡಗಿದೆ.

ಆದರೇನು! ಪ್ರತ್ಯೇಕತೆಯೆಂಬುದು ಯಂತ್ರನಾಗರೀಕತೆಯ ಬುನಾದಿಯಾಗಿದೆ. ಯಂತ್ರ ನಾಗರೀಕತೆಯನ್ನು ರೂಪಿಸಿದ್ದೇ ವರ್ಗೀಕರಣ ವಿಧಾನ. ವಿಜ್ಞಾನವೇ, ವಿಜ್ಞಾನ ತಂತ್ರಜ್ಞಾನ ಎಂದು ವರ್ಗೀಕರಣಗೊಂಡಿದೆ. ಹೇಗೆ ಕ್ರೈಸ್ತ ಪರಿಕಲ್ಪನೆಯಲ್ಲಿ ದೇವರಿಗೆ ಸೈತಾನನೆಂಬ ಸೋದರನಿದ್ದಾನೆಯೋ ಹಾಗೆಯೇ ವಿಜ್ಞಾನಕ್ಕೆ ತಂತ್ರಜ್ಞಾನವೆಂಬುದು ಸೈತಾನಿ ಸಹೋದರ! ವಿಜ್ಞಾನಕ್ಕೆ ಬೇಡವಾದರೂ ಸೈತಾನಿ ಸಹೋದರನಿಗೆ ಭಿನ್ನತೆ ಬೇಕು. ವಿಜ್ಞಾನದ ಹೆಸರಿನಲ್ಲಿ ಯಂತ್ರ ನಾಗರೀಕತೆಯನ್ನು ರೂಪಿಸುತ್ತಿರುವುದು ಈ ಸೈತಾನಿ ಸಹೋದರನೇ ಸರಿ.

ಆಧುನಿಕರಿಗೆ ಪರಿಸರದ ಅರಿವು ಮೂಡಿದ್ದು ಇತ್ತೀಚೆಗೆ. ಮೊದಲು ನಾವೆಲ್ಲರೂ ಪದಾರ್ಥ ವಿಜ್ಞಾನಿಗಳು ಮಾತ್ರವೇ ಆಗಿದ್ದೆವು. ನೀರನ್ನು ಬೇರ್ಪಡಿಸಿ ನೀರೊಳಗಿರುವ ಧಾತುಗಳನ್ನು ಹುಡುಕಿದೆವು. ಗಾಳಿಯನ್ನು ಬೇರ್ಪಡಿಸಿ ಗಾಳಿಯ ಸಂಯೋಜನೆಯನ್ನು ಹುಡುಕಿದೆವು, ಕಪ್ಪೆಯನ್ನು ಕುಯ್ದು, ಅದರ ಶ್ವಾಸಕೋಶವೆಲ್ಲಿದೆ ಜಠರವೆಲ್ಲಿದೆ ಅನ್ನನಾಳಗಳೆಲ್ಲಿವೆ ಎಂದು ಹುಡುಕಿದೆವು. ಮೊದಲು ಬೇರ್ಪಡಿಸಿದೆವು ನಂತರ ಸಂಯೋಜಿಸಿದೆವು. ಈ ಪ್ರಕ್ರಿಯೆಯನ್ನು ನಾವು ಕಂಡು ಹಿಡಿಯುವ ಪ್ರಕ್ರಿಯೆ ಎಂದು ಘೋಷಿಸಿದೆವು. ಹೊಸ ಹೊಸ ಪದಾರ್ಥಗಳನ್ನು ಕಂಡು ಹಿಡಿದೆವು. ಹೊಸ ಔಷಧಗಳು ಹೊಸ ಲೋಹಗಳು ಆಸಿಡ್ಡುಗಳು ಆಲ್ಕಲಿಗಳು ಕ್ರಿಮಿನಾಶಕಗಳು ಯಂತ್ರಗಳು ಕಿರಣಗಳು ವಾಹಕಗಳು... ಸಾಲುಗಟ್ಟಿ ಹೊರಬಂದವು.

ಪದಾರ್ಥ ಹೊಸತು. ಪದಾರ್ಥಗಳು ರೂಪಿಸಿದ ಜೀವನಶೈಲಿ ಹೊಸತು. ಹಾಗಾಗಿ ನಾವೂ ಸಹ ಹೊಸಬರಾದೆವು. ಆಧುನಿಕರಾದೆವು. ಆದರೇನು ಜೀವ ಹಳತು. ಜೀವಕ್ಕೆ ಸಹಜತೆಯೊಟ್ಟಿಗೆ ಗಾಢವಾದ ನಂಟಿದೆ. ಜೀವ ನಲುಗಿತು.

ಆಗ ಬಂತು ಪರಿಸರ ಪ್ರಜ್ಞೆ ಹಾಗೂ ಪರಿಸರ ವಿಜ್ಞಾನ. ಜೀವಗಳು ಹಾಗೂ ಜೀವಪರಿಸರಗಳು ಹುಟ್ಟುವುದೇ ಅಂತರ್‌ಸಂಬಂಧಗಳಿಂದಾಗಿ ಎಂಬ ಅರಿವು ಮೂಡಿತು. ಸಾವು ಹುಟ್ಟುವುದು ಬೇರ್ಪಡಿಕೆಯಿಂದಾಗಿ. ಹಿಂದಿನವರಿಗೆ ಯಾವತ್ತೂ ತಿಳಿದಿದ್ದ ಈ ಸರಳ ಸತ್ಯವು ನಮಗೆ ತಿಳಿದು ಬರಲಿಕ್ಕೆ ಸಾವೇ ಬೇಕಾಯಿತು. ಗಿಡಮರಗಳ ಸಾವು, ಪ್ರಾಣಿಪಕ್ಷಿಗಳ ಸಾವು, ಮಾನವೀಯತೆಯ ಸಾವು, ಸಂತಸದ ಸಾವು, ಶಾಂತಿಯ ಸಾವು, ನೆಮ್ಮದಿಯ ಸಾವು.... ಸಾಲುಗಟ್ಟಿ ಬರಬೇಕಾಯಿತು.

ಈಗ ಅರಿವಾಗುತ್ತಿದೆ ನಮಗೆ! ಕಾಡಿನಲ್ಲಿ ಆನೆ ಎಷ್ಟು ಮುಖ್ಯವೋ ಕ್ಷುದ್ರಹುಳುವೂ ಅಷ್ಟೇ ಮುಖ್ಯವೆಂದು, ಫಲವು ಎಷ್ಟು ಮುಖ್ಯವೋ ಕಳೆಯೂ ಅಷ್ಟೇ ಮುಖ್ಯವೆಂದು. ಮಳೆ ಬೆಳೆ ಗಾಳಿ ಬಿಸಿಲು ಚಳಿ ಮಣ್ಣು ಮರಳು ತೇವಾಂಶ, ಯಾವುದರಿಂದ ಯಾವ ಪರಿಣಾಮವಾಗುತ್ತದೆ ಎಂದು ಹೇಳಲಾಗುವುದಿಲ್ಲ. ವ್ಯತ್ಯಾಸ ಸರಳವಾದದ್ದಾದರೆ ಲೆಕ್ಕ ಹಾಕಬಹುದಿತ್ತೇನೋ, ಸಂಕೀರ್ಣವಾದದ್ದಾದಾಗ ಲೆಕ್ಕ ಹಾಕಿದರೂ ತಿಳಿಯದು ಅದು. ಅಥವಾ ವಿಪರೀತವಾಗಿ ಬಿಡಿಸಿ ಬಿಡಿಸಿ ಹೇಳಬೇಕಾದ ಅಗತ್ಯವೂ ಇಲ್ಲ. ಇದ್ದದ್ದನ್ನು



ಫುಕೊವೊಕಾ ತನ್ನ ಹೊಲದಲ್ಲಿ

ಇದ್ದ ಹಾಗೆಯೇ, ಸಮಗ್ರವಾಗಿಯೇ, ಅರಿಯುವ ಪ್ರಯತ್ನ ಮಾಡಬೇಕು ನಾವು.

ಅರಿವೆಂಬುದು ಅಹಂಕಾರವಲ್ಲ, ನಾವೂ ಸಹ ಪರಸ್ಪರಾವಲಂಬಿಗಳು ಎಂಬ ವಿನಯವೇ ಅರಿವು. ವಿಷಯ ಸಂಗ್ರಹಣೆ ಅರಿವಲ್ಲ. ಜೀವ ಪರಿಸರವೆಂಬುದು ಅದರೊಳಗೆ ಅಡಕವಾಗಿರುವ ವಿಷಯಗಳ ಮೊತ್ತ ಅಥವಾ ಪದಾರ್ಥಗಳ ಮೊತ್ತ, ಅಥವಾ ಅವುಗಳ ಸಂಯೋಜನೆಗಳ ಮೊತ್ತ ಎಂದು ಅರಿಯಲಾಗುವುದಿಲ್ಲ. ಅರಿವಿಗೆ ಅನುಭವ ಬೇಕು. ಆಧುನಿಕ ವಿಜ್ಞಾನವು ತನ್ನ ಪದ್ಧತಿಯಲ್ಲಿಯೇ ಎಡವಿದೆ. ಅನೇಕ ವೇಳೆ ಅದು ಅನುಭವಹೀನ ವಿಷಯ ಸಂಗ್ರಹಣೆ ಮಾತ್ರವೇ ಆಗಿದೆ.

ಮಾವುತರು ರೈತರು ಬೆಸ್ತರು ನೇಕಾರರು ದಡ್ಡರೆಂದು ತಿಳಿಯಿತು ಅದು. ನೇಕಾರನ ಮಗ್ಗವು ಒಂದು ದಿನ ಸುಲಲಿತವಾಗಿ ಓಡುತ್ತದೆ. ಮತ್ತೊಂದು ದಿನ ಓಡುವುದಿಲ್ಲ. ಬಡಪಟ್ಟಿಗೂ ಓಡುವುದಿಲ್ಲ. ಅದೇ ಮಗ್ಗ ಅದೇ ನೂಲು ಅದೇ ವಿನ್ಯಾಸ, ಆದರೂ ಓಡುವುದಿಲ್ಲ. ವಾತಾವರಣದಲ್ಲಾಗಿರುವ ಸಣ್ಣ ವ್ಯತ್ಯಾಸವೊಂದು ಮಗ್ಗದ ಮುನಿಸಿಗೆ ಕಾರಣವೆಂದು ನೇಕಾರ ಅನುಭವದಿಂದ ಬಲ್ಲ. ತಂತ್ರಜ್ಞಾನಿಗಿದು ತಿಳಿಯುವುದೇ ಇಲ್ಲ.


ಪ್ರಖ್ಯಾತ ಪರಿಸರವಾದಿ ಹಾಗೂ ಸಹಜಕೃಷಿಕ ಫುಕುವೊಕಾ ಕೃಷಿ ವಿಜ್ಞಾನಿಯಾಗಿ ರಂಗ ಪ್ರವೇಶ ಮಾಡಿದ. ಮೊದಲು ಗದ್ದೆಗಿಳಿದಾಗ ಆತನಿಗೆ ಅನುಭವ ಕಡಿಮೆಯಿತ್ತು, ಸಿದ್ಧಾಂತ ಗಟ್ಟಿಗಿತ್ತು. ಸೋತ. ತನ್ನ ಸಿದ್ಧಾಂತವು ಸಂಪೂರ್ಣ ನೆಲಕಚ್ಚಿತೇ ಎಂದು ಫುಕುವೊಕಾ ಗಾಬರಿಯಾದ. ಆದರೆ ಆತನಿಗೆ ತನ್ನ ಸಿದ್ಧಾಂತದ ಬಗ್ಗೆ ನಂಬಿಕೆಯಿತ್ತು. ತಾಳ್ಮೆಯಿಂದ ಕಾದ. ಜೀವಪರಿಸರವನ್ನು ಗಮನಿಸಿದ, ಅನುಭವಿಸಿದ. ನಿಧಾನವಾಗಿ ಬ್ರಹ್ಮಾಂಡವೇ ಅವನೆದುರಿಗೆ ತೆರೆದುಕೊಂಡಿತು.

ಒಂದು ದಿನ, ತಾನಿದ್ದ ಗುಡಿಸಲಿನಿಂದ ತಲೆ ಹೊರಹಾಕುತ್ತಾನೆ ಫುಕವೋಕ. ಆಶ್ಚರ್ಯ! ಗದ್ದೆಯ ಬಯಲು, ಗುಡ್ಡದ ಬದಿ, ಎಲ್ಲವೂ ರಾತ್ರೋರಾತ್ರ ಬದಲಾಗಿ ಹೋಗಿದೆ. ಭವ್ಯವಾದ ಹಾಗೂ ದೈವಿಕವಾದ ರೇಷಿಮೆಯ ತೆಳುವಸ್ತ್ರವೊಂದನ್ನು ಇಡೀ ಬಯಲಿಗೆ ಹೊದಿಸಿದಂತೆ ಮಿರಿಮಿರಿ ಮಿಂಚುತ್ತಿದೆ. ಜೇಡರ ಜಾಲ! ಹತ್ತಿರ ಹೋಗಿ ಗಮನಿಸಿದ. ನೂರಾರು, ಸಾವಿರಾರು ಜೇಡನ ಹುಳುಗಳು! ಅದೆಲ್ಲಿಂದ ಬಂದವೋ, ಏಕಾಗಿ ಬಂದವೋ, ಅಂತೂ ಬಂದಿದ್ದಾವೆ. ಏಕಪ್ರಕಾರವಾಗಿ ಕೆಲಸದಲ್ಲಿ ನಿರತವಾಗಿದ್ದಾವೆ. ಜಾಲಕಟ್ಟುವ ಜೇಡನ ವಿಸ್ಮಯ ಬಹಳದಿನ ಉಳಿಯಲಿಲ್ಲ. ಮಾರನೆಯ ದಿನಕ್ಕಾಗಲೇ ಜಾಲ ಅಲ್ಲಲ್ಲಿ ಹರಿಯತೊಡಗಿತ್ತು. ಮೂರನೆಯ ದಿನಕ್ಕೆ ಜಾಲವೂ ಇಲ್ಲ ಜೇಡವೂ ಇಲ್ಲ. ಮಂಗಮಾಯ. ಹರಿದ ಒಂದಿಷ್ಟು ಜಾಲಗಳು ಅನಾಥವಾಗಿ ತೇಲುತ್ತಿತ್ತು, ಗಿಡಗಳಿಗಂಟಿ ಗಾಳಿಯಲ್ಲಿ! ಸಹಜ ಕ್ರಿಮಿನಾಶಕವಾಗಿ ಕೆಲಸ ಮಾಡಿತ್ತು ಜೇಡ!

ಫುಕೊವೋಕಾ ಚಿಂತಿಸಿದ! ಈ ಜಾಲದೊಳಗೆ, ಧ'ಡಾರನೆ, ಎಂಡೋಸಲ್ಫಾನ್ ಚೆಲ್ಲಿಬಿಟ್ಟರೆ ಏನಾದೀತು? ನಾವು ಯಾವುದನ್ನು ಕಳೆಯೆಂದು ಅಥವಾ ಕ್ರಿಮಿಯೆಂದು, ಅರ್ಥಾತ್ ನಮ್ಮ ಶತ್ರುವೆಂದು, ತಿಳಿಯುತ್ತೇವೆಯೋ ಅದು ಸಾಯುತ್ತದೆ ನಿಜ. ಅದು ಮಾತ್ರವೇ ಸಾಯುತ್ತದೆಯೇ? ಕೆಡುಕು ಸತ್ತರೆ ಒಳಿತು ಉಳಿದೀತೆ? ಎಲ್ಲವೂ ಅಂತರ್‌ಸಂಬಂಧಿಯಾಗಿ ಹೆಣೆದುಕೊಂಡಿರುವಾಗ ಯಾವುದು ಒಳಿತು ಯಾವುದು ಕೆಡುಕು? ಎಂಡೋಸಲ್ಫಾನ್ ಎಂಬ ಖಾತ್ರಿ ವಿಷವಿರಲಿ, ಒಲೆಯ ಬೂದಿ ಚೆಲ್ಲಿದರೂ ಸಾಕು, ಈ ಸೂಕ್ಷ್ಮಜಾಲದೊಳಗೆ, ಅಲ್ಲೋಲಕಲ್ಲೋಲವಾಗಿ ಬಿಡುತ್ತದೆ ಎಂದರಿತ ಫುಕವೋಕಾ. ಜೀವಪರಿಸರ ಜಾಲವನ್ನು ನಲುಗಿಸದೆ, ನೇಗಿಲು ಹಾಯಿಸದೆ, ಅತಿಯಾಸೆಗೆ ಬಲಿಬೀಳದೆ, ದೈಹಿಕಶ್ರಮವನ್ನಷ್ಟೆ ಬಳಸಿಕೊಂಡು, ಪ್ರಕೃತಿ ನೀಡುವಷ್ಟು ಫಲವನ್ನು ಮಾತ್ರವೇ ಪಡೆದುಕೊಳ್ಳುತ್ತೇನೆ ಎಂದು ನಿರ್ಧರಿಸಿದ. ಪರಿಸರವು ಸಮೃದ್ಧ ಫಲವನ್ನೇ ನೀಡಿತು. ಎಂಡೋಸಲ್ಫಾನ್, ಅಥವಾ ಯೂರಿಯಾ, ಅಥವಾ ಟಿಲ್ಲರು, ಟ್ರ್ಯಾಕ್ಟರು, ಬಳಸಿದಾಗ ನೀಡುವುಕ್ಕಿಂತ ಮಿಗಿಲಾದ ಫಲವನ್ನೇ ನೀಡಿತು. ಜೊತೆಗೆ ಫಲವು ವಿಷರಹಿತವಾಗಿತ್ತು.

ನಾವು ಮಾನವರು ಎಲ್ಲವನ್ನೂ ಕಟ್ಟುತ್ತೇವೆ. ನಿಸರ್ಗ ಕಟ್ಟುವುದಿಲ್ಲ, ಕೆಡವುವುದೂ ಇಲ್ಲ. ನಾವು ಮೊದಲು ಕೆಡವಿ ನಂತರ ಕಟ್ಟುತ್ತೇವೆ. ಅದು ವಿಕಾಸಹೊಂದುತ್ತದೆ. ವಿಕಾಸಮಾರ್ಗವನ್ನು ಸಂಪೂರ್ಣವಾಗಿ ತಿರಸ್ಕರಿಸಿ ಕಟ್ಟುವುದು ಹಾಗೂ ಕೆಡವುವುದು ವಿನಾಶಕಾರಿ. ದೇಶ ಕಟ್ಟುವುದಿರಲಿ ಧರ್ಮ ಕಟ್ಟುವುದಿರಲಿ, ಸಮಾಜವಿರಲಿ ಸಭ್ಯತೆಯಿರಲಿ ಕಾರಖಾನೆಯಿರಲಿ... ಸ್ಮಾರ್ಟ್‌ಸಿಟಿ, ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರು ಏನೇ ಇರಲಿ, ನಾವು ಕಟ್ಟುವುದು ಹೀಗೆಯೇ ಸರಿ?

ಒಟ್ಟು ಕತೆಯ ನೀತಿಯೆಂದರೆ, ಎಲ್ಲವನ್ನೂ ವಿಘಟಿಸಿ ನೋಡುವುದು ಮಾತ್ರವೇ ವೈಜ್ಞಾನಿಕ ವಿಧಾನವಲ್ಲ. ಅಥವಾ ಪರಸ್ಪರಾವಲಂಬನೆ ಓಬೀರಾಯನ ಕಾಲದ ತತ್ವವಲ್ಲ. ಅದೂ ಕೂಡ ವೈಜ್ಞಾನಿಕ ವಿಧಾನವೇ ಸರಿ.



**(ಹೆಗ್ಗೋಡಿನ 'ಚರಕ' ಎಂಬ ದೇಸಿ ವಸ್ತ್ರ ನಿರ್ಮಾಣ ಸಹಕಾರಿ ಸಂಸ್ಥೆಯ ರೂವಾರಿ ಎಂದೇ ಪ್ರಸಿದ್ಧರಾದ ಪ್ರಸನ್ನ ಈಗ 'ಸುಸ್ಥಿರ ಅಭಿವೃದ್ಧಿ' ಮಾದರಿಯ ಮೂಲಕ ಗ್ರಾಮ ಪುರ್ನನಿರ್ಮಾಣ ಆಂದೋಲನದಲ್ಲಿ ತೊಡಗಿದ್ದಾರೆ)**

# ಮರಳಿ 'ಬಾಲ್ಯ' ನಮಗೆ ಸಿಗಲುಂಟೆ?

**–ಲಕ್ಷ್ಮೀಶ ತೋಳ್ಪಾಡಿ**



**ಅ**ಮೇರಿಕೆಯ ಚಿಕಾಗೋ ನಗರದಲ್ಲಿ ಒಂದು ಪ್ರಸಿದ್ಧ Abattoir – ಪ್ರಾಣಿವಧಾ ಗೃಹ –ಇದೆಯಂತೆ. ನಿತ್ಯವೂ ಸಾವಿರಾರು ದನ– ಎತ್ತು – ಹಂದಿ – ಕುರಿಗಳು ವಧೆಯಾಗುವ ಜಾಗ ಇದು. ಅದೆಷ್ಟು ವೈಜ್ಞಾನಿಕವಾಗಿ ಈ ಸಾವಿರಾರು ಹತ್ಯೆಗಳನ್ನು ಇಲ್ಲಿ ನೆರವೇರಿಸುತ್ತಾರೆಂದರೆ, ಒಂದು ಹನಿ ರಕ್ತವೂ ಒಂದು ತುಣುಕು ಮಾಂಸವೂ ಮೂಳೆಯ ಒಂದು ತುಂಡೂ ಕೂಡ ಭೂಮಿಗೆ ಚೆಲ್ಲಿ ಹೋಗದಂತೆ, ಎಲ್ಲಿಯೂ ಯಾವ ಕೊಳಕೂ ಇಲ್ಲದೇ ಅಷ್ಟು ಸ್ವಚ್ಛವಾಗಿ ನೋಡುವ ಕಣ್ಣಿಗೆ ಹಬ್ಬವಾಗುವಂತೆ, ಈ ವಧಾ ಗೃಹವನ್ನು ನಿರ್ವಹಿಸುತ್ತಾರಂತೆ. ಇದು ಅವರ ಹೆಮ್ಮೆ! ಇಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದಿಟ್ಟ ಒಂದು ಉಲ್ಲೇಖ ಇದೆಯಂತೆ. 'Everything is utilised here'– ಇದು ಆ ಉಲ್ಲೇಖ, ಪ್ರಾಣಿಯ ದೇಹದ ಪ್ರತಿಯೊಂದು ಅಂಗವೂ – ಕೂದಲಿನಿಂದ ಕೊಂಬಿನ ತನಕ – ಒಡಲೊಳಗಿನ ಸಪ್ತಧಾತುಗಳೂ ಕೂಡ ಎಲ್ಲವೂ ಇಲ್ಲಿ ಎಲ್ಲಿಯೂ ನಷ್ಟವಾಗದೆ ಬಳಕೆಯಾಗುತ್ತದೆ ಎನ್ನುವುದು ಈ ಉಲ್ಲೇಖದ ಅರ್ಥ. ಇದು Zero waste Technology. ಸಾವಿರಾರು ಮಂದಿ ಈ ಪ್ರಸಿದ್ಧ ವಧಾಗೃಹವನ್ನು ನೋಡಲೆಂದೇ ಬರುವರು. ನೋಡಿ ಬೆರಗಾಗುವರು. ಇಲ್ಲಿರುವ ಸಂದರ್ಶಕರ ಪುಸ್ತಕದಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ನಮೂದಿಸುವರು. ಸಾಮಾನ್ಯವಾಗಿ ಈ ಪ್ರತಿಕ್ರಿಯೆಗಳು ಬೆರಗಿನ; ಪ್ರಶಂಸೆಯ ಉದ್ಗಾರಗಳು! ಒಂದು ದಿನ ವಿಲಕ್ಷಣವಾದ ಪ್ರತಿಕ್ರಿಯೆಯೊಂದು



ಪುಸ್ತಕದಲ್ಲಿ ಕಾಣಿಸಿಕೊಂಡು ಅಧಿಕಾರಿಗಳು ಏನಿದರ ಅರ್ಥ ಎಂದು ತಬ್ಬಿಬ್ಬುಗೊಂಡರಂತೆ. ಆ ಪ್ರತಿಕ್ರಿಯೆ ಹೀಗಿತ್ತು: "You claim everything is utilised here. OK. What about the last-cry?"

What about the last-cry? ಈ ಮಾತು ಒಂದು ಆರ್ತನಾದದಂತೆ ಆಳವಾಗಿ ಇರಿಯುತ್ತ ಕಾಡುತ್ತಿದೆ.

ಎಲ್ಲ ಸ್ವಚ್ಛವಾಗಿದೆ. ಅತಿಸ್ವಚ್ಛ. ವೈಜ್ಞಾನಿಕ ಸ್ವಚ್ಛತೆ. ವ್ಯರ್ಥ ನಡೆದ ಕುರುಹೇ ಇಲ್ಲ. ಆದರೂ ಅಲ್ಲಿ ಕೇಳಬಲ್ಲವರಿಗೆ ಆರ್ತನಾದವೊಂದು ಕೇಳಿಸಬಹುದು. ನಿಸರ್ಗ, ಆರ್ತನಾದವನ್ನು – ಆರ್ತನಾದವನ್ನಾದರೂ – ಉಳಿಸುತ್ತದೆ. ಎಲ್ಲವನ್ನೂ ನಿಃಶೇಷ ಮಾಡುವುದನ್ನು ನಿಸರ್ಗ ಒಪ್ಪದು.

ಒಂದು ಆರ್ತನಾದವಾದರೂ ಉಳಿದರೆ ಸಾಕು. ಅದು ಕೇಳಬಲ್ಲವರಿಗೆ ಕೇಳಿಸಿಯೇ ಕೇಳಿಸುತ್ತದೆ. ಅದರಿಂದ ಒಂದು ಮಹಾಕಾವ್ಯವೇ ಮೂಡಿಬರಬಹುದು. ಅದರಿಂದ ಜನಾಂಗದ ಸಂವೇದನೆಯೇ ಬದಲಾಗಬಹುದು. ಕ್ರೌಂಚದ ಅಳಲಿನಿಂದ 'ರಾಮಾಯಣ' ಮೂಡಿ ಬಂದಂತೆ!

ಎರಡನೇ ಮಹಾಯುದ್ಧದಲ್ಲಿ ಜಪಾನಿನ ಹಿರೋಶಿಮಾದ ಮೇಲೆ ಬಹಳ ಎತ್ತರದಿಂದ ಅಮೇರಿಕಾ ಅಣುಬಾಂಬ್ ಎಸೆಯಿತಲ್ಲ – ಆಹಾ ಮನುಷ್ಯ ಆಗಸದ ಎತ್ತರಕ್ಕೇರಿದುದರ ಫಲವೇ! – ಆ ಜಾಗದುದ್ದಕ್ಕೆ ಜೀವದ ಕುರುಹೆಲ್ಲವೂ ಸುಟ್ಟು ಕರಕಲಾಯಿತಲ್ಲ, ಕೆಲಕಾಲ ಕಳೆದು ವಿಜ್ಞಾನಿಗಳ ತಂಡವೊಂದು ಜೀವದ ಕುರುಹೇನಾದರೂ ಈ ಮಾರಕ ವಿಕಿರಣಗಳ ನಡುವೆ ಉಳಿದಿರಬಹುದೆ ಎಂದು ಶೋಧಿಸುತ್ತಿದ್ದರು. ಏನೂ ಉಳಿದಿರಲಿಲ್ಲ. ಶೋಧಿಸುತ್ತಿದ್ದಂತೆ ಕೊನೆಗೂ ಜೀವದ ಕುರುಹೊಂದು ಈ ನಿರ್ಜೀವ ನರಕದ ನಡುವೆ ಕಾಣಸಿಕ್ಕಿತು. ಅದೆಂದರೆ ಬಿದಿರಿನ ಸಣ್ಣದೊಂದು ಮೊಳಕೆ! ಅದನ್ನು ನೋಡುತ್ತಿದ್ದಂತೆ ಪುಳಕಿತನಾದ ವಿಜ್ಞಾನಿ ಅದರತ್ತ ಕೈಮಾಡಿ ಇತರರಿಗೆ ಹೇಳಿದ್ದು: "At last - a bamboo shoot".

ಬಿದಿರು; ಹುಟ್ಟು ಸಾವಿನಲ್ಲಿ ನಮ್ಮ ತೊಟ್ಟಿಲಲ್ಲವೆ!

ನಿಃಶೇಷ ಮಾಡುವುದನ್ನು ನಿಸರ್ಗ ಒಪ್ಪದು.

What about the last cry? ಎಂಬ ಮಾತು ತಂತ್ರಜ್ಞಾನಕ್ಕೆ ಎಂದೂ ಹೊಳೆಯದು. ಆದುದರಿಂದಲೇ ಈ ಮಾತು ಅದಕ್ಕೆ ಅರ್ಥವೂ ಆಗದು. ಆದುದರಿಂದಲೇ ತಂತ್ರಜ್ಞಾನವು ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳಲಾರದು. ಉದ್ಧಾರ ಎಂದರೆ ತನ್ನನ್ನು ತಾನು ಮೀರುವ ಕಲ್ಪನೆ. ಈಗಿನ ಕಲ್ಪನೆಗಿಂತ ಭಿನ್ನವಾದ ಬದಲಾದ ಕಲ್ಪನೆ. ಗುಣಾತ್ಮಕವಾಗಿ ಬದಲಾಗುವ ಕಲ್ಪನೆಯೇ ಇಲ್ಲದೆ ಇದ್ದುದು ತನಗೆ ಗೊತ್ತಿಲ್ಲದೆ ತನ್ನ ನಾಶವನ್ನು ತಾನೇ ಮಾಡಿಕೊಳ್ಳುವತ್ತ ನಡೆಯುತ್ತದಷ್ಟೆ

ನಿಜ. Alternate technology, Intermediate Technology – ಎಂಬ ನುಡಿಗಟ್ಟುಗಳನ್ನು ಕೇಳಿದ್ದೇವೆ. ಇದು ತಂತ್ರಜ್ಞಾನವು ಬದಲಾಗುತ್ತಿರುವ ಕಾಣ್ಕೆಯಲ್ಲವೆ ಎನ್ನುವ ಪ್ರಶ್ನೆ ಉಂಟಾಗುತ್ತದೆ. ಬದಲಾಗುತ್ತಿರುವ ಕಾಣ್ಕೆಯೂ ಹೌದು. ಆದರೆ ಈ ಕಾಣ್ಕೆಗಳನ್ನು ಕಂಡವರು, E.F. Schumacher. ಇಂಗ್ಲೆಂಡ್ ಸರಕಾರದ ಪರವಾಗಿ Schumacher ಬರ್ಮಾದಲ್ಲಿ ಸಲಹೆಗಾರರಾಗಿದ್ದರು. ಅಲ್ಲಿ ತನ್ನ ಬಿಡುವಿನಲ್ಲಿ ಬುದ್ಧ ಧರ್ಮವನ್ನು ಅಧ್ಯಯನ ಮಾಡಿದರು. ಬುದ್ಧನ ಮಧ್ಯಮ ಮಾರ್ಗ ಎಂಬ ಪರಿಕಲ್ಪನೆ Schumacher ಅವರನ್ನು ಆವರಿಸಿತು. ಅದುವರೆಗೆ ಈ ದಿಕ್ಕಿನಲ್ಲಿ Schumacher ಚಿಂತಿಸಿರಲಿಲ್ಲ. ತಂತ್ರಜ್ಞಾನ; ಈಗಿರುವಂತೆಯೇ ತಾರಕ ಎಂದು ನಂಬಿದ್ದರು. ಯಾವಾಗ ಬುದ್ಧನನ್ನು ಓದಿದರೋ ಆಗ 'ಮಧ್ಯಮ ಮಾರ್ಗ' ಎಂಬ ಹೊಳಹು Schumacher ಪ್ರಜ್ಞೆಯಲ್ಲಿ ತನ್ನ ಒಳನೋಟವನ್ನು ಚೆಲ್ಲಿ, Intermediate Technology ಎಂಬ ಈಗ ಪ್ರಸಿದ್ಧವಾದ ನವೀನ ಪರಿಕಲ್ಪನೆಯಾಗಿ ಅರಳಿತು. ಇದು ನಿಜವಾಗಿ ಮಾಧ್ಯಮಿಕ ತಂತ್ರಜ್ಞಾನ! ಮೂರನೆಯ ಜಗತ್ತಿನ ದೇಶಗಳು ಎಂದು ಕರೆಯಲ್ಪಡುವ ದೇಶಗಳ ಪರಿಸ್ಥಿತಿಗೆ ಹೊಂದುವಂಥ ತಂತ್ರಜ್ಞಾನ ಯಾವುದು ಎಂಬ ಪ್ರಶ್ನೆಗೆ – ಈ ಪ್ರಶ್ನೆ ಹುಟ್ಟುವುದೇ ಮಾಧ್ಯಮಿಕ ಪ್ರಜ್ಞೆಯ ಫಲ – Schumacher ಕಂಡುಕೊಂಡ ಉತ್ತರ. ಈ ಉತ್ತರದ ಹಿಂದೆ ಬುದ್ಧನ ಧ್ಯಾನ ಇದೆ!

ಅಂದರೆ 'ತಂತ್ರಜ್ಞಾನ' ತನ್ನನ್ನು ತಾನೇ ಬದಲಿಸಿಕೊಳ್ಳಲಾರದು. ಮೀರಲಾರದು. ಬದಲಿಸಿಕೊಳ್ಳಬೇಕಾದರೆ, ಅದಕ್ಕೆ ಇನ್ನೊಂದು ನಿಟ್ಟಿನಲ್ಲಿ ಇನ್ನೊಂದೇ ದಿಕ್ಕಿನಲ್ಲಿ, ತಂತ್ರಜ್ಞಾನದ ಈಗಿನ ನಡಿಗೆಯನ್ನು ತೀವ್ರವಾಗಿ ಸಂದೇಹಿಸುವ, ಬೇಕಾದರೆ ನಿರಾಕರಿಸುವ ಧೈರ್ಯವನ್ನೂ ತೋರಬಲ್ಲ, ಚಿಂತನೆಗಳ ಸಂಪರ್ಕ ಬೇಕು. ಅಂಥ ಚಿಂತನೆಗಳು ಅಂಥ ಬದುಕಿನಿಂದಲೇ ಹುಟ್ಟಿಕೊಳ್ಳಬಲ್ಲವಷ್ಟೆ. ಬದುಕಿನ ಆಳವಾದ ವಿಮರ್ಶೆಯಿಂದ ಮಾತ್ರ ಹುಟ್ಟಿಕೊಳ್ಳಬಲ್ಲವಷ್ಟೆ. ನಾಗರಿಕತೆಯ ಸದ್ಯದ ನಡಿಗೆಯಿಂದ ರೋಮಾಂಚಿತರಾದ ಜನವರ್ಗದಿಂದ ಅಂಥ ಚಿಂತನೆಗಳು ಎಂದೂ ಬರಲಾರವು.



ಎಲ್ಲವನ್ನೂ ಬಳಸಿಕೊಳ್ಳಬಹುದು. ಬಳಸಿಕೊಳ್ಳಬೇಕು; ಈ ಧೋರಣೆಯಿಂದಲೇ ತಂತ್ರಜ್ಞಾನಕ್ಕೆ ಇನ್ನಷ್ಟು ವೇಗ ಸಿದ್ಧಿಸೋದು; ಇದೇ ಪ್ರಗತಿ; ಇದೇ ಅಭಿವೃದ್ಧಿ; ಇದೇ ಆಧುನಿಕ ನಾಗರಿಕತೆಯ ಅರ್ಥ ಎನ್ನುವ ತಂತ್ರಜ್ಞಾನವು ಮನುಷ್ಯನಿಗೆ ನಿಜಕ್ಕೂ ಎಷ್ಟು ಬೇಕು ಎಂಬ ಅನುಭವ ಸಂಬಂಧಿಯಾದ ಪ್ರಶ್ನೆಯನ್ನು ಎಂದಾದರೂ ಕೇಳಿಕೊಳ್ಳುವುದು ಸಾಧ್ಯವೆ? ಅನುಭವ ಸಂಬಂಧಿಯಾದ ಪ್ರಶ್ನೆಯನ್ನು ಕೇಳಿಕೊಳ್ಳುವುದಕ್ಕೆ ವಿಜ್ಞಾನ ತಂತ್ರಜ್ಞಾನಗಳಿಗೆ ಬಿಡುವೇ ಇಲ್ಲ. ತನ್ನ ಅನುಭವ ನೋಡುವಾಗ ಸಹಜವಾಗಿ ನಡಿಗೆ ಒಂದು ಹೆಜ್ಜೆ ಹಿಂದೆ ಬರುತ್ತದೆ. ಅಥವಾ ನಿಂತಲ್ಲೆ ನಿಂತು ಸ್ತಬ್ಧವಾಗಿ ಬಿಡುತ್ತದೆ. ಹೆಜ್ಜೆಯನ್ನು ಮುಂದೆಯಂತೂ ಇಡಲಾಗುವುದಿಲ್ಲ. One step is enough for me ಎಂಬ ನುಡಿ ಹುಟ್ಟಿಕೊಂಡದ್ದು ಇಂಥ ಅನುಭವದಿಂದಲೇ. ಪ್ರಸಿದ್ಧ ಜೀವ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಹೀಗೆ ಹೇಳಿದ್ದ: "Why is thought, being a secretion of the brain, more wonderful than gravity, a property of matter?"(ಮೆದುಳಿನ ಒಂದು ಸ್ರಾವ ಮಾತ್ರವಾಗಿರುವ ಆಲೋಚನೆ ಎಂಬುದು ಗುರುತ್ವ ಶಕ್ತಿಗಿಂತ ಹೆಚ್ಚು ಅದ್ಭುತವೆನಿಸುವುದೇತಕ್ಕೆ?'. ತನ್ನಲ್ಲೇ ತಾನು ಚಕಿತನಾಗಿ, ಹಾಗಾದರೆ ಹೊರಗಿನ ವಾಸ್ತವಿಕತೆಗಿಂತ ತನ್ನೊಳಗಿನ ಕಂಪನಗಳೇ ಮಹತ್ತ್ವಪೂರ್ಣವಾದುದೇನು? ಎಂಬ ಪ್ರಶ್ನೆಯನ್ನೂ ಕೇಳಿಕೊಂಡಂತಿದೆ. ಇದು ಬೌದ್ಧರಲ್ಲಿ ವಿಜ್ಞಾನವಾದಿಗಳ ಮಾತಿನಂತಿದೆ. ವಿಜ್ಞಾನವಾದಿಗಳ ಪ್ರಕಾರ ಹೊರಗೆ ಕಾಣಿಸುವ ವಸ್ತು ಪ್ರಪಂಚ ಹೊರಗಿಲ್ಲ. ಅದು ನಮ್ಮೊಳಗೇ ಇದೆ. ಅಂದರೆ ಈ ಎಲ್ಲವೂ ಮನಸ್ಸೇ ಆಗಿದೆ. ಈ ವಾದಕ್ಕೆ ವಿಜ್ಞಾನವಾದ ಅಥವಾ ಆತ್ಮಖ್ಯಾತಿ ಎಂದು ಹೆಸರು. ಈ ಮಾತಿರಲಿ. ನಿಜಕ್ಕಾದರೆ ಡಾರ್ವಿನ್ ಮಂಡಿಸಿದ ವಿಕಾಸವಾದ, ಸ್ಥಾಪಿತ ಧರ್ಮಗಳ ಹೇಳಿಕೆಗಳಿಗೆ ವಿರುದ್ಧವಿದ್ದರೂ ಅದು ಅಖಿಲ ಜೀವಜಾತದೊಡನೆ ಮನುಷ್ಯ ಜೀವಿಗೆ ಆಂತರಿಕ ಸಂಬಂಧವಿದೆ ಎನ್ನುವ 'ಅನುಭಾವ'ಕ್ಕೆ ಹತ್ತಿರವೂ ಇದೆ!

ಅನುಭವದ ಮಾತಿಗೆ ಬಂದರೆ – ಇನ್ನೊಂದು ಸತ್ಯ ಎದುರಾಗುತ್ತದೆ. ಅದೆಂದರೆ "Less is more" ಎಂಬ ಸತ್ಯ! ಪರೀಕ್ಷೆಗೆ ಒಂದು ಹನಿ ರಕ್ತ ಸಾಕಲ್ಲವೆ? ವಿಶಾಲವಾದ ಆಲದ ಮರ ಒಂದು ಸಣ್ಣ ಬೀಜದಲ್ಲಿ ಅಡಗಿತ್ತಲ್ಲವೆ? ನಮ್ಮ ಕಣ್ಣ ಸಣ್ಣ ಕನೀನಿಕೆ ವಿಶ್ವವನ್ನೇ ನೋಡಬಲ್ಲದಲ್ಲವೆ? ಮನಸ್ಸು ಸೆಳೆಯುವುದಕ್ಕೆ ಒಂದು ಕಿರುನಗು ಸಾಕಲ್ಲವೆ? ಮಾತಿಗೆ ಬಂದರೆ – ಕಿರಿದರಲ್ಲಿ ಪಿರಿದರ್ಥವೇ ಮುಖ್ಯವಲ್ಲವೆ? ಅಥವಾ ಶಬ್ದವೊಂದು ಅರ್ಥ ಪ್ರಪಂಚವನ್ನೇ ಸೃಷ್ಟಿಸಬಲ್ಲುದಲ್ಲವೆ? ನಾವು ಉತ್ತೇಜಿತರಾಗುವುದಕ್ಕೆ ವಸ್ತುವೇ ಬೇಡ, ಅದರ ನೆನಪೇ ಸಾಕಲ್ಲವೆ? ಅಣು – ರೇಣು – ತೃಣ – ಕಾಷ್ಠ ಎನ್ನುವ ಪದಗಳು ಅತಿ ಸಣ್ಣದನ್ನೇ ಪ್ರತೀಕವಾಗಿ ಸೂಚಿಸುತ್ತದಲ್ಲವೆ? ಬುದ್ಧನಾದರೂ 'ಕ್ಷಣಿಕ' ಎಂದು ಹೇಳಿದುದಲ್ಲವೆ? – ಇನ್ನೂ ಹೆಚ್ಚು ಹೆಚ್ಚು ಹೇಳುತ್ತ ಹೋದರೆ ನಾನು ಹೇಳುತ್ತಿರೋದಕ್ಕೆ ನಾನೇ ವಿರೋಧಿಯಾದಂತಾಗುತ್ತದೆ!

– Small is beautiful ಎಂದಂತೆಯೇ ಈ "Less is More" ಎಂಬ ಸತ್ಯ!

ನಿಸರ್ಗ ನಿಃಶೇಷ ಮಾಡುವುದನ್ನು ಒಪ್ಪದು. ನಿಸರ್ಗ ಅತಿ ಬಳಕೆಯನ್ನೂ ಒಪ್ಪದು.

ಇದು ಅನುಭವದ ಸತ್ಯ. ಈ ಸತ್ಯವನ್ನು ಆಳವಾಗಿ ಗ್ರಹಿಸಿದರೆ ಇದು ನಮ್ಮನ್ನು ಕಲೆಯ ತತ್ತ್ವ, ಪ್ರತೀಕೋಪಾಸನೆಯ ತತ್ತ್ವ, ಏಕಾಗ್ರತೆಯ ತತ್ತ್ವಗಳ ವಿಶಾಲ ಆಯಾಮದತ್ತ ನಿರಾಯಾಸವಾಗಿ ಒಯ್ಯುತ್ತದೆ. ಸದ್ಯ ಆ ಚರ್ಚೆಗಳನ್ನು ಬಿಟ್ಟುಕೊಟ್ಟು, ಮಾರುಕಟ್ಟೆ ಕೇಂದ್ರಿತವಾಗಿ ಕಣ್ಣುನೆಟ್ಟು ವಸ್ತುಗಳನ್ನು ಉತ್ಪಾದಿಸುತ್ತ ರಾಶಿ ಹಾಕುವುದೇ ಉದ್ಯೋಗವಾಗಿರುವ ತಂತ್ರಜ್ಞಾನಕ್ಕೆ ಈ "Less is more" ಎಂಬ ಉತ್ತಾರಕ ಅನುಭವ ಎಂದಾದರೂ ಉಂಟಾಗುವುದು ಸಾಧ್ಯವೆ ಎಂದು

ಕೇಳುತ್ತ ನಿಟ್ಟುಸಿರು ಬಿಡಬೇಕಷ್ಟೆ.

ನಾನು ಫುಕೋಕಾ (Fukuoka) ಬಗ್ಗೆ ಸ್ವಲ್ಪ ಹೇಳಲೇಬೇಕು. ಏಕೆಂದರೆ ಈ "Less is more" ಪರಿಕಲ್ಪನೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ಒಯ್ದ ಋಷಿ ಫುಕೋಕಾ. Less ಎಂದಾಗ Less ಅನ್ನು ಎಲ್ಲಿಯವರೆಗೆ ಒಯ್ಯಬಹುದು? ಫುಕೋಕಾ ಪ್ರಕಾರ Zeroದ ತನಕ. ಬುದ್ಧನ 'ಶೂನ್ಯ'ದ ತನಕ. ತಾನು ಕೇವಲ 'ನಿಮಿತ್ತ' ಎಂದು ಅರಿಯುವ ತನಕ. ಅಥವಾ ಅದಕ್ಕಿಂತಲೂ ಮುಂದೆ ಹೋಗಿ "ನೇತಿ – ನೇತಿ" ಎನ್ನುವ ತನಕ! ಫುಕೋಕಾ ಕಂಡುಕೊಂಡ ನೈಸರ್ಗಿಕ ಕೃಷಿ ಪದ್ಧತಿಗೆ 'Zero Cultivation' ಎಂದೇ ಹೆಸರು. ತಾನು ಕಲಿತ ಆಧುನಿಕ ವಿಜ್ಞಾನವನ್ನೆಲ್ಲ ಮರೆತು, ನಿಸರ್ಗದ ನಡೆಯ ಸೂಕ್ಷ್ಮವನ್ನು ಒಂದು ಕ್ರಿಮಿಕೀಟದಂತೆ ಅರ್ಥಮಾಡಿಕೊಂಡು, ಗುಣ–ಗಾತ್ರಗಳಲ್ಲಿ ಅತ್ಯುತ್ತಮವಾದ ಬೆಳೆಯನ್ನು ಪಡೆದವನೀತ. ಫುಕೋಕಾ ಕೃಷಿಗೆ ಬಂಡವಾಳವೇ ಬೇಡ. ದೇಹಾರೋಗ್ಯದಾಯಕವಾದ ಅಲ್ಪಶ್ರಮವಷ್ಟೇ ಸಾಕು. ರಾಸಾಯನಿಕಗಳು, ಕ್ರಿಮಿನಾಶಕಗಳಿಂದ ಭೂಮಿಯನ್ನು ಮುಕ್ತಮಾಡಿ, ಭೂಮಿಗೆ ಶಾಂತಿಯನ್ನು ತಂದ, ಲೋಕವೇ ಗೌರವಿಸುವ ಫುಕೋಕಾಗೆ ಶಾಂತಿ ನೋಬೆಲ್ ಸಿಗಬೇಕಿತ್ತೆನ್ನುವವರಿದ್ದಾರೆ. ಆ ಮಾತಿರಲಿ, ಆದರೆ, ರಾಸಾಯನಿಕ; ಕ್ರಿಮಿನಾಶಕಗಳನ್ನುತ್ಪಾದಿಸುವ ಕಂಪೆನಿಗಳು ಹೇಳಿಕೊಂಡದ್ದು ಮಾತ್ರ ಹೀಗೆ: 'Fukuoka is our enemy No. 1'. ಈ ಬಗ್ಗೆ ಇನ್ನು ಹೆಚ್ಚು ಹೇಳಬೇಕಾದ್ದೇ ಇಲ್ಲ. "Less is more" ಅಲ್ಲವೆ!

ಉತ್ಪತ್ತಿಯಾದ ಕಸವನ್ನು ಹೇಗೆ ವಿಲೇವಾರಿ ಮಾಡಬೇಕೆಂದು ತಿಳಿಯದೆ ಗೊಂದಲಗೊಂಡ ನಾಗರಿಕತೆ ಇದು. ಅಥವಾ ಈ ನಾಗರಿಕತೆ ಉತ್ಪತ್ತಿ ಮಾಡುವುದೇ ಒಂದು ಅರ್ಥದಲ್ಲಿ ಕಸ ಇರಬಹುದು. ಕಸವೆಂದರೆ ಅನಗತ್ಯ ವಸ್ತುವೆಂದಲ್ಲವೆ? ಅಪಾಯಕಾರೀ ರಾಸಾಯನಿಕ ತ್ಯಾಜ್ಯಗಳನ್ನು ಬಡದೇಶಗಳಿಗೆ ಸಾಗಹಾಕಿ ನಾವು ವೈಜ್ಞಾನಿಕರೆಂದುಕೊಳ್ಳುವ ನಾಗರಿಕತೆ ಇದು.

ಏಕೆ ಈ ಪ್ರವೃತ್ತಿ ಹಟದಿಂದಲೆಂಬಂತೆ ಮುಂದುವರಿಯುತ್ತಿದೆ?

ಒಂದೇ ಉತ್ತರ: Greed. ಲಾಭಕೋರತನ. ಶ್ರೀಮಂತಿಕೆಯ ಹಪಹಪಿ. ಎಂದೂ ತಣಿಯದ ತೃಷ್ಣೆ. ಈ ನಾಗರಿಕತೆಯ ಲಕ್ಷಣ – "Less is more" ಅಲ್ಲ. 'More is Less' ಅಷ್ಟೆ.

ದೊಡ್ಡ ಗಂಡಾಂತರವೆಂದರೆ ಮಾಲಿನ್ಯದ್ದು. ಕುಡಿಯುವ ನೀರು ಮಲಿನ; ವಿಷಾಕ್ತ. ಉಸಿರಾಡುವ ಗಾಳಿ ಮಲಿನ, ವಿಷಾಕ್ತ. ಈಚೆಗೆ ಕೇಳಿದ ಒಂದು ವರದಿ ಇದು – ಬೆಂಗಳೂರಿನ ಪಕ್ಕದ ರಾಮನಗರ ಜಿಲ್ಲೆಯಲ್ಲಿ ಬಟ್ಟೆಗೆ ಬಣ್ಣ ಹಾಕುವ ನೂರಾರು ಸಣ್ಣ ಕಾರ್ಖಾನೆಗಳು ಬಂದಿವೆ. ವಿಷಾಕ್ತ ತ್ಯಾಜ್ಯವನ್ನು ಹೊಳೆ ನೀರಿಗೆ ಬಿಡುತ್ತಿವೆ. ಪರಿಣಾಮ – ಹರಿವ ನೀರು ಮಾತ್ರವಲ್ಲ; ಅಂತರ್ಜಲವೂ ಮಲಿನವಾಗಿದೆ. ದನ–ಕರುಗಳು ಕುಡಿಯುವುದೂ ಅಪಾಯವೇ ಎಂಬ ಪರಿಸ್ಥಿತಿ. ಈ ಕಂಪೆನಿಗಳು ಪಕ್ಕದ ತಮಿಳುನಾಡಿನಿಂದ ಓಡಿಸಲ್ಪಟ್ಟು ಕರ್ನಾಟಕಕ್ಕೆ ಬಂದುವುಗಳಂತೆ!

ಏನಿದು? ಇಲ್ಲಿ ಆಡಳಿತವೇ ಇಲ್ಲವೆ? ಕ್ಷುಲ್ಲಕ ಅರ್ಥಶೂನ್ಯ ವಿವಾದಗಳಲ್ಲಿ ಮುಳುಗಿದ್ದೇವಲ್ಲ; ನಮಗೇನಾಗಿದೆ? ಬುದ್ಧನ ಮಾತೊಂದು – ಬಹಳ ಹಿಂದಿನ ಮಾತು – ನೆನಪಾಗುತ್ತೆ. : 'ಮನೆಗೆ ಬೆಂಕಿ ಬಿದ್ದಿದೆ ಎಂದು ಬೊಬ್ಬಿಟ್ಟು ಹೇಳಿದರೂ ಅಲುಗಾಡದ ಮಂದಿಗೆ ನಾನು ಬೋಧಿಸುವುದೇನನ್ನು?' ಅಂದರೆ ಇದು ಎಲ್ಲ ಕಾಲದ ಪರಿಸ್ಥಿತಿ!

ಅದಿರಲಿ; ಲಾಭೈಕ ದೃಷ್ಟಿಕೋನದ ಈ ನಾಗರಿಕತೆಯ ನಡೆಯನ್ನು ಅರ್ಥಪೂರ್ಣವಾಗಿ ವಿಮರ್ಶಿಸುವ ಎಲ್ಲ ಅವಕಾಶಗಳೂ ಕರ್ತವ್ಯಗಳೂ ಇದ್ದದ್ದು ನಮ್ಮಲ್ಲಿರುವ ಧಾರ್ಮಿಕ ಪ್ರಜ್ಞೆಗೆ. ಈ ಧಾರ್ಮಿಕ ಪ್ರಜ್ಞೆಯ ಪಾಡೇನು?

ನಾನೋರ್ವ ಹಿಂದೂ. ಎಲ್ಲೆಲ್ಲ ಈ ವಿಷಯವನ್ನು ನಮೂದಿಸಬೇಕಾದ ಸಂದರ್ಭ ಬಂದಿದೆಯೋ ಅಲ್ಲೆಲ್ಲ ನಾನು ಹಿಂದೂ ಎಂದು – ಯಾವ ಗರ್ವವೂ ಇಲ್ಲದೆ ನಮೂದಿಸಿದ್ದೇನೆ. ಹೀಗೆ ಹೇಳುವುದೇ ಒಂದು ಗರ್ವದ ಮಾತಾಗಬಹುದಾದ್ದರಿಂದ ಕ್ಷಮೆ ಇರಲಿ. ಇದು ವ್ಯಾವಹಾರಿಕ ಸತ್ಯ. ಅಂದರೆ ಈ ವ್ಯವಹಾರ ಲೋಕವು ಮಾನ್ಯ ಮಾಡುವ ಸತ್ಯ. ಹಾಗಾದರೆ ಈ ಸತ್ಯಕ್ಕಿಂತ ಬೇರೆಯಾದ ಪಾರಮಾರ್ಥಿಕ ಎನ್ನಬಹುದಾದ 'ಸತ್ಯ' ಒಂದು ಬೇರೆ ಇದೆಯೇ? ಇದೆ ಎನ್ನುತ್ತಾರೆ ಉಪನಿಷತ್ತಿನ ದಾರ್ಶನಿಕರು, ಬುದ್ಧ; ಶಂಕರ, ವಚನಕಾರರು; ಸೂಫಿಗಳು; ಕಬೀರಾದಿ ಅನುಭಾವಿಗಳು, ಇವರೆಲ್ಲ. ಅಂದರೆ ವೈದಿಕ–ಅವೈದಿಕ, ಹಿಂದೂ–ಅಹಿಂದೂ ಎಂಬ ಬೇಧಗಳೇ ಇಲ್ಲದೆ ಈ ಎರಡು ಸತ್ಯಗಳನ್ನು ಅಥವಾ ಸತ್ಯದ ಈ ಎರಡು ಮುಖಗಳನ್ನು ಈ ಜ್ಞಾನಿಗಳೆಲ್ಲ ಒಪ್ಪಿದ್ದಾರೆ. ಪಾರಮಾರ್ಥಿಕ ಸತ್ಯವನ್ನು ಮಾನ್ಯ ಮಾಡುವಲ್ಲಿ ಈ ವ್ಯಾವಹಾರಿಕವಾದ ಭೇದಗಳೆಲ್ಲ ಅಳಿಯುವವು ಎಂದೂ ಇವರೆಲ್ಲ ಒಪ್ಪಿದಂತೆಯೂ ಆಯಿತು.



ಸಮಾಧಿ ಸ್ಥಿತಿಯಲ್ಲಿ ರಾಮಕೃಷ್ಣ

ವ್ಯವಹಾರದ ಸತ್ಯವನ್ನು ನಾವು ಇಲ್ಲಿ ಈ ಲೋಕದಲ್ಲಿ ಕಲಿತದ್ದು. ಅಥವಾ ಲೋಕ ನಮಗೆ ಕಲಿಸಿದ್ದು. ಈ ಕಲಿಕೆ ಅನಿವಾರ್ಯವೂ ಆಗಿ ಇದಕ್ಕೊಂದು ಪರಂಪರೆ ಮತ್ತು ಇತಿಹಾಸ ಕೂಡ ಇರುವುದರಿಂದ ತಾನು ಈ ಪರಂಪರೆ ಇತಿಹಾಸಗಳಿಗೆ ಸೇರಿದವನು ಎಂಬ ಭಾವದಿಂದ ಒಂದು ಅಧಿಕೃತತೆಯ ಗುಣ ಕೂಡ ಕಲಿಕೆಗೆ ಒದಗಿ ಬರುತ್ತದೆ. ಮನುಷ್ಯ ಜೀವ ಅನುಕರಣಶೀಲ ಎಂದು ನೆನೆದುಕೊಂಡೆವಾದರೆ ಪರಂಪರೆಯಾಗಿ ನಾವು ಈ ವ್ಯಾವಹಾರಿಕ ಸತ್ಯವನ್ನು ಅನುಕರಣ ಮಾಡುತ್ತ ಮಾಡುತ್ತ ನಮ್ಮಲ್ಲೇ ಗಟ್ಟಿಗೊಳಿಸುತ್ತ ಬಂದಿದ್ದೇವೆ. ನಮ್ಮೆಲ್ಲರ ಮನಸ್ಸನ್ನು ನಾನಾ ಬಗೆಯಾಗಿ ಆಳುತ್ತಿರುವ ಜಾತೀಯ ಭಾವನೆ ಮತೀಯ ಭಾವನೆ, ಧಾರ್ಮಿಕ ಭಾವನೆ, ಬಿಳಿಯ ಕರಿಯ ಭಾವನೆ, ಪೂರ್ವ – ಪಶ್ಚಿಮ ಭಾವನೆ, ಈ ಭಾವನೆಗಳಿಗೆ ಸಂಬಂಧಿಸಿದ ಉಚ್ಚ – ನೀಚ ಕಲ್ಪನೆ, ಸರಿ ತಪ್ಪುಗಳ ಕಲ್ಪನೆ, ನಾಕ – ನರಕಗಳ ಕಲ್ಪನೆ, ಮೌಲ್ಯ–ಅಪಮೌಲ್ಯಗಳ ಕಲ್ಪನೆ, ಈ ಮೌಲ್ಯಗಳಿಗಾಗಿ ಹೋರಾಡಬೇಕೆಂಬ ಕಲ್ಪನೆ, ಬಲಿದಾನಕ್ಕೂ ಹಿಂಜರಿಯಬಾರದೆಂಬ ಕಲ್ಪನೆ ಇತ್ಯಾದಿ ಇತ್ಯಾದಿ ಎಲ್ಲ ಮನೋವೃತ್ತಿಗಳು ಕೂಡ ನಾವು ಇಲ್ಲಿ ಕಲಿತದ್ದು, ಲೋಕವನ್ನು ಅನುಕರಣೆ ಮಾಡಿ ಪಡೆದದ್ದು. ಇದೇ ನಮ್ಮ ಅಂತರಂಗ ಸಾಮಗ್ರಿ. ಇದೇ ನಮ್ಮ ಸಾಂಸ್ಕೃತಿಕ ಸಾಮಗ್ರಿ. ಇದೇ ನಮ್ಮ ಸದ್ಯದ ವ್ಯಕ್ತಿತ್ವ. ಇದೇ ನಮ್ಮ ಸದ್ಯದ ಪಾಡು. ಇದೇ ವ್ಯಾವಹಾರಿಕ ಸತ್ಯ. ಪ್ರಚಂಡ ಸತ್ಯ; ಬಲಿಷ್ಠ ಸತ್ಯ.

ಇದಕ್ಕಿಂತ ಭಿನ್ನವಾಗಿರುವ ಪಾರಮಾರ್ಥಿಕ ಸತ್ಯವೆಂದರೆ ಯಾವುದದು?

ನೋಡಿ; ನಮ್ಮ ಶೈಶವದಲ್ಲಿ ನಾವು ಯಾವ ಸನ್ನಿವೇಶದಲ್ಲಿ ಬೆಳೆದೆವೋ, ಆ ಸನ್ನಿವೇಶದ ಗುಣದೋಷಗಳೆಲ್ಲ, ಸಂಸ್ಕೃತಿ–ವಿಕೃತಿಗಳೆಲ್ಲ ನಮ್ಮಲ್ಲಿ ಪಡಿಮೂಡುವವು; ಅಲ್ಲವೆ? ಯಾವ ಸನ್ನಿವೇಶವೋ ಅದರಂತೆ ನಮ್ಮ ವ್ಯಕ್ತಿತ್ವ. ಅಂದರೆ ಮಗುವಿನ ಮನಸು ತನ್ನ ಮುಗ್ಧತೆಯಲ್ಲಿ ಪಡಿಮೂಡಿಸಿಕೊಂಡ ಚಿತ್ರವಿದು. ಸ್ವ–ಪ್ರತಿಬಿಂಬವಿದು. ಎಲ್ಲರ ಪಾಡೂ ಹೀಗೇ ಆದುದರಿಂದ, ಅಂದರೆ ನಮಗೆ ಸನ್ನಿವೇಶವನ್ನು ಒದಗಿಸಿದವರ ಪಾಡೂ ಹೀಗೇ ಆದುದರಿಂದ ಇದೊಂದು ಪ್ರತಿಬಿಂಬಗಳ ಸರಣಿ ಅಥವಾ ಗಾಜಿನ ಮನೆ!

ಅಂದರೆ ಮುಗ್ಧತೆಯು ಏನನ್ನು ನೋಡಿತೋ ಅದರಂತಾಗುವುದು. ಆ ಮೇಲೆ ಕಲಿತುದೆಲ್ಲವೂ ಈ ಪ್ರತಿ ಬಿಂಬವನ್ನು ಸಮರ್ಥಿಸುವುದರಲ್ಲಿಯೇ ಸಾರ್ಥಕತೆಯನ್ನು ಕಾಣುವುದು. ಈ ಸಮರ್ಥನೆಗಳೆಲ್ಲವೂ ಒಂದು ಬಗೆಯ ಪ್ರಜ್ಞಾವಾದಗಳು ಎನ್ನುತ್ತಾನೆ ಕೃಷ್ಣ. ಪ್ರಜ್ಞಾವಾದವೆಂದರೆ ಮೂಲ ಕಾರಣವನ್ನೂ ಶೋಧಿಸಲಾಗದ ದೌರ್ಬಲ್ಯವನ್ನು ಮುಚ್ಚಿಟ್ಟು ಇತರ ಕಾರಣಗಳನ್ನು ಮುಂದೊಡ್ಡಿ rationalize (ಸಕಾರಣ) ಮಾಡುವುದು.

ನಿಜಕ್ಕಾದರೆ ಮನಸ್ಸೆನ್ನುವುದು ಕನ್ನಡಿಯಂತೆ – ಮುಗ್ಧ. ಕನ್ನಡಿಯಲ್ಲಿ ಬಿದ್ದ ಚಿತ್ರದ ಹಂಗು ಕನ್ನಡಿಗೆ ಇದೆಯೆ? ಇಲ್ಲವಲ್ಲ. ಇರಲಾರದಲ್ಲ. ಆದರೆ ಚಿತ್ರಕ್ಕೆ, ಕನ್ನಡಿಯ ಹಂಗಿದೆ. ಅದು ಕನ್ನಡಿಯನ್ನು ತನಗಾಗಿ ಮಾತ್ರ ಆದರಿಸುತ್ತಿದೆ! ತನ್ನ ಚಿತ್ರಕ್ಕಾಗಿ ಮಾತ್ರ.

ಆದುದರಿಂದ ಪಾರಮಾರ್ಥಿಕ ಸತ್ಯ – ಮನಸ್ಸೆಂಬ ಕನ್ನಡಿಯನ್ನು ಮರಳಿ ಪಡೆ ಎನ್ನುತ್ತದೆ. ಕನ್ನಡಿಯಲ್ಲಿ ಬಿದ್ದ ಚಿತ್ರದಿಂದ ಕನ್ನಡಿಗೇನೂ ಕೇಡಿಲ್ಲ ಎನ್ನುತ್ತದೆ. ಮುಗ್ಧತೆ ಎಂದೂ ನಾಶವಾಗದು ಎನ್ನುತ್ತದೆ. ಮರಳಿ ನೀನು ಮುಗ್ಧತೆಯನ್ನು ಪಡೆದೆಯಾದರೆ ವ್ಯವಹಾರವೂ ಸುಗಮ ಎನ್ನುತ್ತದೆ. ಮಕ್ಕಳನ್ನು ಎಲ್ಲರೂ ಎತ್ತಿಕೊಳ್ಳುವುದಿಲ್ಲವೆ ಎನ್ನುತ್ತದೆ.

ನನಗೆ ವಿವೇಕಾನಂದರ ಕೊನೆಗಾಲದ ಮಾತು ನೆನಪಾಗುತ್ತೆ. ಆ ಮಾತು ಹೀಗಿದೆ: I was only the boy who used to listen with rapt wonderment to the wonderful words of Ramakrishna under the banyan tree at Dakshineshwar. That is my true

nature. Works and activities doing good and so forth are all super impositions". ('ನಾನು ಅರಳಿಮರದ ಕೆಳಗೆ ರಾಮಕೃಷ್ಣರ ಅತ್ಯದ್ಭುತ ಮಾತುಗಳನ್ನು ಅತೀವ ಬರಗಿನಿಂದ ಕೇಳುತ್ತಿದ್ದ ಬಾಲಕ ಮಾತ್ರನಾಗಿದ್ದೆ. ಅದೇ ನನ್ನ ನಿಜ ಸ್ವಭಾವ. ಒಳ್ಳೆಯದು ಇತ್ಯಾದಿಗಳನ್ನು ಮಾಡುವ ಕಾರ್ಯ ಚಟುವಟಿಕೆಗಳೆಲ್ಲ ಭ್ರಮೆಗಳಷ್ಟೆ')

ಆದರೆ ಈಗೇನಾಗಿದೆ ಎಂದರೆ, ವ್ಯವಹಾರ ಸತ್ಯಕ್ಕೆ ಪಾರಮಾರ್ಥಿಕ ಸತ್ಯವೇ ಮೊದಲ ಬಲಿ ಎಂಬಂತಾಗಿದೆ! ವ್ಯವಹಾರಕ್ಕೆ ಅಧಿಕಾರದ ರುಚಿ ಹಿಡಿದಿದೆ. ರಕ್ತದ ರುಚಿ ಹಿಡಿದಿದೆ. ಇನ್ನು ಹಿಂದೆ ಬರಲಾರೆ ಎನ್ನುತ್ತಿದೆ. ತಾನು ಇನ್ನಷ್ಟು ಬಲಿಷ್ಠನಾಗಬೇಕು ಎನ್ನುತ್ತಿದೆ.

ಆಶ್ಚರ್ಯವೆಂದರೆ 'ಬಾಲ್ಯ' ಎನ್ನುವ ಪದ 'ಬಲ'ದಿಂದಲೇ ಬಂದದ್ದು. ಆ 'ಬಲ' ಅದು ಮುಗ್ಧತೆಯ ಬಲ!

ಮರಳಿ 'ಬಾಲ್ಯ' ನಮಗೆ ಸಿಗಲುಂಟೆ? ನಮ್ಮ ಮುಗ್ಧತೆ ಕಳೆದೇ ಹೋಯಿತೆ?



**(ಪುತ್ತೂರಿನಲ್ಲಿ ನೆಲೆಸಿರುವ ಲೇಖಕ ಲಕ್ಷೀಶ ತೋಳ್ಪಾಡಿ ಕನ್ನಡದ ಅನನ್ಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಚಿಂತಕರಲ್ಲೊಬ್ಬರಾಗಿದ್ದಾರೆ)**

---

# ಮಾನವೀಯ ಮುಖವುಳ್ಳ ತಂತ್ರಜ್ಞಾನ

ಮೂಲ: **ಇ.ಎಫ್.ಶುಮಾಕರ್**

ಸಂಗ್ರಹಾನುವಾದ: **ಎಂ.ರಾಜು**




**ಆ**ಧುನಿಕ ಪ್ರಪಂಚ ರೂಪುಗೊಂಡಿರುವುದು ತಂತ್ರಜ್ಞಾನದಿಂದ ಎನ್ನಬಹುದು. ತಾನು ಸಿಲುಕಿರುವ ಸಂಕಷ್ಟಗಳಿಂದ ಹೊರಬರುವ ದಾರಿಗಳು ಕಾಣದೆ ಈ ಪ್ರಪಂಚವು ಕುಸಿದು ಬೀಳುವ ಲಕ್ಷಣಗಳು ಗೋಚರಿಸುತ್ತಿರುವುದರಿಂದ ನಮ್ಮ ಪ್ರಪಂಚವನ್ನು ರೂಪಿಸಿರುವ ತಂತ್ರಜ್ಞಾನದಲ್ಲೇ ಏನೋ ತೊಂದರೆ ಇದೆ ಎಂಬುದನ್ನು ಮನಗಂಡು ಅದನ್ನು ಪರಿಶೀಲಿಸುವುದು ಸೂಕ್ತ. ತಂತ್ರಜ್ಞಾನವು ಹೆಚ್ಚು ಹೆಚ್ಚು ಅಮಾನವೀಯವಾಗುತ್ತಿರುವಾಗ ಮಾನವೀಯ ಮುಖವುಳ್ಳ ಒಂದು ತಂತ್ರಜ್ಞಾನವನ್ನು ಹುಡುಕುವುದು ಸೂಕ್ತ.

ಆಧುನಿಕ ತಂತ್ರಜ್ಞಾನದ ಬೆಳವಣಿಗೆಯೆಂದರೆ ಅದು ಗಾತ್ರ, ವೇಗ ಮತ್ತು ಹಿಂಸೆಯ ಬೆಳವಣಿಗೆ. ಗಾತ್ರ, ವೇಗ ಮತ್ತು ಹಿಂಸೆಯ ವಿಷಯದಲ್ಲಿ ತಂತ್ರಜ್ಞಾನಕ್ಕೆ ಮಿತಿಯೆಂಬುದಿಲ್ಲ. ಆದ್ದರಿಂದ ಅಲ್ಲಿ ಪ್ರಕೃತಿಯಲ್ಲಿರುವಂತಹ ಸ್ವಯಂ ಸಂತುಲನ, ಸ್ವಯಂ ಹೊಂದಾಣಿಕೆ ಮತ್ತು ಸ್ವಯಂ ಶುದ್ಧೀಕರಣದ ವ್ಯವಸ್ಥೆಗಳಿಲ್ಲ. ಹಾಗಾಗಿ ಜೀವಂತ ಪ್ರಕೃತಿಯಲ್ಲಿ ಅದೊಂದು ಹೊರಗಿನ ವಸ್ತುವಿನಂತೆ ವರ್ತಿಸುತ್ತದೆ.

ಆಧುನಿಕ ತಂತ್ರಜ್ಞಾನ ರೂಪಿತ ಆಧುನಿಕ ಜಗತ್ತು ಮೂರು ಮುಖ್ಯವಾದ ಸಂಕಷ್ಟಗಳನ್ನೆದುರಿಸುತ್ತಿದೆ. ಅಮಾನವೀಯ ತಂತ್ರಜ್ಞಾನದ ವಿರುದ್ಧ ಮಾನವೀಯ ಪ್ರವೃತ್ತಿಯು ಬಂಡೇಳುತ್ತಿರುವುದು, ಸಾಂಸ್ಥಿಕ ಮತ್ತು ರಾಜಕೀಯ ಮಾದರಿಗಳು ಉಸಿರುಗಟ್ಟುತ್ತಿರುವುದು, ಮನುಷ್ಯ ಜೀವನವನ್ನು ಪೋಷಿಸುತ್ತಿರುವ ಜೀವಂತ ಪ್ರಾಕೃತಿಕ ವ್ಯವಸ್ಥೆ ಕುಸಿದು ಬೀಳುತ್ತಿರುವುದು ಮತ್ತು ಪುನರ್ನವೀಕರಿಸಲಾಗದ ಪ್ರಾಕೃತಿಕ ಸಂಪತ್ತಿನ ಮೇಲೆ ಮನುಷ್ಯನ ದುರಾಕ್ರಮಣಗಳೇ ಈ ಮೂರು ಸಂಕಷ್ಟಗಳು.

ತಂತ್ರಜ್ಞಾನದ ಪ್ರಥಮಿಕ ಉದ್ದೇಶವೇ ಮಾನವನ ದೈಹಿಕ ಶ್ರಮವನ್ನು ಕಡಿಮೆ ಮಾಡುವುದು. ಆದರೆ ವಾಸ್ತವದಲ್ಲಿ ಒಂದು ಸಮಾಜವು ಅನುಭವಿಸುವ ಬಿಡುವು ಅದು ಬಳಸುವ ಯಂತ್ರಗಳ ಪ್ರಮಾಣಕ್ಕೆ ವಿಲೋಮ ಪ್ರಮಾಣದಲ್ಲಿರುತ್ತದೆ ಎಂಬುದು ವಿಪರ್ಯಾಸ. ಯಂತ್ರಗಳ ಬಳಕೆಯಲ್ಲಿ ಮುಂದಿರುವ, ಅಮೆರಿಕ, ಜರ್ಮನಿಗಳಿಗೆ ಹೋಲಿಸಿದಲ್ಲಿ ಯಂತ್ರಗಳೇ ಇಲ್ಲದ ಬರ್ಮಾದೇಶದ ಜನರೇ ಹೆಚ್ಚು ಬಿಡುವಿರುವ ಸಮಾಧಾನದ ಬದುಕನ್ನು ಅನುಭವಿಸುತ್ತಾರೆ. ಯಾಂತ್ರೀಕೃತ ಸಮಾಜಗಳಿಗೆ ಹೋಲಿಸಿದಲ್ಲಿ ಇವರು ಸಾಧಿಸುವುದು ಕಡಿಮೆಯಿರಬಹುದು ಆದರೆ ಇವರ ಹೆಗಲ ಮೇಲಿನ ಹೊರೆಯೂ ಕಡಿಮೆಯೇ ಎಂಬುದು ನಿಜ.

ತಂತ್ರಜ್ಞಾನವು ಕಡಿಮೆ ಮಾಡಿರುವುದು, ಮನುಷ್ಯನ ಕೈಗಳು ಮತ್ತು ಮೆದುಳನ್ನು ಕ್ರಿಯಾಶೀಲಗೊಳಿಸುವಂಥಾ ನೈಪುಣ್ಯತೆಯನ್ನು ಬೇಡುವ ಕೆಲಸಗಳನ್ನು. ಮುಂದುವರಿದ ಸಮಾಜಗಳಲ್ಲಿ ಈ ಬಗೆಯ ನೈಪುಣ್ಯತೆ ಮತ್ತು ಕೌಶಲಗಳನ್ನು ಬೇಡುವ ಕೆಲಸದಲ್ಲಿ ತೊಡಗಿ ಒಂದು ಗೌರವಪೂರ್ಣ ಜೀವನ ನಿರ್ವಹಣೆ ಅಸಾಧ್ಯ. ಕೈಗಳು ಮತ್ತು ಮೆದುಳನ್ನು ಬಳಸಿ ಉತ್ಪಾದಕ ಚಟುವಟಿಕೆಯಲ್ಲಿ ತೊಡಗುವ ಅವಕಾಶಗಳು ಇಲ್ಲವಾಗಿರುವುದೇ ಇಂದಿನ ಮನುಷ್ಯರ ಮಾನಸಿಕ ಸಮಸ್ಯೆಗಳಿಗೆ ಕಾರಣ.



ಇ.ಎಫ್.ಶುಮಾಕರ್

ಆಧುನಿಕ ತಂತ್ರಜ್ಞಾನವು ನಿಜವಾದ ಕೆಲಸವನ್ನು ಮನುಷ್ಯನ ಕೈಯಿಂದ ಎಷ್ಟರಮಟ್ಟಿಗೆ ಕಿತ್ತುಕೊಂಡಿದೆ ಎಂಬುದನ್ನು ಸ್ಥೂಲವಾಗಿ ಈ ರೀತಿ ಲೆಕ್ಕಾಚಾರ ಮಾಡಬಹುದು. ಕೃಷಿ, ನಿರ್ಮಾಣ, ಗಣಿಗಾರಿಕೆ ಮುಂತಾದ ನಿಜವಾದ ಉತ್ಪಾದನಾ ಕೆಲಸಗಳಲ್ಲಿ ತೊಡಗಿರುವವರು ಈ ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಕಡಿಮೆ. ಕೆಲಸ ಹೇಗೆ ಮಾಡಬೇಕೆಂದು ಇತರರಿಗೆ ಹೇಳುವವರು ಲೆಕ್ಕ ಬರೆಯುವವರು ಇತರರು ಉತ್ಪಾದನೆ ಮಾಡಿದ್ದನ್ನು ವಿತರಣೆ ಮಾಡುವವರು ಇತ್ಯಾದಿಗಳು ನಿಜವಾದ ಕೆಲಸ ಮಾಡುವವರ ಗುಂಪಿಗೆ ಸೇರುವುದಿಲ್ಲ. ಒಬ್ಬ ನಿಜವಾದ ಕೆಲಸಗಾರನ ರಜೆ, ಕಾಯಿಲೆ, ಬಿಡುವು ಹೀಗೆ ಕೆಲಸ ಮಾಡದ ಸಮಯವನ್ನು ಲೆಕ್ಕ ಹಾಕಿದರೆ ಆತ ತನ್ನ ೧/೫ ರಷ್ಟು ಸಮಯವನ್ನು ಮಾತ್ರ ನಿಜವಾದ ಕೆಲಸಕ್ಕಾಗಿ ವ್ಯಯಿಸುತ್ತಾನೆ. ಅಂದರೆ ನಿಜವಾದ ಸಾಮಾಜಿಕ ಸಮಯದ ಶೇಕಡಾ ೩ಅಷ್ಟನ್ನು ಮಾತ್ರ ಒಂದು ಸಮುದಾಯವು ನಿಜವಾದ ಉತ್ಪಾದಕ ಚಟುವಟಿಕೆಯಲ್ಲಿ ವಿನಿಯೋಗಿಸಿ ಮಿಕ್ಕ ಶೇಕಡಾ ೯೭ರಷ್ಟು ಸಮಯವನ್ನು ಬೇರೆ ಯಾವ್ಯಾವುದೋ ಚಟುವಟಿಕೆಯಲ್ಲಿ ಕಳೆಯುತ್ತದೆ ಎನ್ನಬಹುದು.

ಇದು ನಿಖರವಾದ ಲೆಕ್ಕಾಚಾರವಲ್ಲ. ಆದರೆ ಸ್ಥೂಲವಾಗಿ ನಮ್ಮ ತಂತ್ರಜ್ಞಾನವು ಏನನ್ನು ಸಾಧಿಸಿದೆ ಎಂಬುದನ್ನು ನಿರೂಪಿಸಲು ಇದು ಸಾಕು. ಆಧುನಿಕ ಸಮಾಜದಲ್ಲಿ ನಿಜವಾದ ಉತ್ಪಾದಕ ಚಟುವಟಿಕೆಯಿಂದ ಒಬ್ಬ ಮನುಷ್ಯ ಎಷ್ಟು ದೂರದಲ್ಲಿರುತ್ತಾನೋ ಅಷ್ಟರಮಟ್ಟಿಗೆ ಅವನ ಘನತೆ ಹೆಚ್ಚುವುದು ವಿಪರ್ಯಾಸ. ನಿಜವಾದ ಉತ್ಪಾದಕ ಒಬ್ಬ ಸಾಮಾನ್ಯ ಕೆಲಸಗಾರನಾದರೆ ದೂರದಿಂದ ಅವನನ್ನು ನಿಯಂತ್ರಿಸುವವನು ಉನ್ನತ ಅಧಿಕಾರಿ. ಅನುತ್ಪಾದಕ ರೀತಿಯಲ್ಲಿ ಜೀವಿಸುವ ಶೇಕಡಾ ೯೭ರಷ್ಟು ಜನರಿಗೆ ಬೇಕಾದುದೆಲ್ಲವನ್ನೂ ಕೇವಲ ಶೇಕಡಾ ೩ಯಷ್ಟು ಜನ ಉತ್ಪಾದಿಸಬೇಕಾಗಿರುವುದರಿಂದ ಆಧುನಿಕ ಉತ್ಪಾದನಾ ಪ್ರಕ್ರಿಯೆಯು ಒಂದು ಅತ್ಯಂತ ಬೇಸರದ ಚಟುವಟಿಕೆಯಾಗಿ ಪರಿಣಮಿಸಿದೆ. ಅದು ಮನುಷ್ಯನನ್ನು ಶ್ರೀಮಂತಗೊಳಿಸುವುದಕ್ಕೆ ಪ್ರತಿಯಾಗಿ ಅವನನ್ನು ಟೊಳ್ಳು ಮಾಡುತ್ತಿದೆ.

ಆಧುನಿಕ ತಂತ್ರಜ್ಞಾನವು ಮನುಷ್ಯನಿಗೆ ಕೆಲಸದಿಂದ ದೊರೆಯುವ ಖುಷಿಯನ್ನು ಅವನಿಂದ ಕಸಿದುಕೊಂಡು, ಮೆದುಳಿಗೆ ಖುಷಿ ನೀಡುವ ಮತ್ತು ಕೈಕಾಲುಗಳ ಬಳಕೆ ಅಗತ್ಯವಿರುವ ಸಮಗ್ರ ಕೆಲಸಕ್ಕೆ ಪ್ರತಿಯಾಗಿ ಇಡೀ ಉತ್ಪಾದನಾ ಪ್ರಕ್ರಿಯೆಯನ್ನು ಹಲವು ಭಾಗಗಳಾಗಿ ವಿಭಜಿಸಿ ಅಂಶಿಕ ಚಟುವಟಿಕೆಯಲ್ಲಿ ಮನುಷ್ಯರನ್ನು ತೊಡಗಿಸುತ್ತದೆ. ಇದು ಮನುಷ್ಯನಿಗೆ ಖುಷಿ ನೀಡುವುದಿಲ್ಲ. ಮಾನವ ಪ್ರತಿಕ್ರಿಯೆಯ ಪರಿಗಣನೆಯಿಲ್ಲದೆ ಅವನನ್ನೂ ಸಹ ಒಂದು ಯಂತ್ರವೆಂದೇ ಪರಿಭಾವಿಸುವ ಆಧುನಿಕ ತಂತ್ರಜ್ಞಾನವು ಮನುಷ್ಯನನ್ನು ಅಪೂರ್ಣನನ್ನಾಗಿಸಿದೆ. ಆಧುನಿಕ ವ್ಯವಸ್ಥೆಯು ಉತ್ಪಾದನಾ ಚಟುವಟಿಕೆಯನ್ನು ಕೇವಲ ಉಪಯುಕ್ತ ವಸ್ತುಗಳಿಗೆ ಮಿತಿಗೊಳಿಸಿರುವುದರಿಂದ ಅಗತ್ಯಕ್ಕೆ ಮೀರಿದ ಉಪಯುಕ್ತ ವಸ್ತುಗಳ ಉತ್ಪಾದನೆಯು ಅತೀ ಹೆಚ್ಚು ನಿರುಪಯುಕ್ತ ಜನರ

ಸೃಷ್ಟಿಯಲ್ಲಿ ಪರ್ಯವಸಾನಗೊಳ್ಳುತ್ತದೆ ಎಂಬ ಸತ್ಯವನ್ನು ಅದು ಮರೆಯುತ್ತದೆ ಎಂಬುದು ಕಾರ್ಲ್ ಮಾರ್ಕ್ಸ್‌ರ ಅಭಿಪ್ರಾಯ. ಇದರಿಂದಾಗಿ ಆಧುನಿಕ ತಂತ್ರಜ್ಞಾನವು ತನ್ನ ಅಮಾನವೀಯ ಮುಖವನ್ನು ಹೆಚ್ಚು ಹೆಚ್ಚು ಪ್ರಕಟಗೊಳಿಸುತ್ತಿದೆ ಎನ್ನಬಹುದು. ನಮ್ಮ ತಾಂತ್ರಿಕ ಜ್ಞಾನದ ಸಂಗ್ರಹವು ಅಪಾರವಾಗಿದ್ದರೂ ಅದರ ಬಳಕೆಯ ವಿಚಾರದಲ್ಲಿ ನಾವು ತಪ್ಪು ಮಾಡುತ್ತಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ನಿಜವಾದ ಜ್ಞಾನವು ರಾಕ್ಷಸ ಗಾತ್ರಕ್ಕೆ, ಅಗಾಧ ವೇಗಕ್ಕೆ, ಹಿಂಸೆಗೆ ಮನುಷ್ಯನ ಕೆಲಸದ ಖುಷಿಯ ನಾಶಕ್ಕೆ ನಮ್ಮನ್ನು ಬಂಧಿಸಬೇಕಾಗಿಲ್ಲ. ಆದರೆ ಪ್ರಸ್ತುತ ಜ್ಞಾನದ ಬಳಕೆಯ ಮಾದರಿಯು ನಾವು ಹೆಚ್ಚು ಹೆಚ್ಚು ವಿನಾಶಕಾರಿಯೂ ಮತ್ತು ವಿವೇಕಹೀನವೂ ಆದ ರೀತಿಯಲ್ಲಿ ಅದನ್ನು ಬಳಸುತ್ತಿರುವುದನ್ನು ಖಚಿತಪಡಿಸುತ್ತದೆ.

ಒಟ್ಟು ಸಾಮಾಜಿಕ ಸಮಯದ ಶೇಕಡಾ ೩ಯಷ್ಟು ಮಾತ್ರ ನಿಜವಾದ ಉತ್ಪಾದನೆಗೆ ಬಳಕೆಯಾಗುತ್ತಿರುವುದನ್ನು ಕಂಡಿದ್ದೇವೆ. ಇಡೀ ಆಧುನಿಕ ತಾಂತ್ರಿಕ ಅಭಿವೃದ್ಧಿಯ ಗುರಿಯೇ ಈ ಸಮಯವನ್ನು ಮತ್ತಷ್ಟು ಕಡಿತಗೊಳಿಸುವುದು, ಶೂನ್ಯದ ಮಟ್ಟಕ್ಕೆ ಕೊಂಡೊಯ್ಯುವುದೇ ಆಗಿದೆ. ಇದಕ್ಕೆ ವಿರುದ್ಧವಾಗಿ ಇದನ್ನು ಶೇಕಡಾ ೨೦ಕ್ಕೆ ಹೆಚ್ಚಿಸುವುದನ್ನು ಕಲ್ಪಿಸಿಕೊಳ್ಳೋಣ. ಆಗ ಮಕ್ಕಳಿಗೆ, ವೃದ್ಧರಿಗೂ ಕೂಡ ಉಪಯುಕ್ತವಾದ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಅವಕಾಶ ದೊರೆಯುವುದು. ಆಗ ಪ್ರತಿಯೊಬ್ಬ ಮನುಷ್ಯನ ಉತ್ಪಾದಕತೆಯ ಮಟ್ಟವನ್ನು ಪ್ರಸ್ತುತ ಮಟ್ಟದ ರಷ್ಟು ಇಳಿಸಿದರೂ ಸಹ –ಅಂದರೆ ಶೇಕಡಾ ೧೫ ರಷ್ಟು ಮಾಡಿದರೂ ಸಹ–ಒಟ್ಟು ಸಮುದಾಯದ ಉತ್ಪಾದನೆಯ ಗಾತ್ರ ಈಗಿನದರಷ್ಟೇ ಇರುತ್ತದೆ. ಈ ಪ್ರಕ್ರಿಯೆಯ ಚಿಕಿತ್ಸಕ ಮತ್ತು ಶೈಕ್ಷಣಿಕ ಪರಿಣಾಮವನ್ನು ಗಮನಿಸೋಣ. ಈಗ ಮನುಷ್ಯರನ್ನು ಶ್ರಮ ಮಾರುಕಟ್ಟೆಯಿಂದ ಹೊರಗಿಡಲು ಬಳಸುತ್ತಿರುವ ಯಾವ ತಂತ್ರವನ್ನೂ ಆಗ ಬಳಸಬೇಕಾಗುವುದಿಲ್ಲ. ಒಂದು ಇಡೀ ಸಮುದಾಯವೇ ಉತ್ಪಾದನಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಮೆದುಳು ಮತ್ತು ಕೈಕಾಲುಗಳನ್ನು ಬಳಸಿ ತನ್ನದೇ ವೇಗದಲ್ಲಿ ತನ್ನದೇ ಸಮಯದಲ್ಲಿ ಖುಷಿಯನ್ನು ಅನುಭವಿಸುತ್ತಾ ತನಗೆ ಅಗತ್ಯವಾದುದನ್ನು ಉತ್ಪಾದಿಸಿಕೊಳ್ಳಬಹುದು. ಆಗ ಮತಿಹೀನ ಮನೋರಂಜನೆಗೆ, ಔಷಧಿಗಳಿಗೆ, ಮಾದಕ ವಸ್ತುಗಳಿಗೆ ಅವಕಾಶವೇ ಇರುವುದಿಲ್ಲ. ರೋಗವೂ ಇರುವುದಿಲ್ಲ. ಇದನ್ನು ಯುಟೋಪಿಯನ್, ರಮ್ಯ ಕಲ್ಪನೆ ಎನ್ನಬಹುದು. ಪ್ರಸ್ತುತ ಕೈಗಾರಿಕಾ ಸಮಾಜದಲ್ಲಿ ಏನನ್ನು ಕಾಣುತ್ತಿದ್ದೇವೆಯೋ ಅದರಲ್ಲಿ ರಮ್ಯವೂ ಇಲ್ಲ, ಯುಟೋಪಿಯನ್ನಾದುದೂ ಇಲ್ಲ. ಸಂಕಷ್ಟದಲ್ಲಿರುವ ಅದು ಉಳಿಯುವ ಲಕ್ಷಣಗಳೂ ಕಾಣುತ್ತಿಲ್ಲ. ನಾವೂ ಉಳಿದು ನಮ್ಮ ಮಕ್ಕಳಿಗೂ ಉಳಿಯುವ ಅವಕಾಶವನ್ನು ಕಲ್ಪಿಸಬೇಕೆಂದರೆ ನಾವು ಕನಸುಕಾಣುವ ಧೈರ್ಯವುಳ್ಳವರಾಗಬೇಕು.

ಇದು ಅಸಾಧ್ಯವೆಂಬಂತೆ ತೋರುವುದು, ಇದು ಬೇಡುವ ಜೀವನ ಶೈಲಿಯ ಬದಲಾವಣೆ, ಇದರ ಅನಿವಾರ್ಯ ಅಗತ್ಯಗಳ ಪೂರೈಕೆ ಅಸಾಧ್ಯ ಎಂಬ ಕಾರಣಕ್ಕಲ್ಲ. ಪ್ರಸ್ತುತ ಉಪಭೋಗಿ ಸಮಾಜವು ಯಾವ ಕಷ್ಟ ಬಂದರೂ ತನ್ನ ಚಟವನ್ನು ಬಿಡಲಾರದ ಮಾದಕ ವ್ಯಸನಿಯಂತಿರುವ ಕಾರಣಕ್ಕೆ. ಬಡ ರಾಷ್ಟ್ರಗಳು ಶ್ರೀಮಂತ ರಾಷ್ಟ್ರಗಳನ್ನು ಅನುಕರಿಸಲು ಪ್ರಯತ್ನಿಸಿ ನಿರುದ್ಯೋಗ, ನಗರಗಳ ಕಡೆಗೆ ಸಾಮೂಹಿಕ ವಲಸೆ, ನಗರಗಳ ಕೊಳೆಯುವಿಕೆ, ಅಸಹನೀಯ ಸಾಮಾಜಿಕ ಸಂಘರ್ಷಗಳಂತಹ ಸಂಕಷ್ಟಗಳನ್ನು ತಮ್ಮ ಮೈಮೇಲೆ ಎಳೆದುಕೊಳ್ಳುತ್ತಿವೆ.

ಗಾಂಧೀಜಿಯವರು ಹೇಳಿದ ಹಾಗೆ ಸಮೂಹ ಉತ್ಪಾದನೆ (mass production)ಯಿಂದ ಬಡವರ ಉದ್ಧಾರ ಸಾಧ್ಯವಿಲ್ಲ. ನಮಗೆ ನಿಜಕ್ಕೂ ಬೇಕಿರುವುದು ಸಮೂಹದಿಂದ ಉತ್ಪಾದನೆ (production by masses). ಭಾರೀ ಉತ್ಪಾದನಾ ವ್ಯವಸ್ಥೆ ಆಂತರಿಕವಾಗಿ ಹಿಂಸಾತ್ಮಕವೂ ಪರಿಸರದ ದೃಷ್ಟಿಯಿಂದ ಹಾನಿಕಾರಕವೂ ಪುನರ್ನವೀಕರಿಸಲಾಗದ ಸಂಪನ್ಮೂಲಗಳ ದೃಷ್ಟಿಯಿಂದ ಸ್ವಯಂವಿನಾಶಕವೂ ಆದುದು. ಸಮೂಹದಿಂದ ಉತ್ಪಾದನೆಯಲ್ಲಿ ಯಂತ್ರವು ಮನುಷ್ಯನ ಯಜಮಾನನಾಗದೇ ಮನುಷ್ಯನ ಕೈಯಲ್ಲಿ ಒಂದು ಸಾಧನವಾಗುತ್ತದೆ. ಇದು ವಿಕೇಂದ್ರೀಕರಣಕ್ಕೆ ಸಹಕಾರಿಯಾಗಿರುತ್ತದೆ. ನೈಸರ್ಗಿಕ ನಿಯಮಗಳಿಗೆ ಹೊಂದುವಂತಿರುತ್ತದೆ. ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯಲ್ಲಿ ಮಿತವಾಗಿರುತ್ತದೆ. ಹಾಗಾಗಿ ಇಂದು ನಮಗೆ ಬೇಕಾಗಿರುವ ತಂತ್ರಜ್ಞಾನವನ್ನು ಆದಿಮ ತಂತ್ರಜ್ಞಾನಕ್ಕಿಂತ ಉತ್ತಮವಾದ, ಇಂದಿನ ಶ್ರೀಮಂತ ಸೂಪರ್ ತಂತ್ರಜ್ಞಾನಕ್ಕಿಂತ ಅಗ್ಗವೂ ಸರಳವೂ ಮುಕ್ತವೂ ಆಗಿರುವ ಮಧ್ಯಂತರ ತಂತ್ರಜ್ಞಾನವೆನ್ನಬಹುದು.

ತಂತ್ರಜ್ಞಾನವನ್ನು ಸರಳವೂ ನೇರವೂ ಎಲ್ಲರಿಗೂ ಎಟುಕುವಂತಹುದೂ ಮತ್ತು ಪಾರದರ್ಶಕವೂ ಆಗಿರುವಂತೆ ರೂಪಿಸುವುದೇ ನಿಜವಾದ ಸವಾಲು. ಒಬ್ಬ ಮೂರನೆಯ ದರ್ಜೆ ಇಂಜಿನಿಯರ್ ಅಥವಾ ಸಂಶೋಧಕ ಕ್ಲಿಷ್ಟತೆಯನ್ನು ಹೆಚ್ಚಿಸಬಲ್ಲ. ಆದರೆ ನಿಜವಾದ ಉತ್ಪಾದನಾ ಪ್ರಕ್ರಿಯೆಯಿಂದ ಸ್ವಯಂ ಸಂತುಲನದ ಪ್ರಕೃತಿಯಿಂದ ದೂರವಾದ ಜನರಿಗೆ ಈ ಒಳನೋಟ ಸುಲಭವಾಗಿ ಮೂಡುವುದಿಲ್ಲ. ಸ್ವಯಂ ನಿಯಂತ್ರಣವನ್ನು ಮಾನ್ಯಮಾಡದ ಯಾವ ಚಟುವಟಿಕೆಯೂ ನಿರಂತರವಾಗಿ ಉಳಿಯುವುದು ಸಾಧ್ಯವಿಲ್ಲ.

ನಮ್ಮ ಸಮಸ್ಯೆಗಳಿಗೆ ಪರಿಹಾರವೇನು ಎಂಬ ವಿಷಯದಲ್ಲಿ ತಜ್ಞರ ನಡುವೆ ಒಮ್ಮತವಿಲ್ಲ. ಇನ್ನೂ ದೊಡ್ಡ ಯಂತ್ರಗಳನ್ನು ನಿರ್ಮಿಸಬೇಕು, ಉತ್ಪಾದನೆ ಹೆಚ್ಚಿಸಬೇಕು ಪ್ರಾಕೃತಿಕ ಸಂಪತ್ತನ್ನು ಇನ್ನೂ ಹೆಚ್ಚು ಹೆಚ್ಚು ದೋಚಬೇಕು ಇದುವೇ ಅಭಿವೃದ್ಧಿ ಎನ್ನುವವರದ್ದೇ ಪ್ರಧಾನ ಗುಂಪು, ಇದುವೇ ಚಾಲ್ತಿಯಲ್ಲಿರುವ ವಾದ. ನಾವು ಸರಳವಾಗಿ ಬದುಕಬೇಕು, ನಮ್ಮ ಅಗತ್ಯಗಳನ್ನು ಕಡಿಮೆಮಾಡಿಕೊಳ್ಳಬೇಕು, ವೇಗವನ್ನು ತಗ್ಗಿಸಬೇಕು ಎಂಬ ವಾದ ಕ್ಷೀಣವಾಗುತ್ತಿದೆ. ಇದು ಪ್ರತಿಗಾಮಿ, ಪ್ರಗತಿವಿರೋಧಿ ಎಂಬ ಟೀಕೆಗೆ ಒಳಗಾಗುತ್ತಿದೆ.

ನಮ್ಮ ಅಭಿವೃದ್ಧಿಯ ಮಾದರಿಗಳನ್ನು ಪರಿಶೀಲಿಸಿದರೆ ನಮ್ಮ ಅಸ್ತಿತ್ವದ ಆಧಾರವನ್ನೇ ನಾವು ನಾಶಪಡಿಸುತ್ತಿರುವುದು ಕಾಣುತ್ತದೆ. ಮಣ್ಣಿಗೆ, ಸಸ್ಯಗಳಿಗೆ ಮತ್ತು ಪ್ರಾಣಿಗಳಿಗೆ ಅಗಾಧ ಪ್ರಮಾಣದ ರಾಸಾಯನಿಕಗಳನ್ನು ಉಣಬಡಿಸುವುದನ್ನು ಆಧುನಿಕ ಕೃಷಿ ಬೆಂಬಲಿಸುತ್ತದೆ. ಇದನ್ನು ವಿರೋಧಿಸುವವರ ಎದುರಿಗೆ ಹಸಿವು ಮತ್ತು ವಿಷದ ನಡುವಿನ ಆಯ್ಕೆಯನ್ನು ಇರಿಸಿ ಬಾಯಿಮುಚ್ಚಿಸಲಾಗುತ್ತಿದೆ. ಇದೊಂದು ಸಂಘರ್ಷ. ಈ ಸಂಘರ್ಷದಲ್ಲಿ ಪ್ರತಿಯೊಬ್ಬರೂ ಯಾವುದಾದರೂ ಒಂದು ಪಕ್ಷದ ಜೊತೆಗೆ ಇರಲೇಬೇಕು. ಇಂದು ರಾಜಕಾರಣವೆಂಬುದು ಕೆಲವೇ ಮಂದಿ ತಜ್ಞರಿಗೆ ಬಿಟ್ಟುಕೊಡಲಾರದಷ್ಟು ಪ್ರಮುಖ ಸಂಗತಿಯಾಗುವುದಾದರೆ ಅರ್ಥಶಾಸ್ತ್ರ ಮತ್ತು ತಂತ್ರಜ್ಞಾನಗಳೂ ಸಹ ಕೆಲವೇ ತಜ್ಞರ ಆಯ್ಕೆಗೆ ಬಿಡಬಾರದಷ್ಟು ಪ್ರಮುಖ ಸಂಗತಿಗಳೇ.

ಮನುಷ್ಯನ ನಿಜವಾದ ಅಗತ್ಯಗಳಿಗೆ ಗಮನ ನೀಡುವ ಮಾನವೀಯ ದಿಕ್ಕಿನಲ್ಲಿ ತಾಂತ್ರಿಕ ಅಭಿವೃದ್ಧಿ ನಡೆಯಬೇಕು. ಮನುಷ್ಯನ ನಿಜವಾದ ಅಗತ್ಯ ಮತ್ತು ನಿಜವಾದ ಗಾತ್ರಗಳನ್ನು ಪರಿಗಣಿಸಬೇಕು. ಮನುಷ್ಯನ ಗಾತ್ರ ಸಣ್ಣದು ಆದ್ದರಿಂದ ಸಣ್ಣದೇ ಸುಂದರವಾದದ್ದು. ರಾಕ್ಷಸತನದ ಆಯ್ಕೆ ಎಂದರೆ ಅದು ಸ್ವಯಂವಿನಾಶದ ಆಯ್ಕೆಯೇ ಆಗಿರುತ್ತದೆ. ಹಾಗಾದರೆ ಈ ಹೊಸದೃಷ್ಟಿಗೆ ತೆರಬೇಕಾದ ಬೆಲೆ ಏನು? ಮನುಕುಲದ ಉಳಿವಿಗೆ ತೆರಬೇಕಾದ ಬೆಲೆಯನ್ನು ಲೆಕ್ಕ ಹಾಕುವುದೇ ವಿಕೃತಿ ಎಂಬುದನ್ನು ಮನಗಾಣಬೇಕು. ಮನುಷ್ಯನನ್ನು ನಿರ್ನಾಮಗೊಳಿಸುವುದಕ್ಕೆ ಪ್ರತಿಯಾಗಿ ಅವನಿಗೆ ಸೇವೆ ಮಾಡುವ ದಿಕ್ಕಿನಲ್ಲಿ ತಂತ್ರಜ್ಞಾನವನ್ನು ಮರುನಿರ್ದೇಶಿಸುವುದಕ್ಕೆ ನಿರ್ಧಾರ ಮತ್ತು ಪ್ರಯತ್ನಗಳು ಬೇಕು.

**(ಇದು ಶುಮಾಕರ್ ಅವರ Small is beautuful ಪುಸ್ತಕದ ಅಪ್ರಕಟಿತ ಅನುವಾದದ ಒಂದು ಅಧ್ಯಾಯ)**

---

**೨ನೇ ಪುಟದಿಂದ)**

ಉಲ್ಲೇಖಿಸಬಹುದೆಂದು ಕಾಣುತ್ತದೆ: ' Where is Adiga today? Yes, there is lot of passion in his poetry. But where is compassion?'

**-ಡಿ.ಎಸ್. ನಾಗಭೂಷಣ,** ಶಿವಮೊಗ್ಗ

ಇಂದಿರಾ ಕೃಷ್ಣಪ್ಪನವರು ಬರೆಯುತ್ತಿರುವ ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲಿಕೆ ಹಳೆಯ ಹೋರಾಟಗಳ ಒಣ ವರದಿಗಳ ಏಕತಾನತೆಯಿಂದ ಆಯಾಸ ಹುಟ್ಟಿಸುತ್ತಿದೆ. ಕೃಷ್ಣಪ್ಪನವರು ಒಳ್ಳೆಯ ಸಂಸಾರಸ್ಥರೂ ಆಗಿದ್ದರಲ್ಲವೆ? ಹೋರಾಟಗಳ ಮಧ್ಯೆ ಅವರು ತಮ್ಮ ಹೆಂಡತಿ–ಮಕ್ಕಳ ಕ್ಷೇಮಾಭ್ಯುದಯಗಳ ಕಡೆ ಗಮನ ಕೊಡುತ್ತಿದ್ದುದರ ವಿವರಗಳನ್ನೂ ಇಂದಿರಾ ಮೇಡಂ ಬರೆದರೆ ಮಾಲಿಕೆ ಒಂದಿಷ್ಟು ಕುತೂಹಲದಿಂದ ಓದಿಸಿಕೊಳ್ಳಬಹುದು.

**–ಎಂ. ಜಯರಾಂ,** ನಂಜನಗೂಡು

'ಹೊಸ ಮನುಷ್ಯ'ನಲ್ಲಿ ಹೊಸ ಹೊಸ ವಿಚಾರಗಳಿವೆ. ಆಲೋಚನೆಗೆ ಗ್ರಾಸ ಒದಗಿಸುತ್ತಿರುವ ನಿಮಗೆ ನಾನಷ್ಟೇ ಅಲ್ಲ, ನಾಡೇ ಕೃತಜ್ಞವಾಗಿದೆ.

**–ಹಿರೇಮಗಳೂರು ಕಣ್ಣನ್,** ಹಿರೇಮಗಳೂರು

ಮಾರಾಯ್ರಾ, ಸಕಾಲಕ್ಕೆ ಸಮಾಜವಾದಿ 'ಹೊಸ ಮನುಷ್ಯ' ತರುತ್ತಿರುವುದು ಕನ್ನಡಿಗರ ಪುಣ್ಯವಿಶೇಷ ಎಂದೇ ನನ್ನ ಅಭಿಪ್ರಾಯ.

**–ಕಡಿದಾಳು ಶಾಮಣ್ಣ,** ಭಗವತಿಕೆರೆ

**ಸಾಹಿತ್ಯ-ಸಂಸ್ಕೃತಿ, ರಾಜಕಾರಣ ಇತ್ಯಾದಿ**

# ಮೌಢ್ಯ ನಿಷೇಧ, ಪ್ರಶಸ್ತಿ ವಾಪಸಾತಿಗಳ ಸುತ್ತಮುತ್ತ...



ಪ್ರಗತಿಪರತೆ ಎನ್ನುವುದು ಜನಪ್ರೀತಿಗಿಂತ ಹೆಚ್ಚಾಗಿ ಸ್ವಯಂವಿಚಾರ ಶ್ರೇಷ್ಠತೆಯ ಅಹಂಕಾರ ಅಥವಾ ರಾಜಕೀಯ ವೈರತ್ವ ಸಾಧನೆಯ ಮಾರ್ಗಗಳಲ್ಲೊಂದಾಗಿ ಗೀಳಿನಂತಾದರೆ ಅದು ಜನರ ವಿಶ್ವಾಸ ಕಳೆದುಕೊಳ್ಳುತ್ತದೆ. ನಮ್ಮ ಪ್ರಗತಿಪರ ಅಥವಾ ಎಡಪಂಥೀಯ ರಾಜಕಾರಣ ಕಾಲಕ್ರಮೇಣ ಜನರಿಂದ ತಿರಸ್ಕೃತವಾಗಿ ಮೋದಿಯವರ ಬಲಪಂಥೀಯ ಸರ್ಕಾರ ಅಸ್ತಿತ್ವಕ್ಕೆ ಬಂದಿರುವುದು ಇದೇ ಕಾರಣದಿಂದಾಗಿಯೇ. ಆದರೆ ನಮ್ಮ ಕೆಲವು ಪ್ರಗತಿಪರರಿಗೆ ಇನ್ನೂ ಬುದ್ಧಿ ಬಂದಂತಿಲ್ಲ. ಹೀಗೆ ನಾನು ಯೋಚಿಸಲು ಕಾರಣವಾಗಿದ್ದು ಇತ್ತೀಚಿನ ಎರಡು ಮೂರು ಘಟನೆಗಳು:

ಗೆಳೆಯ ರಾಜೇಂದ್ರ ಚೆನ್ನಿಯವರು ಕೆಲವು ದಿನಗಳ ಹಿಂದೆ ನನಗೆ ಕರೆ ಮಾಡಿ ಮೌಢ್ಯ ನಿಷೇಧ ಕಾನೂನು ಜಾರಿಗೆ ತರಲು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಬರಬೇಕೆಂದು ಆಹ್ವಾನಿಸಿದರು. ನಾನು ಬರಲಾರೆ ಎಂದೆ. ಕಾರಣ, ಮುಖ್ಯವಾಗಿ ಮೌಢ್ಯಗಳನ್ನು ಕಾನೂನಿನ ಭಾಷೆಯಲ್ಲಿ ನಿಖರವಾಗಿ ನಿರೂಪಿಸುವುದು ಸಾಧ್ಯ ಎಂದು ನಾನು ನಂಬುವುದಿಲ್ಲ. ಅಲ್ಲದೆ ಅಂತಹ ಕಾನೂನು ನಮ್ಮ ಶಾಸನ ಸಭೆಯಲ್ಲಿ ಅನುಮೋದಿತವಾಗುವ ಸಂಭವವೇ ಇಲ್ಲ. ಹಾಗಾಗಿ ಇದೊಂದು ವ್ಯರ್ಥ ಪ್ರಯತ್ನ. ಅಕಸ್ಮಾತ್ ಹಲವರ ಆತ್ಮ ವಂಚನೆಯನ್ನೂ ಮೀರಿ ಅದು ಕಾನೂನಾದರೂ, ಅದನ್ನು ಜಾರಿಗೊಳಿಸುವರು ಯಾರು? ಹೇಗೆ? ನಮಗೆ ತಿಳಿದಂತೆ ನಮ್ಮ ರಾಜಕಾರಣಿಗಳು, ಅಧಿಕಾರಿಗಳು, ಪೋಲೀಸಿನವರು ಸೇರಿದಂತೆ ಇಡೀ ವ್ಯವಸ್ಥೆಯೇ ಮೌಢ್ಯಾಚರಣೆಗಳಲ್ಲಿ ಮುಳುಗಿರುವಾಗ ಇದು ಜಾರಿಗೆ ಬರುವುದು ಜನಸಾಮಾನ್ಯರಿಗೆ ಕಿರುಕುಳವಾಗಿ ಭ್ರಷ್ಟಾಚಾರದ ಇನ್ನೊಂದು ಮಾರ್ಗವಾಗಿ ಮಾತ್ರ ಎಂಬುದು ನನ್ನ ಆತಂಕ. ಇಂತಹ ವಾತಾವರಣದಲ್ಲಿ ಪ್ರಭುತ್ವದ ಕೈಗೆ ನಾವು ಹೆಚ್ಚೆಚ್ಚು ಅಧಿಕಾರಗಳನ್ನು ಕೊಡುತ್ತಾ ಹೋಗುವುದು ಅಂತಿಮವಾಗಿ ಜನವಿರೋಧಿ ಕ್ರಮವೆಂದೇ ನನ್ನ ಅಭಿಪ್ರಾಯ.

ಅಂದಹಾಗೆ, ವಿಚಾರವಾದಿ ದಾಭೋಲ್ಕರ್ ಹತ್ಯೆಯ ಸುಳಿವು ಸಿಗದೆ ಮೇಲಿನವರ ಒತ್ತಡಕ್ಕೆ ಒಳಗಾದ ಮಹಾರಾಷ್ಟ್ರದ ಪೋಲೀಸ್ ಆಧಿಕಾರಿ, ನೆರವಿಗಾಗಿ ಧಾವಿಸಿದ್ದು ಓರ್ವ ತಾಂತ್ರಿಕನ ಬಳಿಗೆ ಎಂಬ ವರದಿಯನ್ನು ಈ ಹಿಂದೆ ಓದಿದ ನೆನಪಿದೆ! ಹಾಗೇ ಇತ್ತೀಚೆಗೆ 'ಚಂದ್ರಯಾನ' ಅಂತರಿಕ್ಷ ನೌಕೆಯನ್ನು ಹಾರಿಸುವ ಮುನ್ನ ಇಸ್ರೋದ ಅಧ್ಯಕ್ಷರು ಅದರ ಪ್ರತಿಕೃತಿಯನ್ನು ತಿರುಪತಿ ವೆಂಕಟರಮಣನ ಸನ್ನಿಧಿಗೆ ಒಯ್ದು ಪೂಜೆ ಮಾಡಿಸಿಕೊಂಡು ಬಂದ ಘಟನೆ ಯಾರಿಗಾದರೂ ನೆನಪಿರಬಹುದು!

ಅದಿರಲಿ, ಬೆಂಗಳೂರಿನಲ್ಲಿ ನಡೆದ ಮೌಢ್ಯ ವಿರೋಧಿ ಸಭೆ ಮೆರವಣಿಗೆಯ ನೇತೃತ್ವ ವಹಿಸಿದವರಾದರೂ ಯಾರು? ಮಠಾಧೀಶರ ಒಂದು ದಂಡೇ ಅಲ್ಲಿ ನೆರೆದಿತ್ತು. ಮಠಾಧೀಶರೆಂದರಾದರೂ ಯಾರು? ಅವರ ಜಾತಿಗಳ ಅಧಿಪತಿಗಳು. ಜಾತಿಯೇ ಅವರ ಶಕ್ತಿ. ಜಾತಿಯೇನು ವೈಜ್ಞಾನಿಕ ಆಧಾರವುಳ್ಳದ್ದೇ? ಅದೇ ನನ್ನ ಪ್ರಕಾರ ಮೂಲ ಮೌಢ್ಯ ಅಥವಾ ಮಾತೃ ಮೌಢ್ಯ. ಅದೇ ಎಲ್ಲ ಮೌಢ್ಯಗಳಿಗೆ ಆಶೀರ್ವಾದ ರೂಪಿಯಾಗಿ ಕೆಲಸ ಮಾಡುತ್ತಿರುವುದು. ರಾಜ್ಯದ ಹಲವು ಕಡೆ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ದಲಿತರು ತಯಾರು ಮಾಡುತ್ತಾರೆಂದು ಸವರ್ಣೀಯರ ಮಕ್ಕಳು ಆ ಊಟವನ್ನೇ ಬಿಟ್ಟು ಪ್ರತಿಭಟಿಸುತ್ತಿರುವ ಸಂದರ್ಭಗಳು ಎಷ್ಟಿಲ್ಲ? ಆಗ ಈ ಮಠಾಧೀಶರು ಏನು ಮಾಡುತ್ತಿದ್ದರು?


ಯಾರೂ ಮೌಢ್ಯವೆಂದು ತಿಳಿದೂ ಮೌಢ್ಯಾಚರಣೆಗಳಲ್ಲಿ ತೊಡಗುವುದಿಲ್ಲ. ಇವರು ಹೇಳುವ 'ವೈಜ್ಞಾನಿಕ ಪರಿಹಾರ'ಗಳೆಲ್ಲ ವಿಫಲವಾದಾಗ ಅಥವಾ ಕೈಗೆಟಕುವ ಸ್ಥಿತಿಯಲ್ಲಿಲ್ಲದ್ದಾಗ ಮಾತ್ರ ಜನ ಅಸಹಾಯಕರಾಗಿ ಇವರು ಹೇಳುವ ಮೌಢ್ಯಾಚರಣೆಗಳ ಮೊರೆ ಹೋಗುತ್ತಾರೆ. ಅದರಲ್ಲಿ ಅಪರಾಧ ಅಥವಾ ಶೋಷಣೆ ಇದ್ದರೆ ಅವನ್ನು ನಿರ್ವಹಿಸಲು ಹೇಗೂ ಸಾಮಾನ್ಯ ಕಾನೂನುಗಳು ಇವೆ. ನಿಜವಾಗಿ ಈಗ ಅಗತ್ಯವಿರುವುದು. ಮೌಢ್ಯಾಚರಣೆಗಳಿಗೇಕೆ ಜನ ಮೊರೆ ಹೋಗುತ್ತಾರೆ ಎಂಬುದರ ಸಹಾನುಭೂತಿಯ ಪರಿಶೀಲನೆ ಮತ್ತು ಇದನ್ನು ತಪ್ಪಿಸಲು ಅಗತ್ಯವಾದ ನಾಗರೀಕ ಸೌಲಭ್ಯಗಳ ವಿಸ್ತರಣೆಗೆ ಸರ್ಕಾರದ ಮೇಲೆ ಒತ್ತಡ. ಈ ಆಚರಣೆಗಳ ಹಿಂದೆ ಇರುವುದು ತಮ್ಮ ರಾಜಕೀಯ ವಿರೋಧಿಗಳ ಜಾಲ ಎಂಬ ಮೌಢ್ಯವೇ ಈ ಸ್ವಯಂಘೋಷಿತ ವಿಚಾರವಾದಿಗಳನ್ನು ಆಗಾಗ್ಗೆ ಇಂತಹ ಸಭೆ-ಮೆರವಣಿಗೆಗಳಿಗೆ ಮೊರೆ ಹೋಗುವಂತೆ ಮಾಡುವುದೆಂದು ಕಾಣುತ್ತದೆ. ಅವರು ಮೊದಲು ಈ ಮೌಢ್ಯವನ್ನು ತೊರೆಯಬೇಕಿದೆ.

ಈ ಪ್ರಗತಿಪರರು ಇತ್ತೀಚೆಗೆ ಕೈಗೊಂಡ ಇನ್ನೆರೆಡು ಇಂತಹ ಅನುಚಿತ ಕೆಲಸಗಳೆಂದರೆ, ಅಸಹಿಷ್ಣುತೆಯ ವಾತಾವರಣದ ವಿರುದ್ಧ ನಡೆಸಿದ ಪ್ರಶಸ್ತಿ ವಾಪಸಾತಿ ಆಂದೋಲನವನ್ನು ಒಂದು ರಾಜಕೀಯ ಬಂಡವಾಳವಾಗಿ ಕ್ರೋಢೀಕರಿಸಿಕೊಳ್ಳಲು ಬೆಂಗಳೂರಿನಲ್ಲಿ 'ಭಾರತ ಉಳಿಸಿ' ಎಂಬ ವೇದಿಕೆಯಡಿ ಮತ್ತು ಆನಂತರ ಧಾರವಾಡದಲ್ಲಿ ಆಯೋಜಿಸಿರುವ 'ಪ್ರಶಸ್ತಿ ವಾಪಸ್ ಮಾಡಿದವರ ಸಮಾಗಮ' ಎಂಬ ಕಾರ್ಯಕ್ರಮಗಳು. ಇದರ ಜೊತೆಗೆ ಈಗ ನಟ ಅಮೀರ್‌ಖಾನನ ಅಧಿಕ ಪ್ರಸಂಗದ ಹೇಳಿಕೆ ಬೇರೆ ಸೇರಿಕೊಂಡಿದೆ!

ಬಹುಶಃ ಬಿಹಾರ ಚುನಾವಣೆಗಳ ಮೇಲೆ ಕಣ್ಣಿಟ್ಟು ಸಂಘ ಪರಿವಾರವು ಧಾರ್ಮಿಕ ಧೃವೀಕರಣಕ್ಕಾಗಿ ಗೋಮಾಂಸ ಇತ್ಯಾದಿಗಳ ನೆಪದಲ್ಲಿ ದೇಶದಲ್ಲಿ ಸೃಷ್ಟಿಸಿದ ಅಸಹಿಷ್ಣುತೆಯ ವಾತಾವರಣ ದಟ್ಟವಾಗುತ್ತಿದ್ದಂತೆ ಅದರ ವಿರುದ್ಧ ರಾಷ್ಟ್ರದ ವಿವಿಧ ಕಡೆಗಳಿಂದ ದನಿ ಎದ್ದವು. ನಮ್ಮ ಕೆಲ ಲೇಖಕ-ಬುದ್ಧಿಜೀವಿಗಳು ತಮ್ಮ ಪ್ರಶಸ್ತಿ-ಸ್ಥಾನಮಾನಗಳನ್ನು ವಾಪಸ್ ಮಾಡಿ ಪ್ರತಿಭಟಿಸಿದ್ದು ಸರಿಯೇ. ಇದಕ್ಕೆ ಪ್ರತಿಸ್ಪಂದನವಾಗಿ ಬಿಹಾರ ಚುನಾವಣೆಗಳಲ್ಲಿ ಜನ ಈ ಅಸಹಿಷ್ಣುತೆಯ ರಾಜಕಾರಣವನ್ನು ಸಹಿಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಸಾಬೀತುಪಡಿಸಿದ್ದೂ ಆಯಿತು. ಅಲ್ಲಿಗೆ ಈ ಪ್ರತಿಭಟನೆ ಸದ್ಯಕ್ಕಾದರೂ ನಿಲ್ಲಬೇಕಿತ್ತು. ಆದರೆ ಅದನ್ನೀಗ ಒಂದು ರಾಜಕೀಯ ಅಸ್ತ್ರವನ್ನಾಗಿ ಪರಿವರ್ತಿಸಿಕೊಳ್ಳಲು ನಡೆದಿರುವ ಪ್ರಯತ್ನ ಪ್ರಶಸ್ತಿ ವಾಪಸ್ ನೀಡಿದವರ ಉದ್ದೇಶಗಳನ್ನೇ ಅನುಮಾನಾಸ್ಪದಗೊಳಿಸುವಂತಿದೆ. ದೇಶದ ಸಂಕೀರ್ಣ ಸಾಂಸ್ಕೃತಿಕ ನಡೆಗಳನ್ನು ಬಂಡವಾಳವಾಗಿ, ತಮ್ಮ ಪಂಥೀಯ ರಾಜಕೀಯ ಹೋರಾಟಕ್ಕೆ ಬಳಸಿಕೊಳ್ಳುವುದು ಸಂಸ್ಕೃತಿಗೆ ಮಾಡುವ ಅಪಚಾರವೇ ಸರಿ. ಅಲ್ಲದೆ ಇದು ತಮ್ಮ ವಿರೋಧಿಗಳನ್ನು ಇನ್ನಷ್ಟು ಕೆರಳಿಸಿ ಉಂಟುಮಾಡುತ್ತಿರುವ ರಾಜಕೀಯ ಸಮರೋತ್ಸಾಹದಂತೆಯೂ ಕಾಣುತ್ತಿದೆ. ಇದರ ಪರಿಣಾಮವೋ ಎಂಬಂತೆ ಕುಪ್ಪಳ್ಳಿಯ 'ಕವಿ ಮನೆ'ಯನ್ನು ಹೊಕ್ಕ 'ಕಳ್ಳರು' ಅಲ್ಲಿ ಪ್ರದರ್ಶನಕ್ಕಿಟ್ಟಿದ್ದ ಕವಿಯ ಪ್ರಶಸ್ತಿಗಳನ್ನು ಕದ್ದೊಯ್ದು ಇವರಿಗೆ 'ಉತ್ತರ' ನೀಡಿದಂತೆ ಕಾಣುತ್ತದೆ. ಇದು ನಿಜವಾಗಿದ್ದರೆ ಇನ್ನಷ್ಟು ಅಶಾಂತಿ ಖಚಿತ. ಇದನ್ನು ಈಗಲೇ ಚಿವುಟಿಹಾಕಬೇಕಿದೆ.

ಮೋದಿ ಸರ್ಕಾರದ ವಿರುದ್ಧ ಹೋರಾಟ ಮಾಡಬಯಸುವವರು ಹೋರಾಟ ಮಾಡಲಿ. ಅದು ಅವರ ಹಕ್ಕು. ಆದರೆ ರಾಜ್ಯದಲ್ಲಿ ಇವರ ಈ ಸದ್ಯದ ಹೋರಾಟ ಕಲ್ಬುರ್ಗಿಯವರ ಹತ್ಯೆಯನ್ನು ಮುಂದಿಟ್ಟುಕೊಂಡು ಈ ಹತ್ಯೆಯ ಇಡೀ ಜವಾಬ್ದಾರಿಯನ್ನು ಕೇಂದ್ರ ಸರ್ಕಾರದ ಮೇಲೆ ಹೊರಿಸುವ ರಾಜಕಾರಣದ ಒಂದು ಭಾಗವಾಗಿಯೂ ಕಾಣುತ್ತಿದೆ. ಮೊನ್ನೆ ನೋಡಿ, ರಾಜ್ಯೋತ್ಸವ ಪ್ರಶಸ್ತಿಗಳನ್ನು ಸ್ವೀಕರಿಸಲು ನಮ್ಮ ಯಾವ 'ಪ್ರಗತಿಪರ' ಸಾಹಿತಿ-ಬುದ್ಧಿಜೀವಿಗೂ ಕಲ್ಬುರ್ಗಿ ಹತ್ಯೆ ಅಡ್ಡಿಯಾಗಲಿಲ್ಲ! ಈ ಸಂಬಂಧದ ನಿರ್ಲಜ್ಜೆಯ ಪರಮಾವಧಿ ಎಂದರೆ, ಪ್ರಶಸ್ತಿ ಸ್ವೀಕರಿಸಿದ ಇಂತಹ ಮಹನೀಯರೊಬ್ಬರು ಟಿವಿ ವಾಹಿನಿಯೊಂದಕ್ಕೆ ನೀಡಿದ ಈ ಹೇಳಿಕೆ: "ಕಲ್ಬುರ್ಗಿ ಹತ್ಯೆಯ ಹಿನ್ನೆಲೆಯಲ್ಲಿ ಪ್ರಶಸ್ತಿ ಸ್ವೀಕರಿಸಲು ನಮಗೆ ಬಹಳ ಮುಜುಗರ-ಸಂಕೋಚಗಳಾಗುತ್ತಿದ್ದು, ಈ ಮುಜುಗರ-ಸಂಕೋಚಗಳೊಂದಿಗೇ ಪ್ರಶಸ್ತಿ ಸ್ವೀಕರಿಸಲು ಬೆಂಗಳೂರಿಗೆ ಹೋಗುತ್ತಿದ್ದೇವೆ"! ಹಾಗೆ ನೋಡಿದರೆ ಇಂತಹ ನಿರ್ಲಜ್ಜ ಮುಜುಗರ-ಸಂಕೋಚಗಳಿಗೆ ಸಿಕ್ಕಿರುವ ಸಾಹಿತಿ-ಬುದ್ಧಿಜೀವಿ ರಾಜ್ಯದಲ್ಲಿ ಇವರೊಬ್ಬರೇ ಅಲ್ಲ!

ನಮ್ಮ ಹಿರಿಯ ವಿಚಾರವಾದಿ ಜಿ.ಕೆ. ಗೋವಿಂದ ರಾಯರ 'ಮನು v/s ಅಂಬೇಡ್ಕರ್' ಎಂಬ ಶೀರ್ಷಿಕೆಯುಳ್ಳ ಪುಸ್ತಕವೊಂದನ್ನು ಇತ್ತೀಚೆಗೆ ಓದಿದೆ. ಆಶ್ಚರ್ಯವೆಂದರೆ, ಇದರಲ್ಲಿ ಎಲ್ಲಿಯೂ ಅಂಬೇಡ್ಕರ್‌ರೂ ಇಲ್ಲ; ಮನುವೂ ಇಲ್ಲ. ಬಹುಶಃ ಮಾರುಕಟ್ಟೆ ಉದ್ದೇಶದಿಂದ ಲಡಾಯಿ ಪ್ರಕಾಶನದವರು ಈ ಶೀರ್ಷಿಕೆ ಕೊಟ್ಟಿರಬಹುದು! ವಾಸ್ತವವಾಗಿ ಇದು ಗೋವಿಂದರಾಯರು ಪೇಜಾವರ ಶ್ರೀಗಳು ಕ್ರಾಂತಿಕಾರಿಯಾಗುವಂತೆ ಮನವೊಲಿಸಲು ಅವರಿಗೆ ಬರೆದಿರುವ ದೀರ್ಘ ಬಹಿರಂಗ ಪತ್ರ! ನಮ್ಮ ವಿಚಾರವಾದ ಎಲ್ಲಿಂದ ಎಲ್ಲಿಯವರೆಗೆ ಹರಿದಿದೆ ಎಂದು ತಿಳಿಯಲು ಇದನ್ನು ಓದಬಹುದು!




**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಕೊಟ್ಟ ಕುದರೆಯನೇರಲರಿಯದೆ...** ಸಂ: **ರಾಜಾರಾಮ ಹೆಗಡೆ** ಹಾಗೂ **ಷಣ್ಮುಖ ಎ** ಪ್ರ: **ನಿಲುಮೆ,** ಶಿರ್ಸಿ ಪು: **೪೬೮** ಬೆಲೆ: **ರೂ. ೩೩೦/-**

# ಲೋಕದ ಡೊಂಕನ್ನು ನೀವೇಕೆ ತಿದ್ದುವಿರಿ...




**ವ**ಚನಸಾಹಿತ್ಯ ಅಧ್ಯಯನವನ್ನೇ ಕೇಂದ್ರವಾಗಿಟ್ಟುಕೊಂಡು ವಿವಿಧ ವಿದ್ವಾಂಸರು ನಡೆಸಿರುವ/ನೀಡಿರುವ ಅಧ್ಯಯನ-ಚರ್ಚೆ-ಸ್ಪಷ್ಟೀಕರಣಗಳನ್ನೊಳಗೊಂಡ ಈ ಪುಸ್ತಕ, 'ವಚನಗಳ ಅಧ್ಯಯನದಲ್ಲಿ ಆಧುನಿಕರ ಪೂರ್ವಗ್ರಹಗಳು ಮತ್ತು ಅವುಗಳಾಚೆಗೆ' ಎಂಬ ಉಪಶೀರ್ಷಿಕೆಯನ್ನೂ ಹೊಂದಿದೆ. ಈ ಉಪಶೀರ್ಷಿಕೆಯೇ ಪರೋಕ್ಷವಾಗಿ ಸೂಚಿಸುವಂತೆ, ನಮ್ಮ ಸಮಾಜದೊಳಗಿದ್ದ ಜಾತಿ, ಮತ, ಲಿಂಗ ಹಾಗೂ ಕಸುಬುಗಳ ನಡುವಣ ಅಸಮಾನತೆಯನ್ನು ವಿರೋಧಿಸುವ ನೆಲೆಯಲ್ಲಿ ವಚನ ಸಾಹಿತ್ಯ ಬೆಳೆದು ಬಂದಿದೆ ಎಂಬ ಪ್ರಚಲಿತ ನಂಬಿಕೆಯನ್ನು ಈ ಪುಸ್ತಕ ವಿವಿಧ ವಾದಗಳ ಮೂಲಕ ಪ್ರಶ್ನಿಸುವ ಪ್ರಯತ್ನ ಮಾಡುತ್ತದೆ.

ಈ ಸಂಕಲನದ ಎಲ್ಲ ಲೇಖನಗಳ ಮುಖ್ಯ ಸಮಸ್ಯೆಯೆಂದರೆ, ಇವು ಒಂದು ನಿಶ್ಚಿತ ತಾತ್ವಿಕತೆಯನ್ನು ಎದುರಿಗಿಟ್ಟುಕೊಂಡು ಯಾವುದೇ ಚರ್ಚೆಯನ್ನು ಇಲ್ಲಿ ಬೆಳೆಸುವುದಿಲ್ಲ. ಇಲ್ಲಿಯ ಒಂದೊಂದು ಬರಹವು ಕೂಡ ಪೂರ್ವಗ್ರಹ ಹಾಗೂ ಅರಾಜಕೀಯ ನಿಲುವುಗಳಿಂದ ಕೂಡಿದೆ. ಈ ನಿಲುವುಗಳು ಕೇವಲ ಬೌದ್ಧಿಕ ಕಸರತ್ತಿಗೆ ಮಾತ್ರ ಸೀಮಿತವಾದದ್ದಲ್ಲ; ಬದಲಾಗಿ ಸಮೂಹಗಳ ರಚನೆ ಹಾಗೂ ಅಸ್ತಿತ್ವಗಳನ್ನೂ ಕುರಿತಾಗಿವೆ. ಈ ದೇಶದ ಸಾಮಾಜಿಕ ವಿದ್ಯಮಾನಗಳನ್ನು ಕುರಿತ ಒಂದೊಂದು ಹೇಳಿಕೆಯನ್ನು ಪ್ರಕಟಗೊಳಿಸಲು, ನಾವು ಏನನ್ನು ನೆಲೆಯಾಗಿಸಿಕೊಳ್ಳಬೇಕು ಎಂಬ ಸವಾಲು ಈ ಹೊತ್ತಿಗೆಯ ಯಾವುದೇ ಬರಹಗಾರರಿಗೆ ಕಾಡದೇ ಇರುವುದು ಅತ್ಯಂತ ಸೋಜಿಗದ ಸಂಗತಿಯಾಗಿದೆ.

ಜಾತಿ, ಧರ್ಮ, ಜನಾಂಗ ಹಾಗೂ ಜ್ಞಾನಶಿಸ್ತುಗಳಿಗೆ ಸಂಬಂಧಿಸಿದ ಸಂಕಥನ ಹಾಗೂ ನಿರೂಪಣೆಗಳನ್ನು ಬಿಡಿಸಿ ನೋಡುವಾಗ ಒಂದು ತಾತ್ವಿಕ ಚೌಕಟ್ಟಿನ ಅಗತ್ಯತೆ ಇರುತ್ತದೆ. ಅಂದರೆ, ಈ ತಾತ್ವಿಕತೆಯನ್ನು ಹೇಗೆ ಬೇಕಾದರೂ ರೂಪಿಸಿಕೊಳ್ಳುವುದು ಎಂದರ್ಥವಲ್ಲ. ಬದಲಾಗಿ, ಆಯಾ ಸಂಕಥನ ಮತ್ತು ನಿರೂಪಣೆಗಳು ನೆಲೆಗೊಳ್ಳಲು ಕಾರಣವಾಗಿರುವ ವಿನ್ಯಾಸಗಳನ್ನು ಪರಿಗಣಿಸಲೇಬೇಕಾಗುತ್ತದೆ. ಒಂದೊಂದು ಜ್ಞಾನಶಿಸ್ತಿಗೆ ತನ್ನದೇ ಆದ ವಿವೇಚನೆಯ ಹಾಗೂ ತಾತ್ವಿಕ ಆಯಾಮಗಳಿರುತ್ತವೆ. ಈ ಆಯಾಮಗಳು ಕಣ್ಣಿಗೆ ರಾಚುವ ವಿವರಗಳಾಗಿ ನೆಲೆಗೊಳ್ಳದೇ, ಆಯಾ ವಿಷಯವನ್ನು ಕಟ್ಟಿಕೊಡುವ ತಿಳುವಳಿಕೆಯಲ್ಲಿ ಅಂತಸ್ಥವಾಗಿರುತ್ತವೆ. ಆದರೆ ಈ ಪ್ರಸ್ತುತ ಪುಸ್ತಕವು ವಚನಗಳಲ್ಲಿ ಜಾತಿಯ ಪ್ರಶ್ನೆಗಳನ್ನು ಕುರಿತು ಮಾತನಾಡುವಾಗೆಲ್ಲ ಅವುಗಳನ್ನು ಕೇವಲ ಶೇಕಡವಾರು ವಿವರಗಳಲ್ಲಿ ಮಾತ್ರ ಚರ್ಚಿಸುತ್ತದೆ. ಅಂದರೆ ವಚನ ಚಳುವಳಿ ಮಂಡಿಸುವ ಸಾಮಾಜಿಕ ವಾಸ್ತವಗಳನ್ನು ಗುರುತಿಸಲು ಸಾಧ್ಯವಾಗದಿದ್ದಾಗ ಇಂತಹ ವೈಚಾರಿಕ ದೋಷಗಳಾಗುತ್ತವೆ.

'ಜಾತಿ' ಕುರಿತ ಈ ಪುಸ್ತಕದ ವಿಶ್ಲೇಷಣೆಗಳು, ವಾಸ್ತವ ಮತ್ತು ನಿಜ (ರಿಯಲ್) ಎಂಬ ದ್ವಂದ್ವವನ್ನು ಹುಟ್ಟುಹಾಕುತ್ತವೆ. ಯಾವ ತತ್ವಶಾಸ್ತ್ರೀಯ ಮೂಲದಿಂದ ಇಂತಹ ಪರಿಕಲ್ಪನೆಗಳನ್ನು ಇವರು ಪಡೆದುಕೊಳ್ಳುತ್ತಾರೋ, ಆ ತಾತ್ವಿಕತೆಗೂ ಮತ್ತು ವಚನ ಚಳುವಳಿಯ ತಾತ್ವಿಕತೆಗೂ ಯಾವುದೇ ಹೊಂದಾಣಿಕೆ ಇರುವುದಿಲ್ಲ. ಹಾಗಾಗಿ ಅಸ್ತಿತ್ವದ ಪಾತಳಿಗಳನ್ನು ನಿಜ(ರಿಯಲ್) ಎಂದು ಗೊಂದಲ ಮಾಡಿಕೊಂಡರೆ ಸುಳ್ಳಿನಲ್ಲಿ ಸಿಲುಕಿಕೊಳ್ಳುತ್ತೇವೆ ಎಂಬ ವಾದವನ್ನೂ ಈ ಪುಸ್ತಕ ಮಂಡಿಸುತ್ತದೆ. ಜಾತಿ, ಧರ್ಮ, ಲಿಂಗ ಹಾಗೂ ಜ್ಞಾನ ಮೊದಲಾದವುಗಳು ಕೇವಲ ಭಾಷಿಕ ರಚನೆಗಳಲ್ಲ, ಇವುಗಳು ಸಾಮಾಜಿಕ ವಾಸ್ತವಗಳು. ಆದರೆ ಈ ಪುಸ್ತಕದ ವೈಚಾರಿಕತೆ ಇಂತಹ ವಾಸ್ತವಗಳನ್ನು ನಿರಾಕರಿಸುತ್ತದೆ.

ಭಕ್ತಿ ಸಂಪ್ರದಾಯಗಳನ್ನು ಬಿಡಿಸಿ ನೋಡುವ ಈ ಪುಸ್ತಕದ ಕ್ರಮಗಳನ್ನು ಇಲ್ಲಿ ಒರೆಗೆ ಹಚ್ಚಿ ನೋಡುವ ಜರೂರಿದೆ. ಏಕೆಂದರೆ ಈ ಪುಸ್ತಕವು ಬದುಕಿನ ಅನುಭವವನ್ನೇ ನಿರಾಕರಿಸುತ್ತದೆ. ಹಾಗೂ ಸಂಸ್ಕೃತಿಯ ಗುರುತುಗಳನ್ನು ಕೇವಲ ಅನ್ಯ ಮಾದರಿಗಳೊಂದಿಗೆ ಹೋಲಿಕೆ ಮಾಡಿ, ಇವುಗಳ ಅಸ್ತಿತ್ವವನ್ನೇ ಅಮಾನ್ಯ ಮಾಡುವ ಹುನ್ನಾರವನ್ನೂ ಈ ಪುಸ್ತಕದ ಬರಹಗಳು ಮಾಡುತ್ತವೆ. ಅಂದರೆ ಕರ್ನಾಟಕದ ಸಮೂಹಗಳು ರೂಪಿಸಿಕೊಂಡಿದ್ದ ಜ್ಞಾನಶಿಸ್ತುಗಳನ್ನೇ ಅಪರಾಧೀಕರಣಗೊಳಿಸುವ ಬಗೆಗಳನ್ನು ಇಲ್ಲಿ ಕಾಣಬಹುದಾಗಿದೆ. ಹಾಗಾಗಿ ಜಾತಿಯನ್ನು ಕುರಿತ ಚರ್ಚೆಗಳು ಅನೈತಿಕ ಸಾಧನಗಳನ್ನು (ತರ್ಕ ಹಾಗೂ ವಿಶ್ವವಿದ್ಯಾನಿಲಯದ ಶಿಕ್ಷಣ) ಬಳಸಿ ಈಗಿರುವ ತಿಳುವಳಿಕೆಯನ್ನು ಬುಡಮೇಲು ಮಾಡಲು ಹೊರಟಂತೆ ಭಾಸವಾಗುತ್ತದೆ (ಪು: ೮೧) ಎಂಬ ಇವರ ಅನುಮಾನಗಳೇ ಜ್ಞಾನಶಿಸ್ತುಗಳ ಅಪರಾಧೀಕರಣದ ಸೂಚಕಗಳಾಗಿರುತ್ತವೆ.

ಪ್ರಸ್ತುತ ಸಮುದಾಯಗಳ ಅಸ್ತಿತ್ವದ ರಚನೆ ಹಾಗೂ ಸ್ವರೂಪವನ್ನು ವೇದ-ವೈದಿಕ ಮಾರ್ಗಗಳಿಂದ ಬಿಡಿಸಿ ನೋಡಲಾಗುತ್ತಿದೆ. ಇದು ತಕ್ಕುದಾದ ಮಾದರಿಯಲ್ಲ. ಏಕೆಂದರೆ, ಭಕ್ತಿ ಪಂಥಗಳ ಬಹುತೇಕ ಆಲೋಚನಾ ಮಾದರಿ ಹಾಗೂ ಜ್ಞಾನಶಿಸ್ತುಗಳ ವಿನ್ಯಾಸವು ಶ್ರಮ ಸಂಸ್ಕೃತಿಯನ್ನು ನೆಲೆಯಾಗಿಸಿಕೊಂಡು ಮುಂಚೂಣೆಗೆ ಬಂದಿವೆ. ಆದರೆ ಸಂಸ್ಕೃತದ ಹಾಗೇ ಇವುಗಳು ಜ್ಞಾನಶಿಸ್ತೀಯ ಸ್ವರೂಪವನ್ನು ಪಡೆದುಕೊಳ್ಳದೇ, ಕೇವಲ ಸಾಮಾಜಿಕ ವಾಸ್ತವಗಳಾಗಿ ನೆಲೆನಿಂತಿರುತ್ತವೆ. ಕೆಳಜಾತಿಗೆ ಸೇರಿದ ಶಿವಶರಣರ ವಚನದ ಮಾತುಗಳು ಕೆಟ್ಟ ಬಯ್ಗುಳದಂತೆ ಕಾಣುತ್ತವೆ ಎಂದು ಆರೋಪಿಸಲಾಗುತ್ತದೆ. ವಾಸ್ತವದಲ್ಲಿ ಇವುಗಳು ಬಯ್ಗುಳಗಳಲ್ಲ; ಬದಲಾಗಿ ಅವುಗಳು ಸಾಮಾಜಿಕ ವಾಸ್ತವಗಳಾಗಿರುತ್ತವೆ. ಆದ್ದರಿಂದ ಸತ್ಯದ ಕಲ್ಪನೆಯು ಯಾವಾಗಲೂ ಈ ಸಾಮಾಜಿಕ ವಾಸ್ತವಗಳನ್ನು ಕುರಿತೇ ಇರುತ್ತವೆ ಎಂಬುದನ್ನು ಅರಿಯಬೇಕಿದೆ. ಇಲ್ಲಿ ಸತ್ಯವೆಂಬುದು ಏಕರೂಪಿಯಲ್ಲ; ಅದು ಬಹುತ್ವದಿಂದ ಕೂಡಿದ ವಿದ್ಯಮಾನವಾಗಿರುತ್ತದೆ. ಇಂತಹ ಬಹುಳತೆಯನ್ನು ಭ್ರಮೆ ಇಲ್ಲವೇ ಮಾಯೆ ಎಂದು ಬಣ್ಣಿಸುವುದು ತಪ್ಪಾಗುತ್ತದೆ. ಸತ್ಯವನ್ನು ಲೌಕಿಕ ಹಾಗೂ ಪಾರಮಾರ್ಥಿಕ ಎಂದಾಗಿ ಗುರುತಿಸುವುದೂ ಕೂಡ ಒಂದು ರಾಜಕಾರಣವೇ ಆಗಿರುತ್ತದೆ. "ವಚನಗಳ ಸಂದರ್ಭದಲ್ಲಿ ಅವುಗಳನ್ನು ಆಧ್ಯಾತ್ಮಿಕ ಸಂದರ್ಭದಿಂದ ಬೇರ್ಪಡಿಸಿ ನೋಡುವುದು ಒಂದು ವೈಧಾನಿಕ ದೋಷವಾಗುತ್ತದೆ" (ಪು: ೪೮). ಎಂಬ ಹೇಳಿಕೆಯೇ ಸತ್ಯದ ಲೌಕಿಕ ಹಾಗೂ ಪಾರಮಾರ್ಥಿಕ ವಿನ್ಯಾಸಗಳ ನಡುವಣ ಬಿಕ್ಕಟ್ಟನ್ನು ಸೂಚಿಸುತ್ತದೆ. ಭಕ್ತಿ ಪಂಥಗಳ ತಾತ್ವಿಕತೆಯೇ ಇವರಿಗೆ ಅರ್ಥವಾಗಿರುವುದಿಲ್ಲ. ಏಕೆಂದರೆ ಸೆಮೆಟಿಕ್(ಮಧ್ಯಪ್ರಾಚ್ಯ ಮೂಲವಾದ) ರಿಲಿಜನ್ನುಗಳಿಗೂ ಹಾಗೂ ವಚನ ಚಳುವಳಿಗೂ ಹೋಲಿಕೆ ಮಾಡುವ ಇವರ ನಿಲುವುಗಳೇ ಅತ್ಯಂತ ದೋಷದಿಂದ ಕೂಡಿರುತ್ತವೆ. ಆದರೆ ವೈದಿಕ ಮಾರ್ಗಗಳಿಗೂ ಮತ್ತು ಸೆಮೆಟಿಕ್ ರಿಲಿಜನ್ನುಗಳ ನಡುವೆ ಸಮಾನ ಹೋಲಿಕೆಯನ್ನು ಕಾಣಬಹುದು. ಏಕೆಂದರೆ, ಇವೆರಡೂ ಧರ್ಮಗಳು ತಮ್ಮದೊಂದೇ ಸತ್ಯವಾದ ಮಾರ್ಗವೆಂದು ನಂಬಿರುತ್ತವೆ. ಹಾಗಾಗಿ ವೈದಿಕ ಅವೈದಿಕ ಪಂಥಗಳ ನಡುವೆ ಅಗಾಧವಾದ ಬಿರುಕುಗಳು ಉಂಟಾಗಲು ಇವುಗಳೂ ಕಾರಣವಾಗಿರುತ್ತವೆ.

ಸಂಸ್ಕೃತಿಯ ಮೂಲ ಕಲ್ಪನೆಗಳು ತನ್ನ ನುಡಿಯನ್ನು, ಗ್ರಹಿಕೆಯ ರಚನೆಗಳನ್ನು, ತನ್ನೊಳಗಿನ ಕೊಡುಕೊಳ್ಳುವಿಕೆಯ ವಿನ್ಯಾಸಗಳನ್ನು, ಸಾಮಾಜಿಕ ಮೌಲ್ಯಗಳನ್ನು, ಸಾಮಾಜಿಕ ಭಿನ್ನ ಮಾದರಿಗಳನ್ನು ಹಾಗೂ ಅವುಗಳ ಒಳಗೆಯೇ ನಡೆಯುತ್ತಿರುವ ತರತಮದ ಆಚರಣೆಗಳನ್ನು ಹೇಗೆ ನಿಭಾಯಿಸುತ್ತವೆ ಎನ್ನುವುದು ಮಹತ್ವದ ಸಂಗತಿಯಾಗಿರುತ್ತದೆ. ಏಕೆಂದರೆ ಇವುಗಳೇ ಸಮುದಾಯಗಳನ್ನು ಅರಿಯುವ ಸೂಚಕಗಳಾಗಿ ಇಲ್ಲಿ ಕೆಲಸ ಮಾಡುತ್ತವೆ. ಹಾಗಂತ ಈ ಸೂಚಕಗಳನ್ನು ಕೇವಲ ಮಾಹಿತಿಗಳನ್ನಾಗಿ ಬಳಸಲು ಸಾಧ್ಯವಿಲ್ಲ. ಹಾಗೇನಾದರೂ ಮಾಡಿದರೆ ಅರಿವು, ವೈಚಾರಿಕತೆ ಹಾಗೂ ತಾತ್ವಿಕತೆ ಎನ್ನುವುದನ್ನು ಅಂಕಿ-ಸಂಖ್ಯೆಗಳ ಸ್ವರೂಪದಲ್ಲಿ ಮಾತ್ರ ವಿವರಿಸಬೇಕಾಗುತ್ತದೆ. ಸಂಸ್ಕೃತಿಯ ಅಧ್ಯಯನಕ್ಕೆ ಇದು ತಕ್ಕುದಾದ ಮಾದರಿಯಾಗುವುದಿಲ್ಲ. ಸಮಾಜವಿಜ್ಞಾನಗಳ ಚಿಂತನೆಗಳು ಸಮುದಾಯಗಳಿಗೆ ಹೊರತಾಗಿರುವುದಿಲ್ಲ. ಸಮುದಾಯಗಳ ಅನುಭವದ ಆಧಾರದ ಮೇಲೆ ಹುಟ್ಟಿದ ಜ್ಞಾನವನ್ನು ಕುರಿತೇ ಈ ಜ್ಞಾನಶಿಸ್ತುಗಳು ಹುಟ್ಟಿಕೊಳ್ಳಬೇಕು. ಆದರೆ ಈ ಪುಸ್ತಕದ ಲೇಖನಗಳು ಈ ಎಲ್ಲ ಸಂಗತಿಗಳನ್ನು ಮರೆಮಾಚುತ್ತದೆ.

**-ಡಾ. ಮೇಟಿ ಮಲ್ಲಿಕಾರ್ಜುನ**

'ಹೊಸ ಮನುಷ್ಯ' ಓದುಗರಿಗೆ
ಹಾರ್ದಿಕ ಶುಭಾಶಯಗಳು

**–ಕರುಣಾ ಜೀವ ಕಲ್ಯಾಣ ಟ್ರಸ್ಟ್**
**ದಾವಣಗೆರೆ**



**ನಮ್ಮ ಉಚಿತ ಸೇವೆಗಳು:**

–ನಿಗದಿತ ದಿನ–ಸ್ಥಳಗಳಲ್ಲಿ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆಯ ಶಿಬಿರಗಳು
–ಪ್ರತಿ ದಿನ ೧೫–೨೦ ಜನಕ್ಕೆ ಕಡಿಮೆ ದರದಲ್ಲಿ ಔಷಧ ಸಾಮಗ್ರಿಗಳ ವಿತರಣೆ
–ಶಾಲಾ ಕಾಲೇಜುಗಳಲ್ಲಿನ ಹದಿಹರೆಯದ ಹೆಣ್ಣು ಮಕ್ಕಳಿಗೆ ಉಚಿತ ವೈದ್ಯಕೀಯ ಸಲಹೆ
–ತಂದೆ–ತಾಯಿಗಳಿಲ್ಲದ, ಶಾಲಾ ಕಾಲೇಜುಗಳಲ್ಲಿನ ಹೆಣ್ಣು ಮಕ್ಕಳಿಗೆ ಸಹಾಯಧನ
–ದಾನಿಗಳ ಮುಖಾಂತರ ಶಿಕ್ಷಣ ಸಂಸ್ಥೆಗಳಿಗೆ ಪೀಠೋಪಕರಣ, ವಿದ್ಯಾರ್ಥಿ ಸಮವಸ್ತ್ರಗಳ ಪೂರೈಕೆ
–ಶಾಲಾ ಕಾಲೇಜುಗಳಲ್ಲಿ ಪರಿಸರ ಸಂರಕ್ಷಣೆಯ ಪ್ರಾಯೋಗಿಕ ಪಾಠಗಳು
–ಪಶು–ಪಕ್ಷಿಗಳಿಗೆ ನೀರುಣಿಸಲು ಸಾರ್ವಜನಿಕರಿಗೆ ಬಾನಿಗಳ ನೀಡಿಕೆ

ಹೊಸ ಮನುಷ್ಯ ಓದುಗರೆಲ್ಲರಿಗೆ
ಕ್ರಿಸ್‌ಮಸ್ ಶುಭಾಶಯಗಳು



**-ದವಲ್ ಸಾಬ್ ಅರಳಿಕಟ್ಟೆ**
**ಮತ್ತು ಕುಟುಂಬ**

ಫ್ಯಾಬ್ರಿಕೇಷನ್ ಗುತ್ತಿಗೆದಾರರು
ಯಾಲಕ್ಕಿ ಶೆಟ್ರ ಕಾಲೋನಿ
ಧಾರವಾಡ

**'ಹೊಸ ಮನುಷ್ಯ' ಓದುಗರಿಗೆ**
**ಹಾರ್ದಿಕ ಶುಭಾಶಯಗಳು**



**-ಕೆ. ಜಿ. ಶ್ರೀನಿವಾಸ್**

**ಸಪ್ತಗಿರಿ ಲ್ಯಾಂಡ್ ಡೆವಲಪರ್ಸ್**

**ನಂ. 301, ಸಪ್ತಗೃಹ ಅಪಾರ್ಟ್‌ಮೆಂಟ್ಸ್**

**2ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ**

**ಮಲ್ಲೇಶ್ವರಂ, ಬೆಂಗಳೂರು - 560 003**


## ತಿಂಗಳ ಸಾಲುಗಳು...



ನೀವು ನಿಮ್ಮ ಶತ್ರುಗಳನ್ನು ಪ್ರೀತಿಸಿ. ನಿಮಗೆ ಹಿಂಸೆ ಕೊಟ್ಟವರಿಗೆ ಒಳಿತಾಗಲೆಂದು ಪ್ರಾರ್ಥಿಸಿ. ಹೀಗೆ ಮಾಡಿದಾಗಲೇ ನೀವು ತಂದೆಗೆ ತಕ್ಕ ಮಕ್ಕಳೆನಿಸುವಿರಿ. ಏಕೆಂದರೆ ಆತನು ಒಳ್ಳೆಯವರ ಮೇಲೂ, ಕೆಟ್ಟವರ ಮೇಲೂ ಸೂರ್ಯಪ್ರಕಾಶ ಚೆಲ್ಲುತ್ತಾನೆ. ನೀತಿವಂತರ ಮೇಲೂ, ಅನೀತಿವಂತರ ಮೇಲೂ ಮಳೆ ಸುರಿಸುತ್ತಾನೆ.

–ಬೈಬಲ್

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**


HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)